ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಜುಲೈ 15, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 62 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

# ಚಂದ್ರಯಾನ ಉಡಾವಣೆ ಯಶಸ್ವಿ



**ಆ.23ರಂದು ಚಂದ್ರ ಸ್ಪರ್ಷ**

## ಚಂದ್ರನ ಅಧ್ಯಯನಕ್ಕೆ ರಂಭ-ಇಲ್ಸಾ

ನವದೆಹಲಿ, ಜು. 14 - ಚಂದ್ರನ ಅಧ್ಯಯನಕ್ಕಾಗಿ ಆರು ಉಪಕರಣಗಳನ್ನು ಚಂದ್ರಯಾನ - 3ರ ಮೂಲಕ ರವಾನಿಸಲಾಗಿದೆ. ರಂಭಾ ಹಾಗೂ ಇಲ್ಸಾ ಹೆಸರಿನ ಉಪಕರಣಗಳೂ ಸಹ ಇದರಲ್ಲಿ ಸೇರಿವೆ. 14 ದಿನಗಳ ಅವಧಿಯಲ್ಲಿ ಈ ಎರಡೂ ಉಪಕರಣ ಗಳು ಮಹತ್ವದ ಪ್ರಯೋಗಗಳನ್ನು ನಡೆಸಲಿವೆ. ಚಂದ್ರನ ಮೇಲೆ ವಾತಾವರಣ ಇಲ್ಲ ಎಂಬುದು ನಮಗೆ ತಿಳಿದಿದೆ. ಆದರೂ, ಅಲ್ಲಿ ಕೆಲ ಅನಿಲ ಗಳಿವೆ. ಅವು ನೆಲಕ್ಕೆ ಹತ್ತಿರದಲ್ಲಿರುತ್ತವೆ. ಆ ಕುರಿತು ಅಧ್ಯಯನ ಮಾಡಲಾಗು ವುದು ಎಂದು ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ.

ಶ್ರೀಹರಿಕೋಟ, ಜು. 14 - ಮಹತ್ವಾಕಾಂಕ್ಷಿ ಮೂರನೇ ಚಂದ್ರಯಾನ ಉಡಾವಣೆಯಲ್ಲಿ ಇಸ್ರೋ ಯಶಸ್ಸು ಕಂಡಿದ್ದು, ಆಗಸ್ಟ್ 23ರ ಸಂಜೆ 5.47ಕ್ಕೆ ಚಂದ್ರನ ಮೇಲೆ ಇಳಿಯಲಿದೆ.

ಚಂದ್ರಯಾನ - 3 ಯಶಸ್ವೀ ಉಡಾವಣೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್, ಆಗಸ್ಟ್ 1ರಂದು ಉಪಗ್ರಹವನ್ನು ಚಂದ್ರನ ಕಕ್ಷೆಗೆ ಸೇರ್ಪಡೆ ಮಾಡಲು ಯೋಜಿಸಲಾಗಿದೆ ಎಂದರು.

ಉಡಾವಣೆಯಾದ ಒಂದು ತಿಂಗಳಿಗೂ ಹೆಚ್ಚು ಕಾಲದ ನಂತರ ಆಗಸ್ಟ್ 23ರ ಸಂಜೆ 5.47ಕ್ಕೆ ಚಂದ್ರನ ಮೇಲೆ ಇಳಿಸಲಾಗುವುದು.

ಎಲ್.ವಿ.ಎಂ.3-ಎಂ4 ರಾಕೆಟ್ ಮೂಲಕ ಚಂದ್ರಯಾನ - 3 ಉಡಾವಣೆಯನ್ನು ಶುಕ್ರವಾರ ಯಶಸ್ವಿಯಾಗಿ ನೆರವೇರಿಸಲಾ ಯಿತು. ಅಮೆರಿಕ, ಚೀನ ಹಾಗೂ ಮಾಜಿ ಸೋವಿಯತ್ ಒಕ್ಕೂಟ ಮಾತ್ರ ಇದುವರೆಗೂ ಚಂದ್ರಯಾನದಲ್ಲಿ ಯಶಸ್ಸು ಕಂಡಿವೆ. ಆಗಸ್ಟ್ 1ರಂದು ನಾವು ಚಂದ್ರನ ಕಕ್ಷೆಗೆ ಸೇರ್ಪಡೆಯಾಗಲಿದ್ದೇವೆ. ನಂತರ ಆಗಸ್ಟ್ 17ರಂದು ಪ್ರಪಲ್ಷನ್ ಮೊಡ್ಯೂಲ್ ಹಾಗೂ ಲ್ಯಾಂಡರ್ ಮೊಡ್ಯೂಲ್ ಪ್ರತ್ಯೇಕವಾಗಲಿವೆ. ಅಂತಿಮವಾಗಿ ಆಗಸ್ಟ್ 23ರ ಸಂಜೆ 5.47ರ ವೇಳೆಗೆ ಚಂದ್ರನ ಮೇಲೆ ಲ್ಯಾಂಡರ್ ಇಳಿಯಲಿದೆ ಎಂದು ಸೋಮನಾಥ್ ತಿಳಿಸಿದ್ದಾರೆ.

ಈ ಹಿಂದೆ 2019ರಲ್ಲಿ ವಿಕ್ರಮ್ ಲ್ಯಾಂಡರ್ ಅನ್ನು ಚಂದ್ರನ ಮೇಲೆ ಇಳಿಸುವ ಪ್ರಯತ್ನದಲ್ಲಿ ವೈಫಲ್ಯ ಎದುರಾಗಿತ್ತು. ಈ ವೈಫಲ್ಯದ ಅಧ್ಯಯನ ನಡೆಸುತ್ತಿದ್ದ ಕಾರಣ ಮೂರನೇ ಚಂದ್ರಯಾನ ವಿಳಂಬವಾಗಿದೆ ಎಂದು ಸೋಮನಾಥ್ ತಿಳಿಸಿದರು.

ಚಂದ್ರಯಾನದ ದಕ್ಷಿಣ ಧ್ರುವವನ್ನು (2ನೇ ಪುಟಕ್ಕೆ)



**ನಿಟುವಳ್ಳಿಯಲ್ಲಿ ಅಜ್ಜಿ ಹಬ್ಬದ ಸಂಭ್ರಮ**

ಆಷಾಢ ಮಾಸದ ಕೊನೆಯ ಶುಕ್ರವಾರ ನಗರದ ವಿವಿಧೆಡೆ ಅಜ್ಜಿ ಹಬ್ಬವನ್ನು ಭಕ್ತಿಯಿಂದ ಆಚರಿಸಲಾಯಿತು. ನಿಟುವಳ್ಳಿಯಲ್ಲಿ ಅಜ್ಜಿ ಹಬ್ಬದ ಸಂಭ್ರಮ ಜೋರಾಗಿತ್ತು. ಇಲ್ಲಿನ ದುರ್ಗಾಂಬಿಕಾ ದೇವಸ್ಥಾನದ ಬಳಿ ಬೇವಿನ ಸೊಪ್ಪಿನಿಂದ ಕೂಡಿದ್ದ ಕುಡಿಕೆಗಳು ಹಾಗೂ ಎಡೆಯನ್ನು ಕೊಟ್ಟು ದೇವಿಯ ದರುಶನ ಪಡೆಯಲು ಜನ ಜಾತ್ರಿಯೋಪಾದಿಯಲ್ಲಿ ನೆರೆದಿತ್ತು.

# ಅಂಗನವಾಡಿ ಆಹಾರ ಕಳಪೆಯಾದರೆ ಅಧಿಕಾರಿಗಳ ಮೇಲೆ ಕ್ರಮ



ಬೆಂಗಳೂರು, ಜು.14 - ಅಂಗನವಾಡಿ ಕೇಂದ್ರದ ಮಕ್ಕಳಿಗೆ ಪೂರೈಕೆ ಮಾಡುವ ಆಹಾರ ಪದಾರ್ಥಗಳು ಕಳಪೆ ಗುಣಮಟ್ಟದಿಂದ ಕೂಡಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಕ್ಷಣವೇ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.

ವಿಧಾನಪರಿಷತ್ ಸದಸ್ಯ ವೈ.ಎ.ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕಳಪೆ ಗುಣಮಟ್ಟದ ಆಹಾರ ಸಾಮಗ್ರಿಗಳನ್ನು ಅಂಗನವಾಡಿ ಕೇಂದ್ರಗಳಿಗೆ ಪೂರೈಕೆ ಮಾಡಿರುವುದು ನನ್ನ ಗಮನಕ್ಕೆ ಬಂದಿದೆ ಎಂದರು. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ನಡೆಸಲಾಗಿದೆ. ಇದರಲ್ಲಿ ಯಾರೇ ಭಾಗಿಯಾಗಿದ್ದರೂ ಸುಮ್ಮನೆ ಬಿಡುವುದಿಲ್ಲ. ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸುವುದಾಗಿ ಎಚ್ಚರಿಕೆ ಕೊಟ್ಟರು.

ಗ್ರಾಮ ಪಂಚಾಯ್ತಿಯಿಂದ ಹಿಡಿದು ಜಿಲ್ಲಾಧಿಕಾರಿಗಳವರೆಗೂ (3ನೇ ಪುಟಕ್ಕೆ)

# ಮೋದಿಗೆ ಫ್ರಾನ್ಸ್‌ನ ಅತ್ಯುನ್ನತ ಗೌರವ



ಪ್ಯಾರಿಸ್, ಜು. 14 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಫ್ರಾನ್ಸ್‌ನ ಅತ್ಯುನ್ನತ ನಾಗರಿಕ ಹಾಗೂ ಸೈನಿಕ ಗೌರವವಾದ ಗ್ರಾಂಡ್ ಕ್ರಾಸ್ ಆಫ್ ದಿ ಲಿಜಿಯನ್ ಹಾನರ್ ಪ್ರದಾನ ಮಾಡಲಾಗಿದೆ. ಈ ಗೌರವಕ್ಕೆ ಪಾತ್ರರಾದ ಮೊದಲ ಭಾರತೀಯ ಪ್ರಧಾನಿ ಅವರಾಗಿದ್ದಾರೆ.

ಇಲ್ಲಿನ ಎಲಿಸಿ (3ನೇ ಪುಟಕ್ಕೆ)

# ಲೋಕಸಭಾ ಚುನಾವಣೆಗೆ ಸ್ಪರ್ಧೆ

## ಎಸ್.ಎ. ರವೀಂದ್ರನಾಥ್ ಭೇಟಿ ಮಾಡಿದ ಎಂ.ಪಿ. ರೇಣುಕಾಚಾರ್ಯ



ದಾವಣಗೆರೆ, ಜು. 14- ಮುಂಬರುವ ಲೋಕಸಭಾ ಚುನಾವಣೆಗೆ ಅವಕಾಶ ನೀಡಿದರೆ, ಸ್ಪರ್ಧಿಸಲು ಸಿದ್ಧರಿರುವುದಾಗಿ ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಹೇಳಿದ್ದಾರೆ.

ತಾಲ್ಲೂಕಿನ ಶಿರಮಗೊಂಡನಹಳ್ಳಿಯಲ್ಲಿ ಮಾಜಿ ಸಚಿವ, ಬಿಜೆಪಿ ಹಿರಿಯ ಮುಖಂಡ ಎಸ್.ಎ. ರವೀಂದ್ರನಾಥ್ ಅವರನ್ನು ಭೇಟಿ ಮಾಡಿದ ಬಳಿಕ ಅವರು ಪತ್ರಕರ್ತರೊಂದಿಗೆ ಮಾತನಾಡಿದ್ದಾರೆ.

ಹಿರಿಯರಾದ ರವೀಂದ್ರನಾಥ್ ಅವರನ್ನು ಭೇಟಿ ಮಾಡಿ ನನ್ನ ಭಾವನೆಗಳನ್ನು ವ್ಯಕ್ತಪಡಿಸಿದ್ದೇನೆ. ಸಹಕಾರ ಕೋರಿದ್ದೇನೆ. ಪಕ್ಷ ಅವಕಾಶ ಮಾಡಿಕೊಟ್ಟರೆ, ಸ್ಪರ್ಧೆಗೆ ಸಿದ್ದನಿದ್ದೇನೆ ಎಂದು ರೇಣುಕಾಚಾರ್ಯ ಹೇಳಿದರು.

ದಾವಣಗೆರೆ ಲೋಕಸಭೆಗೆ 8 ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಎಲ್ಲಾ ಕ್ಷೇತ್ರಗಳಿಂದಲೂ ಕಾರ್ಯಕರ್ತರು, ಮುಖಂಡರು ಕರೆ ಮಾಡಿ ಮಾತನಾಡುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ನನ್ನ ಹೆಸರು ನಮೂದಿಸುತ್ತಿದ್ದಾರೆ ಎಂದು ಹೇಳಿದರು.

ಸಿದ್ದೇಶ್ವರಣ್ಣ ಹಿರಿಯರಿದ್ದಾರೆ. ಅವರು ಸ್ಪರ್ಧೆ ಮಾಡುತ್ತೇನೆ ಎಂದಿದ್ದಾರೆ. ಅವರು ಕಣಕ್ಕಿಳಿದರೆ ಗೆಲುವಿಗೆ ಶ್ರಮಿಸುತ್ತೇನೆ. ಆದಷ್ಟು ಬೇಗ ಅಭ್ಯರ್ಥಿ ಯಾರೆಂಬುದನ್ನು (2ನೇ ಪುಟಕ್ಕೆ)

# ಪಕ್ಷ ಯಾರಿಗೆ ಟಿಕೆಟ್ ಕೊಟ್ಟರೂ ಸ್ವಾಗತಿಸುವೆ

## ರೇಣುಕಾಚಾರ್ಯ ಎಂಪಿ ಸ್ಥಾನಕ್ಕೆ ಸ್ಪರ್ಧಿಸಿದರೆ, ನಾನು ಹೊನ್ನಾಳಿ ಶಾಸಕ ಸ್ಥಾನಕ್ಕೆ ಸ್ಪರ್ಧಿಸುವೆ

**ಸಂಸದ ಜಿ.ಎಂ. ಸಿದ್ದೇಶ್ವರ**



ದಾವಣಗೆರೆ, ಜು. 14- ರೇಣುಕಾಚಾರ್ಯ ಲೋಕಸಭಾ ಸ್ಥಾನಕ್ಕೆ ಸ್ಪರ್ಧಿಸಿದರೆ, ನಾನು ಹೊನ್ನಾಳಿ ವಿಧಾನಸಭಾ ಸ್ಥಾನಕ್ಕೆ ಸ್ಪರ್ಧಿಸುತ್ತೇನೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೇಣುಕಾಚಾರ್ಯ ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಹೇಳುತ್ತಿದ್ದಾರೆ. ಅವರಿಗೆ ಆಸೆ ಇದ್ದರೆ ಸ್ಪರ್ಧಿಸಲಿ. ಅವರು ಎಂಪಿ ಸ್ಥಾನಕ್ಕೆ ನಿಂತರೆ, ಹೊನ್ನಾಳಿಯಲ್ಲಿ ಶಾಸಕ ಸ್ಥಾನ ಖಾಲಿ ಆಗುತ್ತದೆ. ನಾನು ಅಲ್ಲಿಗೆ ಹೋಗುತ್ತೇನೆ. ನಾನು ರೇಣುಕಾಚಾರ್ಯ ಅವರಿಗೆ ಎಂಪಿಗೆ ಶಿಫಾರಸ್ಸು ಮಾಡುತ್ತೇನೆ. ಅವರು ನನಗೆ ಎಂಎಲ್ಎ ಸ್ಥಾನಕ್ಕೆ ಶಿಫಾರಸ್ಸು ಮಾಡಲಿ ಎಂದು ಹೇಳಿದರು.

ನನಗೂ ಹೊನ್ನಾಳಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡುವಂತೆ ಒತ್ತಡ ಹಾಕಲಾಗುತ್ತಿದೆ. ಅಲ್ಲಿ ಗೆದ್ದು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಮಂತ್ರಿ ಏನು ಮುಖ್ಯಮಂತ್ರಿಯೇ ಆಗುತ್ತೇನೆ ಎಂದು ಸಿದ್ದೇಶ್ವರ ಹೇಳಿದರು. ರೇಣುಕಾಚಾರ್ಯ ಅವರಿಗೆ ಆಸೆ ಇದ್ದರೆ ಸ್ಪರ್ಧಿಸಲಿ. ಅಪೇಕ್ಷೆ ಪಡುವುದು, ಆಕಾಂಕ್ಷಿ ಎಂದು ಹೇಳಿಕೊಳ್ಳುವುದು ತಪ್ಪೇನು ಅಲ್ಲ. ಪಕ್ಷ ಅವರಿಗೇ ಟಿಕೆಟ್ ಕೊಟ್ಟರೂ ಗೆಲುವಿಗೆ ಕೆಲಸ (2ನೇ ಪುಟಕ್ಕೆ)

# ರಿಯಾಯ್ತಿ ದರದಲ್ಲಿ ಟೊಮ್ಯಾಟೊ

**ಎನ್.ಸಿ.ಸಿ.ಎಫ್. ಹಾಗೂ ನೆಫೆಡ್ ಸಂಸ್ಥೆಗಳ ಮೂಲಕ ಮಾರಾಟ**

ನವದೆಹಲಿ, ಜು. 14 - ಕೇಂದ್ರ ಸರ್ಕಾರ ದೆಹಲಿ ಹಾಗೂ ಪಾಟ್ನಾಗಳಲ್ಲಿ ವಿನಾಯಿತಿ ದರದ ಟೊಮ್ಯಾಟೋ ಮಾರಾಟ ಆರಂಭಿಸಿದೆ. ಎನ್.ಸಿ.ಸಿ.ಎಫ್. ಹಾಗೂ ನೆಫೆಡ್ ಸಂಸ್ಥೆಗಳ ಮೂಲಕ ಟೊಮ್ಯಾಟೋ ಮಾರಲಾಗುತ್ತಿದೆ.

ಕಳೆದ ಕೆಲ ವಾರಗಳಲ್ಲಿ ಟೊಮ್ಯಾಟೋ ಬೆಲೆ ತೀವ್ರ ಏರಿಕೆಯಾಗಿದೆ. ಶುಕ್ರವಾರದಂದು ದೇಶದ ಕೆಲ ಭಾಗಗಳಲ್ಲಿ ಟೊಮ್ಯಾಟೊ ದರ ಕೆಜಿಗೆ 244 ರೂ.ಗಳವರೆಗೆ ತಲುಪಿದೆ. ಶುಕ್ರವಾರದಂದು 17 ಸಾವಿರ ಕೆ.ಜಿ. ಟೊಮ್ಯಾಟೊ ಮಾರಲಾಗಿದೆ.

ಕೆಲವೆಡೆ ಜನರು ಸರದಿಯಲ್ಲಿ ಟೊಮ್ಯಾಟೋ ಖರೀದಿಸಿದ್ದಾರೆ ಎಂದು ಎನ್.ಸಿ.ಸಿ.ಎಫ್. ವ್ಯವಸ್ಥಾಪಕ ನಿರ್ದೇಶಕಿ ಅನೀಸ್ ಜೋಸೆಫ್ ಚಂದ್ರ ತಿಳಿಸಿದ್ದಾರೆ. ನೆಫೆಡ್ ಸಂಸ್ಥೆಯು 90 ರೂ. ದರದಲ್ಲಿ ಟೊಮ್ಯಾಟೊ ಮಾರಾಟ ನಡೆಸಿದೆ. ರಿಯಾ ಯಿತಿ ದರದಲ್ಲಿ ಮಾರಾಟ ಮಾಡುವುದರಿಂದ ಆಗುವ ನಷ್ಟವನ್ನು ಕೇಂದ್ರ ಸರ್ಕಾರ ಭರಿಸಲಿದೆ.

# ಮೂರನೇ ತಿಂಗಳು ಸಗಟು ಹಣದುಬ್ಬರ ಋಣಾತ್ಮಕದತ್ತ

ನವದೆಹಲಿ, ಜು. 14 - ಸತತ ಮೂರನೇ ತಿಂಗಳು ಸಗಟು ಹಣದುಬ್ಬರ ಋಣಾತ್ಮಕವಾಗಿ ಮುಂದುವರೆದಿದ್ದು, ಜೂನ್ ತಿಂಗಳಲ್ಲಿ 4.12ರಷ್ಟಿದೆ. ಆಹಾರ, ಇಂಧನ, ಲೋಹದ ವಸ್ತುಗಳ ಬೆಲೆ ಇಳಿಕೆ ಇದಕ್ಕೆ ಕಾರಣ ಎಂದು ಅಧಿಕೃತ ಅಂಕಿ-ಅಂಶಗಳು ತಿಳಿಸಿವೆ, 2022ರ ಜೂನ್ ತಿಂಗಳಲ್ಲಿ ಸಗಟು ಹಣದುಬ್ಬರ ಶೇ.16.23ರಷ್ಟಿತ್ತು. ಈ ಹಿಂದೆ 2015ರ ಅಕ್ಟೋಬರ್‌ನಲ್ಲಿ ಹಣದುಬ್ಬರ ಋಣಾತ್ಮಕ ಶೇ.4.76 ಆಗಿದ್ದು ಹಿಂದಿನ ದಾಖಲೆಯಾಗಿದೆ. ಆದರೆ, ಚಿಲ್ಲರೆ ಹಣದುಬ್ಬರ ಏರುಮುಖವಾಗಿದೆ. ಜೂನ್‌ನಲ್ಲಿ ಚಿಲ್ಲರೆ ಹಣದುಬ್ಬರ ಶೇ.4.8ಕ್ಕೆ ಏರಿಕೆಯಾಗಿದೆ. ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಶೇ.4.3ರಷ್ಟಿತ್ತು.

# ಕೃಷಿ ಪತ್ತಿನ ಸಂಘದ ನಿರ್ದೇಶಕರಾಗಿ ಪಿ.ಟಿ. ಪರಮೇಶ್ವರ ನಾಯ್ಕ



ಹರಪನಹಳ್ಳಿ, ಜು.14- ತಾಲ್ಲೂಕಿನ ಹಿರೇಮಲ್ಲನಕೆರೆ ಕೃಷಿ ಪತ್ತಿನ ಸಂಘದ ಆಡಳಿತ ಮಂಡಳಿ ನಿರ್ದೇಶಕರಾಗಿ ಮಾಜಿ ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ ಆಯ್ಕೆಯಾಗುವ ಮೂಲಕ ಸಹಕಾರಿ ಕ್ಷೇತ್ರ ಪ್ರವೇಶಿಸಿದ್ದಾರೆ.

ಸಹಕಾರಿ ನಿರ್ದೇಶಕರಾಗಿದ್ದ ಹಂಪಸಾಗರ ಬಸಪ್ಪ ಮತ್ತು ವೀರಾಪುರ ಬಸವರಾಜ ಅವರ ರಾಜೀನಾಮೆಯಿಂದ ತೆರವಾಗಿದ್ದ ಎರಡು ಸ್ಥಾನಗಳಿಗೆ ಪರಮೇಶ್ವರ ನಾಯ್ಕ ಮತ್ತು ತಳವಾರ ಶಿವಮ್ಮ ಅವರುಗಳನ್ನು ಬುಧವಾರ ನಡೆದ ಆಡಳಿತ ಮಂಡಳಿ ವಿಶೇಷ ಸಭೆಯಲ್ಲಿ ಕೋ-ಅಪ್ ಮಾಡಿಕೊಳ್ಳಲಾಯಿತು ಎಂದು ತಿಳಿಸಲಾಗಿದೆ.

# ಆಯುಷ್ಮಾನ್ ಭಾರತಕ್ಕಾಗಿ ಅಭಿಯಾನ ನಡೆಸಲು ಕರೆ

ನವದೆಹಲಿ, ಜು. 14 - ಆಯುಷ್ಮಾನ್ ಭಾರತ್ ಪಿಎಂ - ಜೆವೈ ಯೋಜನೆಯಡಿ ಎಲ್ಲಾ ಅರ್ಹ ಫಲಾನುಭವಿಗಳ ಸೇರ್ಪಡೆಗೆ ಅಭಿಯಾನ ನಡೆಸಲು ರಾಜ್ಯಗಳಿಗೆ ಕೇಂದ್ರ ಸರ್ಕಾರ ತಿಳಿಸಿದೆ.

ಬೇರು ಮಟ್ಟದಲ್ಲಿ ಆರೋಗ್ಯ ಕಾರ್ಯಕರ್ತರ ಜೊತೆಗೂಡಿ ಈ ಯೋಜನೆಯನ್ನು ಎಲ್ಲರಿಗೂ ತಲುಪಿಸಲು ರಾಜ್ಯಗಳು ಅಭಿಯಾನ ನಡೆಸಬೇಕು ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಹೇಳಿದ್ದಾರೆ. 2018ರಲ್ಲಿ ಈ ಯೋಜನೆ ಜಾರಿಗೆ ತರುವ ಮೂಲಕ, ಸಾರ್ವತ್ರಿಕ ಉಚಿತ ಆರೋಗ್ಯ ಸೇವೆ ಕಲ್ಪಿಸಲಾಗಿತ್ತು.


# ಜೂನ್‌ನಲ್ಲಿ ರಫ್ತು ಶೇ.22ರಷ್ಟು ಕುಸಿತ

ನವದೆಹಲಿ, ಜು. 14 -ಕಳೆದ ಜೂನ್ ತಿಂಗಳಲ್ಲಿ ಭಾರತದ ರಫ್ತು ಶೇ.22ರಷ್ಟು ಕುಸಿದಿದೆ. ಇದು 3 ವರ್ಷಗಳಲ್ಲೇ ಅತ್ಯಂತ ತೀವ್ರ ಕುಸಿತ ವಾಗಿದೆ. ಜಾಗತಿಕವಾಗಿ ಬೇಡಿಕೆ ಇಳಿಕೆಯಾಗಿರುವುದೇ ಇದಕ್ಕೆ ಕಾರಣ.

ವಾಣಿಜ್ಯ ಸಚಿವಾಲಯದ ಮಾಹಿತಿಯ ಪ್ರಕಾರ (3ನೇ ಪುಟಕ್ಕೆ)

ಯು.ಪಿ.ಐ. ಪ್ಲಾಟ್ ಫಾರಂ ಅನ್ನು ಜಾರಿಗೆ ತಂದ
ದಾವಣಗೆರೆ ಜಿಲ್ಲೆಯ ಪ್ರಪ್ರಥಮ ಅರ್ಬನ್ ಸಹಕಾರಿ ಬ್ಯಾಂಕ್
ಎಂಬ ಹೆಗ್ಗಳಿಕೆ ನಮ್ಮದು.
ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ.,
THE DAVANGERE-HARIHARA URBAN SAHAKARA BANK NIYAMITHA
OUR SERVICES
> Mobile Banking
> NACH
> BBPS
> UPI
> IMPS
> E-Commerce
> POS
> ATM (Withdraw & Deposit)
ನಮ್ಮ ಆತ್ಮೀಯ ಗ್ರಾಹಕರೇ ಇದರ ಸದುಪಯೋಗ ಪಡೆದುಕೊಂಡು ತಮ್ಮದೇ ಆದ D.H.U.S. ಬ್ಯಾಂಕಿನಲ್ಲಿ ವ್ಯವಹರಿಸಬೇಕಾಗಿ ವಿನಂತಿ.
info@dhusbn.in
+91-8970005300
www.dhusbn.in
1800 425 6633
Google Play - DHUS BANK

manipalhospitals
LIFE'S ON



ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರಿನ ಪ್ರಖ್ಯಾತ ವಾಸ್ಕ್ಯುಲರ್ ಶಸ್ತ್ರಚಿಕಿತ್ಸಾ ತಜ್ಞರು ಪ್ರತಿ ತಿಂಗಳ ಮೂರನೇ ಭಾನುವಾರದಂದು ಆರೈಕೆ ಆಸ್ಪತ್ರೆ, ದಾವಣಗೆರೆಯಲ್ಲಿ ಸಮಾಲೋಚನೆಗೆ ಲಭ್ಯವಿರುತ್ತಾರೆ
ಭಾನುವಾರ, 16ನೇ ಜುಲೈ, 2023
ಬೆಳಗ್ಗೆ 10:00 ಘಂಟೆಯಿಂದ ಮಧ್ಯಾಹ್ನ 1:00 ಘಂಟೆಯವರೆಗೆ
ಆರೈಕೆ ಆಸ್ಪತ್ರೆ
ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ
ಡಾ. ರಾಜೇಂದ್ರ ಪ್ರಸಾದ್ ಬಿ
ಎಂಬಿಬಿಎಸ್, ಎಂ.ಎಸ್, ಡಿಎನ್‌ಬಿ (ರಕ್ತನಾಳ ಶಸ್ತ್ರಚಿಕಿತ್ಸೆ), ಎಫ್‌ವಿಇಎಸ್ (ಆಸ್ಟ್ರಿಯಾ)
ಸಲಹೆಗಾರರು - ವಾಸ್ಕ್ಯುಲರ್ ಮತ್ತು ಎಂಡೋವಾಸ್ಕ್ಯುಲರ್ ಸರ್ಜರಿ
ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರು.
ಈ ಸಮಸ್ಯೆಗಳ ಕುರಿತು ತಜ್ಞರೊಂದಿಗೆ ಸಲಹೆ ಪಡೆಯಿರಿ
ಉಬ್ಬಿರುವ ರಕ್ತನಾಳಗಳು । ಕೈ ಮತ್ತು ಕಾಲುಗಳ ಊತ ಮತ್ತು ನೋವು । ಮಧುಮೇಹ ಕಾಲು । ಡಯಾಲಿಸಿಸ್ । ವಾಸಿಯಾಗದ ಗಾಯಗಳು । ಕಾಲು ಬೆರಳುಗಳ ಬಣ್ಣ ಬದಲಾವಣೆ । ಗ್ಯಾಂಗ್ರೀನ್ ಮತ್ತು ಇನ್ನೂ ಅನೇಕ ಸಮಸ್ಯೆಗಳು
Manipal Hospital Yeshwanthpur
Brigade Gateway, #26/4, 80 Feet, Dr. Rajkumar Road, Malleshwaram West, Bengaluru 560 055, Karnataka.
P 080 6165 6262
ನಿಮ್ಮ ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ!
Harishkumar
+91 80505 60580

# ಸಾಧುವೀರಶೈವ ಸಮಾಜದ ಶಾಸಕರಿಗೆ ಅಭಿನಂದನಾ ಸಮಾರಂಭ



**ಮೃತ್ಯುಂಜಯ ಪಾಟೀಲ್**

ಹೊನ್ನಾಳಿ, ಜು.14- ತಾಲ್ಲೂಕಿನ ಗೊಲ್ಲರಹಳ್ಳಿಯ ಶ್ರೀ ತರಳಬಾಳು ಸಮುದಾಯ ಭವನದಲ್ಲಿ ಶುಕ್ರವಾರ ತಾಲ್ಲೂಕು ಸಾಧು ವೀರಶೈವ ಸಮಾಜದ ಸಭೆಯು ಸಮಾಜದ ತಾಲ್ಲೂಕು ಅಧ್ಯಕ್ಷ ಹುಣಸಘಟ್ಟ ಗದುಗೇಶ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ರಾಜ್ಯದಿಂದ ಆಯ್ಕೆಗೊಂಡಿರುವ ಸಾಧುವೀರಶೈವ ಸಮಾಜದ ನೂತನ ಶಾಸಕರು ಹಾಗು ಸಚಿವರಿಗೆ ಅಭಿನಂದನಾ ಸಮಾರಂಭ ನಡೆಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಹೊನ್ನಾಳಿ ಹಾಗು ನ್ಯಾಮತಿ ಅವಳಿ ತಾಲ್ಲೂಕಿನ 100 ಕ್ಕೂ ಹೆಚ್ಚು ಸಾಧು ವೀರಶೈವ ಸಮಾಜದ ಬಂಧುಗಳು, ಮುಖಂಡರು ಸಭೆಗೆ ಆಗಮಿಸಿ ತಮ್ಮ ಸಲಹೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಸಮಾರಂಭ ಯಶಸ್ವಿಯಾಗಿ ನಡೆಸುವ ಬಗ್ಗೆ ಸಮ್ಮತಿ ವ್ಯಕ್ತಪಡಿಸಿದರು.

ಸಭೆಗೆ ಸೇರಿದ್ದ ಸಮಾಜದ ಅನೇಕ ಮುಖಂಡರುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸಂದರ್ಭ ದಾವಣಗೆರೆ ಜಿಲ್ಲೆಯ ಐವರು ಶಾಸಕರು ಸೇರಿದಂತೆ, ರಾಜ್ಯದಲ್ಲಿ 8 ಶಾಸಕರು ಇರುವುದರಿಂದ ಒಂದೇ ವೇದಿಕೆಯಲ್ಲಿ ಅವರನ್ನೆಲ್ಲಾ ಸನ್ಮಾನಿಸುವ ಅಭಿಪ್ರಾಯ ವ್ಯಕ್ತವಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಸೇರಿದಂತೆ ನೂತನ 8 ಶಾಸಕರನ್ನು ಒಟ್ಟಾಗಿ ಸನ್ಮಾನಿಸಿ, ಗೌರವಿಸುವ ಬಗ್ಗೆ ಒಕ್ಕೊರಲ್ಲಿನ ತೀರ್ಮಾನ ಕೈಗೊಳ್ಳಲಾಯಿತು.

ಆಯ್ಕೆಗೊಂಡಿರುವ ನೂತನ 8 ಶಾಸಕರುಗಳಾದ ಮಾಜಿ ಮುಖ್ಯಮಂತ್ರಿಗಳೂ ಹಾಗು ಶಿಗ್ಗಾಂವ್ ಕ್ಷೇತ್ರದ ಬಸವರಾಜ ಬೊಮ್ಮಾಯಿ, ದಾವಣಗೆರೆಯ ಶಾಮನೂರು ಶಿವಶಂಕರಪ್ಪ, ಹರಿಹರದ ಹರೀಶ್, ಚನ್ನಗಿರಿಯ ಬಸವರಾಜ ಶಿವಗಂಗಾ, ಹಿರೇಕೆರೂರು ಯು.ಬಿ. ಬಣಕಾರ್, ಚಿಕ್ಕಮಗಳೂರು ಹೆಚ್.ಡಿ. ತಮ್ಮಯ್ಯ ಇವರುಗಳನ್ನು ತಾಲ್ಲೂಕು ಸಾಧುವೀರ ಸಮಾಜದಿಂದ ಸನ್ಮಾನಿತರಾಗಲಿರುವರು.

ಸಭೆಯಲ್ಲಿ ನ್ಯಾಮತಿ ತಾಲ್ಲೂಕು ಅಧ್ಯಕ್ಷ ಶಿವಪ್ಪ, ಶಿವ ಕೋ –ಆಪ್ ಅಧ್ಯಕ್ಷ ಶೈಲೇಶ್, ಸಾಧುಸಮಾಜದ ಮುಖಂಡರಾದ ಕೆಂಗಲಹಳ್ಳಿ ಷಣ್ಮುಖಪ್ಪ, ಅರಬಗಟ್ಟೆ ರಮೇಶ್, ಈಶ್ವರಪ್ಪ, ಕುಂದೂರು ಶಿವಣ್ಣ, ಶೇಖರಪ್ಪ, ಕೋಟೆ ಮಲ್ಲೂರು ಬೆನಕಪ್ಪ ಗೌಡ, ಯಕ್ಕನಹಳ್ಳಿ ಬಸಣ್ಣ, ಕ್ಯಾಸಿನಕೇರಿ ಸೋಮಪ್ಪಗೌಡ, ಬಿ.ಜಿ. ಶಿವಕುಮಾರ್, ಎ.ಜಿ. ಪ್ರಕಾಶ್, ಮಧು ಅರಕೆರೆ, ಎ.ಬಿ. ಹನುಮಂತಪ್ಪ, ಮಲ್ಲೂರು ಬೆನಕಪ್ಪ, ನೇರಲಗುಂಡಿ ನೀಲಕಂಠ, ಕುಲಂಬಿ ಬಸಣ್ಣ, ನಾಗರಾಜ್, ನ್ಯಾಮತಿ ಕಾಂತರಾಜ, ಗಡೆಕಟ್ಟೆ ರವಿ ಅಣ್ಣ, ರಾಮೇಶ್ವರ ತೀರ್ಥಲಿಂಗಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಯಾರಿಗೆ ಟಿಕೆಟ್ ಕೊಟ್ಟರೂ ಸ್ವಾಗತ

**(1ನೇ ಪುಟದಿಂದ)** ಮಾಡುತ್ತೇನೆ. ಯಾರು ಏನೇ ಹೇಳಿದರೂ ಪಕ್ಷದ ತೀರ್ಮಾನವೇ ಮುಖ್ಯ. ಪಕ್ಷದ ತೀರ್ಮಾನಕ್ಕೆ ನಾನು ಬದ್ಧ ಎಂದರು.

ನಾನು ಮ್ಯಾಂಗನೀಸ್ ಗಣಿಗಾರಿಕೆ ಯಲ್ಲಿ ನಯಾಪೈಸೆ ದುಡ್ಡು ತೆಗೆದುಕೊಂಡಿಲ್ಲ. ಭೀಮಸಮುದ್ರದ ಬಳಿ ಅದಿರು ಸಾಗಣೆ ಲಾರಿ ಓಡಾಟಕ್ಕೆ ಹಿಂದಿನಿಂದಲೂ ನನ್ನ ವಿರೋಧವಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ.

ಈ ಕುರಿತು ನಾನೇ ಚಿತ್ರದುರ್ಗ ಜಿಲ್ಲಾಧಿಕಾರಿಗೆ ಹಲವಾರು ಪತ್ರಗಳನ್ನು ಬರೆದಿದ್ದೆ. ನಾನು ಯಡಿಯೂರಪ್ಪ ಹಾಗೂ ಪ್ರಹ್ಲಾದ್ ಜೋಷಿಗೂ ಪತ್ರ ಬರೆದಿದ್ದೆ. ಈಗಲೂ ಅದಕ್ಕೆ ಬದ್ಧನಾಗಿದ್ದೇನೆ. ಸಾರ್ವಜನಿಕರಿಗೆ ತೊಂದರೆ ಆದರೆ ಅದಿರು ಸಾಗಣೆ ಲಾರಿಗಳನ್ನು ಈಗಲೇ ನಿಲ್ಲಿಸಲಿ ಎಂದು ಹೇಳಿದರು.

ಬೇಲೆಕೇರಿ ಅದಿರು ಸಾಗಣೆ ಪ್ರಕರಣದಲ್ಲಿ ಈ ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಬೇಕೆಂದೇ ನಮ್ಮ ಮೇಲೆ ತನಿಖೆ ಮಾಡುವಂತೆ ಮಾಡಿತ್ತು. ಈ ಪ್ರಕರಣದಲ್ಲಿ ಹೈಕೋರ್ಟ್ ನಮ್ಮ ಕೇಸ್ ಖುಲಾಸೆ ಮಾಡಿದೆ. ಗಣಿ ಮತ್ತು ಭೂ ವಿಜ್ಞಾನ ಸಚಿವರು ನನ್ನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ನಾನು ಯಾವುದೇ ಭ್ರಷ್ಟಾಚಾರದ ಹಣದಿಂದ ಕಾಲೇಜ್ ಮೇಲೆ ಕಾಲೇಜು ಕಟ್ಟಿಲ್ಲ ಎಂದು ತಿರುಗೇಟು ನೀಡಿದರು.

**ಶಿವಶಂಕರಪ್ಪಗೆ ಸಾಲ ಕೊಟ್ಟ ಮನೆತನ ನಮ್ಮದು :** ಶಾಮನೂರು ಶಿವಶಂಕರಪ್ಪ ನವರಿಗೆ ಸಾಲ ಕೊಟ್ಟ ಮನೆತನ ನಮ್ಮದು. 1997 ರಲ್ಲಿಯೇ ನಾನು ಆರು ಕೋಟಿ ಆಸ್ತಿ ಡಿಕ್ಲೇರ್ ಮಾಡಿಕೊಂಡಿದ್ದೆ. ಆಗಿನ ಕಾಲದಲ್ಲಿ 1.80 ಕೋಟಿ ತೆರಿಗೆ ಕಟ್ಟಿದ್ದೆ. ನಾನು ಭ್ರಷ್ಟಾಚಾರ ಮಾಡಿದ್ದರೆ ತನಿಖೆಯಾಗಲಿ. ಅಕ್ರಮ ಹಣ ಸಂಪಾದಿಸಿದ್ದರೆ ತೆರಿಗೆ ಅಧಿಕಾರಿಗಳು ಪರಿಶೀಲಿಸುತ್ತಾರೆ ಎಂದರು.

ದಾವಣಗೆರೆ, ಚಿತ್ರದುರ್ಗ, ಬೆಂಗಳೂರು ನೇರ ರೈಲು ಮಾರ್ಗ ಮಾಜಿ ಸಂಸದ ಜನಾರ್ದನ ಸ್ವಾಮಿ ಅವರ ಅವಧಿಯಲ್ಲೇ ಆಗಬೇಕಿತ್ತು. 15 ವರ್ಷಗಳಾದರೂ ಆಗಿಲ್ಲ. ದಾವಣಗೆರೆ ಜಿಲ್ಲೆಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣ ಗೊಂಡು ಅನುದಾನ ಬಿಡುಗಡೆಯಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಭೂ ಸ್ವಾಧೀನ ನಡೆಯಬೇಕಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು. ನಾನು, ಕೇಂದ್ರ ಸಚಿವ ಎ. ನಾರಾಯಣಸ್ವಾಮಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡುತ್ತೇನೆ. ಈಗಿರುವ ಪರಿಸ್ಥಿತಿ ಸ್ವಲ್ಪ ತಿಳಿಯಾಗಲಿ. ಆ ನಂತರ ಭೇಟಿ ಮಾಡುತ್ತೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸ್ಮಾರ್ಟ್ ಸಿಟಿಯ ಕೆಲವು ಕಳಪೆ ಕಾಮಗಾರಿಗಳ ನಾನೇ ಪರಿಶೀಲಿಸಿ ರಿಪೇರಿ ಮಾಡಿಸಿದ್ದೆ. ನನ್ನಂತೆ ಓಡಾಡುವ ಸಂಸದರು ಯಾರೂ ಇಲ್ಲ. ನಮ್ಮ ಪಕ್ಷದ ಎಲ್ಲರೂ ಗೌರವಾನ್ವಿತರಾಗಿದ್ದಾರೆ. ಯಾರೂ ಭ್ರಷ್ಟಾಚಾರ ಮಾಡಲು ರೆಡಿ ಇಲ್ಲ ಎಂದರು.

ಉತ್ತರ ಹಾಗು ದಕ್ಷಿಣ ಕ್ಷೇತ್ರಗಳಲ್ಲಿ ಆಶ್ರಯ ಮನೆಗೆ ಸಂಬಂಧಿಸಿದ ನಿವೇಶನ ಹಂಚಿಕೆಯಲ್ಲಿ ನನ್ನ ಪಾತ್ರ ಇಲ್ಲ. ನನಗೂ ಅದಕ್ಕು ಸಂಬಂಧವೇ ಇಲ್ಲ ಎಂದ ಸಿದ್ದೇಶ್ವರ್, ದೂಡಾದಲ್ಲಿ ಕಳೆದ ಎರಡು ತಿಂಗಳಿನಿಂದ ಎನ್‌ಒಸಿ ನೀಡಿಲ್ಲ. ಮಹಾನಗರ ಪಾಲಿಕೆಯಲ್ಲಿ ಡೋರ್ ನಂಬರ್ ನೀಡುತ್ತಿಲ್ಲ. ಮೊದಲು ಅದು ಕೊಡಲಿ ಎಂದರು.

## ಅಕ್ಬರ್ ಖುಷ್, ಅಮರ್ ಮಟಾಷ್... ಸಿದ್ದು ಬಜೆಟ್‌ಗೆ ಸಿದ್ದೇಶ್ವರ ಲೇವಡಿ

ದಾವಣಗೆರೆ: ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಬಜೆಟ್ ಅಕ್ಬರ್, ಆಂಟೋನಿ ಫುಲ್ ಖುಷ್, ಅಮರ್ ಮಟಾಷ್...ಎನ್ನುವಂತಿದೆ ಎಂದು ಸಂಸದ ಜಿ.ಎಂ.ಸಿದ್ದೇಶ್ವರ ಲೇವಡಿ ಮಾಡಿದರು.

ಹಣಕಾಸು ಸಚಿವರೂ ಆಗಿರುವ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ದಾವಣಗೆರೆ ಜಿಲ್ಲೆಗೆ ಯಾವುದೇ ಕೊಡುಗೆ ನೀಡಿಲ್ಲ. ವಿಮಾನ ನಿಲ್ದಾಣ, ಕೈಗಾರಿಕಾ ಕಾರಿಡಾರ್, ಸರ್ಕಾರಿ ವೈದ್ಯಕೀಯ ಕಾಲೇಜು ಯಾವುದನ್ನೂ ಕೊಟ್ಟಿಲ್ಲ. ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು ಈ ಬಗ್ಗೆ ಮಾತನಾಡಬೇಕಿತ್ತು ಎಂದರು.

## ತಪ್ಪು ನಿರ್ಧಾರಗಳಿಂದ ಸೋತೆವು

ದಾವಣಗೆರೆ ಉತ್ತರ ಮತ್ತು ದಕ್ಷಿಣ ಕ್ಷೇತ್ರದಲ್ಲಿ ನಮ್ಮ ಪಕ್ಷದ ಎಡವಟ್ಟುಗಳಿಂದ ಎರಡೂ ಕ್ಷೇತ್ರಗಳಲ್ಲಿ ಸೋತೆವು. ಎರಡು ತಿಂಗಳು ಮುಂಚೆ ಟಿಕೆಟ್ ಘೋಷಣೆ ಮಾಡಿದ್ದರೆ ಎರಡೂ ಕ್ಷೇತ್ರಗಳಲ್ಲಿ ಗೆಲುವು ನಮ್ಮದೇ. ನಮ್ಮ ತಪ್ಪು ನಿರ್ಧಾರಗಳಿಂದ ಸೋತು ಪಶ್ಚಾತ್ತಾಪ ಪಡುವಂತಾಗಿದೆ ಎಂದು ಸಿದ್ದೇಶ್ವರ ಹೇಳಿದರು.

# ಲೋಕಸಭಾ ಚುನಾವಣೆಗೆ ಸ್ಪರ್ಧೆ

**(1ನೇ ಪುಟದಿಂದ)** ಘೋಷಿಸಬೇಕು. ವಿಧಾನಸಭೆ ಚುನಾವಣೆಗೆ ತಡ ಮಾಡಿದಂತೆ ಇಲ್ಲಿ ಮಾಡಬಾರದು ಎಂದು ಒತ್ತಾಯಿಸಿದರು.

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಲೋಕಸಭೆ ಚುನಾವಣೆಗಳು ನಮ್ಮ ಮುಂದಿವೆ. ಅದಕ್ಕೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕಿದೆ. ಹಾಗಾಗಿ, ಬಿಜೆಪಿ ರಾಜ್ಯಾಧ್ಯಕ್ಷರು ಹೊಸಬರು ಆಗಬೇಕು. ಕೆಳಮನೆ, ಮೇಲ್ಮನೆಯಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಡಬೇಕಿದೆ. ಈ ನಿಟ್ಟಿನಲ್ಲಿ ಆದಷ್ಟು ಬೇಗ ರಾಜ್ಯಾಧ್ಯಕ್ಷರ ಆಯ್ಕೆಯಾಗಬೇಕು ಎಂದಿರುವ ರೇಣುಕಾಚಾರ್ಯ, ಇದು ಕೇವಲ ನನ್ನೊಬ್ಬನ ಒತ್ತಾಯವಲ್ಲ. ನಾಡಿನ ಬಿಜೆಪಿ ಕಾರ್ಯಕರ್ತರು ಹಾಗೂ ಜನರ ಒತ್ತಾಸೆಯಾಗಿದೆ. ಪಕ್ಷದ ನಾಯಕರು ಆದಷ್ಟು ಬೇಗ ನೇಮಕ ಮಾಡುತ್ತಾರೆ ಎಂಬ ವಿಶ್ವಾಸವಿದೆ ಎಂದರು.

**ಕಾಂಗ್ರೆಸ್ ಸೇರಲ್ಲ, ಬಿಜೆಪಿ ಬಿಡಲ್ಲ:** ನಾನು ಯಾವುದೇ ಕಾರಣಕ್ಕೂ ಬಿಜೆಪಿ ಪಕ್ಷ ಬಿಡುವುದಿಲ್ಲ. ಪಕ್ಷವು ನನಗೆ ಎಲ್ಲವನ್ನೂ ನೀಡಿದೆ. ನಾನು ಕಾಂಗ್ರೆಸ್ ಸೇರುತ್ತೇನೆ ಎಂಬುದಾಗಿ ನನ್ನ ರಾಜಕೀಯ ವಿರೋಧಿಗಳು ಅಪಪ್ರಚಾರ ನಡೆಸುತ್ತಿದ್ದಾರೆ ಎಂದು ಮಾಜಿ ಶಾಸಕರು ಪುನರುಚ್ಚರಿಸಿದರು.

**ಜೈನಮುನಿ ಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸಿ:** ಜೈನಮುನಿ ಹತ್ಯೆ ಪ್ರಕರಣ ಖಂಡನೀಯ. ಬರ್ಬರ ಹತ್ಯೆ ನಡೆದಿರುವುದು ದೇಶದ ಪ್ರತಿಯೊಬ್ಬರಿಗೂ ಆಘಾತ ತಂದಿದೆ. ಈ ಪ್ರಕರಣವನ್ನು ಸಿಬಿಐಗೆ ವಹಿಸಲೇಬೇಕು ಎಂದು ಆಗ್ರಹಿಸಿದರು. ಪಕ್ಷದಿಂದ ಕೊಡಮಾಡಲಾಗಿರುವ ನೋಟಿಸ್‌ಗೆ ಉತ್ತರ ಕೊಡುವುದಿಲ್ಲ ಎಂದು ಮತ್ತೊಮ್ಮೆ ಹೇಳಿರುವ ರೇಣುಕಾಚಾರ್ಯ, ನಾನು ಪಕ್ಷದ ಮುಖಂಡರು ಹಾಗೂ ಪಕ್ಷದ ವಿರುದ್ದ ಮಾತನಾಡಿಲ್ಲ. ತಪ್ಪು ಮಾಡಿದ್ದರೆ ನೊಟೀಸ್‌ಗೆ ಉತ್ತರ ಕೊಡಬೇಕು. ತಪ್ಪೇ ಮಾಡದಿದ್ದರೆ ಏನೆಂದು ಉತ್ತರಿಸಬೇಕು. ಹಾಗಾಗಿ, ನೋಟಿಸ್‌ಗೆ ಉತ್ತರಿಸುವ ಪ್ರಮೇಯವೇ ಎದುರಾಗದು ಎಂದರು.

# ಉದಯೋನ್ಮುಖ ಕೃಷಿ ಪಂಡಿತ ಪ್ರಶಸ್ತಿಗೆ ಸೈಯದ್ ಜಿಯಾ ಉಲ್ಲಾ ಆಯ್ಕೆ

ಮಲೇಬೆನ್ನೂರು, ಜು. 14 - ಪಟ್ಟಣದ ಪ್ರಗತಿಪರ ರೈತ ಸೈಯದ್ ಜಿಯಾಉಲ್ಲಾ ಸಾಬ್ ಅವರಿಗೆ ಕೃಷಿ ಇಲಾಖೆ ಕೊಡಮಾಡುವ ಉದಯೋನ್ಮುಖ ಕೃಷಿ ಪಂಡಿತ ಪ್ರಶಸ್ತಿ ಲಭಿಸಿದೆ. 50 ನಗದು ಬಹುಮಾನವನ್ನು ಈ ಪ್ರಶಸ್ತಿಯನ್ನು ಡಿಸೆಂಬರ್ 23ರಂದು ನಡೆಯುವ ರೈತರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದೆಂದು ಕೃಷಿ ಇಲಾಖೆ ತಿಳಿಸಿದೆ. ಸೈಯದ್ ಜಿಯಾಉಲ್ಲಾ ಅವರು ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸದ್ದಿಲ್ಲದ ಸಾಧನೆ ಮಾಡಿ ಉದಯೋನ್ಮುಖ ಕೃಷಿ ಪಂಡಿತ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



## ಹೊನ್ನಾಳಿ : ಇಂದು ವಿದ್ಯುತ್ ಅದಾಲತ್

ಹೊನ್ನಾಳಿ ಉಪವಿಭಾಗದ ವ್ಯಾಪ್ತಿಗೆ ಬರುವ ಹೊಳೆ ಮಾದಾಪುರ ಗ್ರಾಮದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ವಿದ್ಯುತ್ ಅದಾಲತ್ ಹಾಗೂ ಮಧ್ಯಾಹ್ನ 3 ಗಂಟೆಗೆ ಹೊನ್ನಾಳಿ ಉಪ ವಿಭಾಗದ ಕಚೇರಿಯಲ್ಲಿ ಗ್ರಾಹಕರ ಸಂವಾದ ಸಭೆ ಕರೆಯಲಾಗಿದೆ.

# ಚಂದ್ರಯಾನ ಉಡಾವಣೆ ಯಶಸ್ವಿ



**(1ನೇ ಪುಟದಿಂದ)** ಇನ್ನೂ ಯಾರೂ ಶೋಧಿಸಿಲ್ಲ. ಚಂದ್ರನ ಮೇಲೆ ಉಷ್ಣ ಗುಣ ಗಳ ಕುರಿತ ಪ್ರಯೋಗ ನಡೆಸಿಲ್ಲ. ಇದರ ಜೊತೆಗೆ ಚಂದ್ರನ ಮೇಲ್ಮೈ ಅಧ್ಯಯನದ ಉದ್ದೇಶ ಈ ಬಾರಿಯ ಚಂದ್ರಯಾನದ್ದಾಗಿದೆ ಎಂದವರು ತಿಳಿಸಿದರು. ಸುಮಾರು 25 ಗಂಟೆಗಳ ಕ್ಷಣಗಣನೆ ನಂತರ ಎಲ್‌ವಿಎಂ3-ಎಂ4 ರಾಕೆಟ್ ಮೂಲಕ ಮಧ್ಯಾಹ್ನ 2.35ಕ್ಕೆ ಉಡಾವಣೆ ಮಾಡಲಾಯಿತು. ಇದಾದ 16 ನಿಮಿಷ ಗಳ ನಂತರ ಚಂದ್ರಯಾನವು ರಾಕೆಟ್‌ನಿಂದ ಬೇರ್ಪಟ್ಟಿತು.

ಇಸ್ರೋದ ಈ ಸಾಧನೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಅಭಿನಂದಿಸಿದ್ದಾರೆ.

# 6-8 ನೇ ತರಗತಿಗಳ ಬೋಧನಾ ಬಹಿಷ್ಕಾರಕ್ಕೆ ನಿರ್ಧಾರ



**ಹೊನ್ನಾಳಿ**

ಹೊನ್ನಾಳಿ, ಜು. 14 - ಪ್ರಾಥಮಿಕ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪದವೀಧರ ಶಿಕ್ಷಕರಿಗೆ ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ಪ್ರೌಢಶಾಲೆಗಳ ಬಡ್ತಿ ಮತ್ತು ವರ್ಗಾವಣೆಯ ವಿಷಯದಲ್ಲಿ ಅನ್ಯಾಯವಾಗುತ್ತಿರುವುದನ್ನು ಸರಿಪಡಿಸುವಂತೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎನ್. ಹೊನ್ನೇಶ್ ಅವರು ಆಗ್ರಹಿಸಿದ್ದಾರೆ.

ಅವರು ಸೇವಾ ನಿರತ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದವತಿಯಿಂದ ಬಿಇಒ ನಂಜರಾಜ್ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಅರ್ಹ ಪದವೀಧರರನ್ನು ಜಿಪಿಟಿ ಹುದ್ದೆಗಳಿಗೆ ಮುಂಬಡ್ತಿಯನ್ನು ಕೊಡದೇ ಒಂದರಿಂದ 5ನೇ ತರಗತಿಯವರೆಗೆ ಮಾತ್ರ ಬೋಧಿಸುವ ಪಿ.ಎಸ್.ಟಿ. ಶಿಕ್ಷಕರಾಗಿ ನಮಗೆ ಹಿಂಬಡ್ತಿಯನ್ನು ನೀಡಿದಂತಾಗಿದೆ.

ಇದರಿಂದ ಹೊಸದಾಗಿ ನೇಮಕಗೊಂಡಂತಹ ಜಿ.ಪಿ.ಟಿ. ಶಿಕ್ಷಕರ ಕೈ ಕೆಳಗೆ ಕೆಲಸ ಮಾಡುವಂತಾಗುತ್ತದೆ. ಪಿ.ಎಸ್.ಟಿ. ಶಿಕ್ಷಕರುಗಳಿಗೆ ಮುಂಬಡ್ತಿ ನೀಡಿದರೆ ಸರ್ಕಾರಕ್ಕಾಗಲೀ ಇಲಾಖೆಗಾಗಲೀ ಯಾವುದೇ ಆರ್ಥಿಕ ಹೊರೆ ಮತ್ತು ನಷ್ಟವುಂಟಾಗುವುದಿಲ್ಲ. ಈ ಬಗ್ಗೆ ಕಳೆದ 2 ವರ್ಷಗಳಿಂದ ಹಿಂದಿನ ಸರ್ಕಾರದ ಶಿಕ್ಷಣ ಸಚಿವರಾಗಿದ್ದ ನಾಗೇಶ್ ಮತ್ತು ಎಲ್ಲಾ ಶಾಸಕರಿಗೆ, ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ದಿನಾಂಕ 24ರವರೆಗೆ ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಬಿಇಒ ಅವರ ಮೂಲಕ ಸರ್ಕಾರದ ಗಮನಕ್ಕೆ ತರಲಾಗಿದ್ದು, ನಮ್ಮ ಬೇಡಿಕೆ ಈಡೇರದಿದ್ದರೆ 6 ರಿಂದ 8 ನೇ ತರಗತಿಗಳ ಬೋಧನೆ ಮತ್ತು ಅವರಿಗೆ ಸಂಬಂಧಿಸಿದ ಎಲ್ಲಾ ಕಾರ್ಯ ಚಟುಚಟಿಕೆಗಳನ್ನು ಬಹಿಷ್ಕರಿಸಿ 1 ರಿಂದ 5 ನೇ ತರಗತಿಯವರೆಗೆ ಮಾತ್ರವೇ ಬೋಧಿಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಪ್ರಕಾಶ್ ನಾಯ್ಕ್, ಉಪಾಧ್ಯಕ್ಷರಾದ ನೀಲಮ್ಮ, ಕಾರ್ಯದರ್ಶಿ ಗೀತಾ, ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷ ಸಣ್ಣಪ್ಪ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ಎಚ್.ಕೆ.ಚಂದ್ರಶೇಖರ್, ಪದವೀಧರ ಸಂಘದ ಕಾರ್ಯದರ್ಶಿ ಮಹೇಶ್ವರಪ್ಪ, ಸಾವಿತ್ರಿಬಾಯಿ ಬಾಫುಲೆ ಅಧ್ಯಕ್ಷೆಯಾದ ಶಹಜಾನ್, ಕಾರ್ಯದರ್ಶಿ ರಂಜಿತಾ, ಬಿಆರ್‌ಪಿ ಅರುಣ್‌ಕುಮಾರ್, ಸಿ.ಆರ್.ಪಿ ಚಂದ್ರಾನಾಯ್ಕ್, ರುದ್ರೇಶ್, ಪುರುಷೋತ್ತಮ್, ಹಾಲಸ್ವಾಮಿ, ದಿಡಗೂರು ಪ್ರಶಾಂತ್, ತೋಟಪ್ಪ ಮತ್ತಿತರರು ಉಪಸ್ಥಿತರಿದ್ದರು.

# ನಗರದಲ್ಲಿಂದು ಪತ್ರಿಕಾ ದಿನಾಚರಣೆ, ಪದಗ್ರಹಣ

ದಾವಣಗೆರೆ, ಜು. 14- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಜಿಲ್ಲಾ ಮತ್ತು ತಾಲ್ಲೂಕು ಘಟಕದ ವತಿಯಿಂದ ನಾಳೆ ದಿನಾಂಕ 15 ರಂದು ಮಧ್ಯಾಹ್ನ 3 ಗಂಟೆಗೆ ನಗರದ ಗುರು ಭವನದಲ್ಲಿ ಪತ್ರಿಕಾ ದಿನಾಚರಣೆ ಹಾಗೂ ಪದಗ್ರಹಣ ಮತ್ತು ಸನ್ಮಾನ ಸಮಾರಂಭ ಏರ್ಪಡಿಸಲಾಗಿದೆ ಎಂದು ಸಂಘಟನೆ ರಾಜ್ಯಾಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂಘದ ರಾಜ್ಯ ಉಪಾಧ್ಯಕ್ಷ ಬಿ. ವಾಸುದೇವ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರಾದ ಬಸವರಾಜ್ ಶಿವಗಂಗಾ, ಕೆ.ಎಸ್. ಬಸವರಾಜ್, ಡಿ.ಜಿ. ಶಾಂತನಗೌಡ, ಬಿ. ದೇವೇಂದ್ರಪ್ಪ, ಬಿ.ಪಿ. ಹರೀಶ್, ಮೇಯರ್ ವಿನಾಯಕ ಪೈಲ್ವಾನ್, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಎಸ್ಪಿ ಡಾ. ಕೆ. ಅರುಣ್, ಉಪ ವಿಭಾಗಾಧಿಕಾರಿ ದುರ್ಗಾಶ್ರೀ, ದೂಡಾ ಆಯುಕ್ತ ಬಸವನಗೌಡ ಕೋಟೂರ, ತಹಶೀಲ್ದಾರ್ ಡಾ. ಅಶ್ವತ್ಥ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಕೆ. ನಾಗರಾಜ್, ತಾಲ್ಲೂಕು ಸಹಾಯಕ ನಿರ್ದೇಶಕರಾದ ಬೇಬಿ ಸುನೀತ, ಜಗಳೂರು ತಾಲ್ಲೂಕು ಸಹಾಯಕ ನಿರ್ದೇಶಕ ಬಿ.ಮಹೇಶ್ವರಪ್ಪ, ಪಾಲಿಕೆ ಆಯುಕ್ತರಾದ ರೇಣುಕ, ಆರ್‌ಟಿಓ ಶ್ರೀಧರ್ ಮಲ್ನಾಡ್, ವಾರ್ತಾಧಿಕಾರಿ ಧನಂಜಯ, ಬೆಳಗಾವಿ ಎಸಿಎಫ್ ಬಿ. ಹೆಚ್. ಜಮಾದಾರ್, ನಿರ್ಮಿತಿ ಕೇಂದ್ರದ ವ್ಯವಸ್ಥಾಪಕ ಎಸ್.ಓ.ರವಿ, ಸಂಘದ ಜಿಲ್ಲಾಧ್ಯಕ್ಷ ಜಿ.ಹೆಚ್. ನಾಗರಾಜ್ ಆವರಗೆರೆ, ಗೌರವ ಸಲಹೆಗಾರ ಅಬ್ದುಲ್ ಮಜೀದ್ ಮತ್ತಿತರರು ಭಾಗವಹಿಸಲಿದ್ದಾರೆ.

ಇದೇ ವೇಳೆ ಪತ್ರಕರ್ತರಾದ ನಾಗರಾಜ್ ಬಡದಾಳ್, ಎಂ. ನಾಗರಾಜ್, ಕೆ. ಜೈಮುನಿ, ಸುರೇಶ್ ಕುಣಿಬೆಳಕೆರೆ ಅವರನ್ನು ಸನ್ಮಾನಿಸಲಾಗುವುದು.

ಪತ್ರಿಕಾಗೋಷ್ಠಿಯಲ್ಲಿ ಬಿ. ವಾಸುದೇವ್, ರೇವಣ್ಣ ಬಳ್ಳಾರಿ, ಸಂತೋಷ್ ದೊಡ್ಡಮನಿ, ಅಬ್ದುಲ್ ಮಜೀದ್, ಜಿ.ಹೆಚ್. ನಾಗರಾಜ್, ಎ.ಎಂ. ಕೊಟ್ರಯ್ಯ, ಬಿ. ಅಲ್ಲಾಬಕ್ಷಿ, ಎಂ. ಸುಕನ್ಯಾ, ಮಾಲಾ ಹನುಮಂತಪ್ಪ, ಸೌಮ್ಯ ಕಾಕಡೆ ಮತ್ತಿತರರು ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ ಅಂಗಡಿಗಳ ದಾಳಿ : 10 ಕೆ.ಜಿ. ಪ್ಲಾಸ್ಟಿಕ್ ವಶ



ಮಲೇಬೆನ್ನೂರು, ಜು.14 - ಇಲ್ಲಿನ ಪುರಸಭೆಯ ಅಧಿಕಾರಿಗಳು 'ಪ್ಲಾಸ್ಟಿಕ್ ಮುಕ್ತ ಅಭಿಯಾನ' ಹಿನ್ನೆಲೆಯಲ್ಲಿ ಗುರುವಾರ ಪಟ್ಟಣದ ಕ್ಯಾಂಟೀನ್, ಹೋಟೆಲ್, ಅಂಗಡಿ , ಫ್ರೂಟ್ ಸ್ಟಾಲ್ ಸೇರಿದಂತೆ ಸುಮಾರು 30 ಅಂಗಡಿಗಳ ಮೇಲೆ ದಾಳಿ ಮಾಡಿ 10 ಕೆಜಿಗೂ ಹೆಚ್ಚು ಪ್ಲಾಸ್ಟಿಕ್ ವಶಪಡಿಸಿಕೊಂಡಿದ್ದಾರೆ.ಅಲ್ಲದೆ ಈ ಅಂಗಡಿ ಮಾಲೀಕರಿಗೆ 2,500 ರೂ. ದಂಡ ವಿಧಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ತಿಳಿಸಿದ್ದಾರೆ. ಉಪ ತಹಶೀಲ್ದಾರ್ ಆರ್. ರವಿ, ಪುರಸಭೆ ಸದಸ್ಯರಾದ ಸಾಬೀರ್ ಅಲಿ, ಖಲೀಲ್, ಟಿ. ಹನುಮಂತಪ್ಪ, ಬಿ. ಸುರೇಶ್, ಓ.ಜಿ. ಕುಮಾರ್, ಅಧಿಕಾರಿಗಳಾದ ಉಮೇಶ್, ಹಾಲೇಶಪ್ಪ, ನವೀನ್, ಶಿವರಾಜ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.


## ಭಾವಪೂರ್ಣ ಶ್ರದ್ಧಾಂಜಲಿ

ನಮ್ಮ ಸಹಕಾರ ಸಂಘದ
ಹಿರಿಯ ಲೆಕ್ಕಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ

**ಶ್ರೀಮತಿ ಶುಭಾ ನವೀನ್**

ಅವರು ದಿನಾಂಕ 14.07.2023ರ ಶುಕ್ರವಾರ
ಅಕಾಲಿಕವಾಗಿ ನಿಧನರಾಗಿದ್ದು,
ಶ್ರೀಮತಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು
ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ
ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ
ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ**



**ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,**
# 307/9, ಕೆನರಾ ಬ್ಯಾಂಕ್ ಎದುರು, ಹದಡಿ ರಸ್ತೆ, ದಾವಣಗೆರೆ - 577 002.


## ಗಾಂಧಿ ನಗರದಲ್ಲಿ ಅಜ್ಜಿಹಬ್ಬ ಆಚರಣೆ



ದಾವಣಗೆರೆ, ಜು. 14- ಆಷಾಢ ಮಾಸದ ಕಡೆಯ ಶುಕ್ರವಾರ ಗಾಂಧಿ ನಗರ ಹಾಗೂ ಸುತ್ತ ಮುತ್ತಲಿನ ಸಾರ್ವಜನಿಕರು ಅಜ್ಜಿ ಹಬ್ಬವನ್ನು ಭಕ್ತಿಯಿಂದ ಆಚರಿಸಿದರು. ಶ್ರೀದೇವಿ ಮೈಲಮ್ಮನ ದೇವಸ್ಥಾನಕ್ಕೆ ಎಡೆ ಮೂಲಕ ಆಗಮಿಸಿದ್ದ ಭಕ್ತರು ಸರದಿ ಸಾಲಿನಲ್ಲಿ ನಿಂತು ದರ್ಶನ ಪಡೆದರು.

## ಬ್ಯಾಲದಹಳ್ಳಿ ಬಳಿ ರಸ್ತೆ ಅಪಘಾತ: ಸಾವು

ದಾವಣಗೆರೆ, ಜು. 14- ಬೈಕ್‌ಗೆ ಹಿಂಬದಿಯಿಂದ ಬುಲೇರೋ ವಾಹನ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ವ್ಯಕ್ತಿ ಮೃತಪಟ್ಟ ಘಟನೆ ಹರಿಹರ ತಾಲ್ಲೂಕು ಬ್ಯಾಲದಹಳ್ಳಿ ಪೆಟ್ರೋಲ್ ಬಂಕ್ ಹತ್ತಿರ ಬುಧವಾರ ರಾತ್ರಿ ನಡೆದಿದೆ.

ನಿಟ್ಟೂರು ಗ್ರಾಮದ ಚಂದ್ರಪ್ಪ (49) ಮೃತ ವ್ಯಕ್ತಿಯಾಗಿದ್ದು, ಇವರು ಸಂಬಂಧಿಯೊಂದಿಗೆ ಬೈಕ್‌ನಲ್ಲಿ ಬೆಳ್ಳೂಡಿಯಲ್ಲಿ ಗುಳೇನ ಹಬ್ಬಕ್ಕೆ ತೆರಳಿ ವಾಪಾಸ್ ನಿಟ್ಟೂರಿಗೆ ಬರುವಾಗ ಈ ಅಪಘಾತ ನಡೆದಿದೆ. ಮೃತರ ಪುತ್ರ ಬೀರೇಶ್ ಹರಿಹರ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## ಹುಚ್ಚೇಶ್ವರ ದೇವಾಲಯ ಆವರಣದ ಉರ್ದು ಶಾಲೆ ಸ್ಥಳಾಂತರಕ್ಕೆ ಮನವಿ

**ಹರಿಹರ**

ಹರಿಹರ, ಜು. 14 - ನಗರದ ಹಳ್ಳದಕೇರಿ ಬಡಾವಣೆಯಲ್ಲಿರುವ ಶ್ರೀ ಹುಚ್ಚೇಶ್ವರ ದೇವಸ್ಥಾನದ ಆವರಣದಲ್ಲಿ ತಾತ್ಕಾಲಿಕವಾಗಿ ನಡೆಸಲಾಗುತ್ತಿರುವ ಉರ್ದು ಶಾಲೆ ತೆರವುಗೊಳಿಸಬೇಕೆಂದು ಹಿಂದೂ ಜಾಗರಣ ವೇದಿಕೆಯ ಮುಖಂಡರು ಮನವಿ ಮಾಡಿಕೊಂಡಿದ್ದಾರೆ.

ಹಿಂದೆ ಉರ್ದು ಶಾಲೆ ನಡೆಸುವುದಕ್ಕೆ ಸ್ಥಳದ ಕೊರತೆ ಇದ್ದ ಪರಿಣಾಮ, ದೇವಸ್ಥಾನದ ಸ್ಥಳದಲ್ಲಿ ಉರ್ದು ಶಾಲೆ ನಡೆಸುವುದಕ್ಕೆ ತಾತ್ಕಾಲಿಕವಾಗಿ ಬಡಾವಣೆಯ ಹಿರಿಯರ ಸಮ್ಮುಖದಲ್ಲಿ, ಒಪ್ಪಂದದ ಮೇರೆಗೆ ಸ್ಥಳವನ್ನು ನೀಡಲಾಗಿದೆ. ಆದರೆ ಉರ್ದು ಶಾಲೆಗೆ ಎಪಿಎಂಸಿ ಆವರಣದ ಬಳಿ ಜಾಗವನ್ನು ನಿಗದಿ ಮಾಡಿದ್ದರೂ ಹೋಗುತ್ತಿಲ್ಲ. ಇದರಿಂದಾಗಿ ದೇವಸ್ಥಾನದಲ್ಲಿ ದೇವರಿಗೆ ಧಾರ್ಮಿಕ ವಿಧಿ ವಿಧಾನಗಳು ಹೆಚ್ಚು ನಡೆಯುವುದಕ್ಕೆ ತೊಂದರೆ ಆಗುತ್ತದೆ ಎಂದು ಬಿಇಒ ಹನುಮಂತಪ್ಪ ಅವರಿಗೆ ಮನವಿ ಸಲ್ಲಿಸಲಾಗಿದೆ.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಎ.ಬಿ. ವಿಜಯಕುಮಾರ್, ಹಿಂದೂ ಜಾಗರಣ ವೇದಿಕೆಯ ದಿನೇಶ್, ಬಸವನಗೌಡ ಹಳ್ಳದಕೇರಿ, ಗಿರೀಶ್, ಸಂತೋಷ ಗುಡಿಮನಿ, ವೀರೇಶ್ ಅಜ್ಜಣ್ಣನವರ್, ಸ್ವಾತಿ ಹನುಮಂತಪ್ಪ, ಮಹೇಶ್ ಮತ್ತಿತರರು ಹಾಜರಿದ್ದರು.



KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಅಗ್ನಿಶಾಮಕ ದಳದ ಸಿಬ್ಬಂದಿಯ ನೆಲೆಯೇ ಭದ್ರವಿಲ್ಲ !

## ಶಿಥಿಲವಾಗಿರುವ 60 ವರ್ಷಗಳ ಕಚೇರಿ ಹಾಗೂ ವಸತಿ ಗೃಹಗಳು





ದಾವಣಗೆರೆ, ಜು. 14 - ಅಗ್ನಿ ಮತ್ತಿತರೆ ಅವಘಡಗಳು ಸಂಭವಿಸಿದರೆ ನೆರವಿಗೆ ಬರುವ ಅಗ್ನಿಶಾಮಕ ದಳದ ಸಿಬ್ಬಂದಿಯ ನೆಲೆಯೇ ಭದ್ರವಿಲ್ಲ. ನಗರದಲ್ಲಿರುವ 60 ವರ್ಷಗಳ ಹಳೆಯ ಕಚೇರಿ ಹಾಗೂ ವಸತಿ ಗೃಹಗಳು ಸಂಪೂರ್ಣ ಶಿಥಿಲವಾಗಿದ್ದು, ತಾರಸಿಯೇ ಕುಸಿದು ಬೀಳುವ ಪರಿಸ್ಥಿತಿಯಲ್ಲಿದೆ. ಮಳೆ ಬಂದರೆ ನುಗ್ಗುವ ನೀರನ್ನು ಹೊರ ಹಾಕುವುದು ನಿರಂತರ ಸಾಹಸವಾಗಿದೆ.

1964ರ ಸಮಯದಲ್ಲಿ ನಿರ್ಮಿಸಲಾದ ಹಳೆಯ ಕಟ್ಟಡದಲ್ಲಿ ಅಗ್ನಿಶಾಮಕ ದಳ ಕಾರ್ಯನಿರ್ವಹಿಸುತ್ತಿದೆ. 60 ವರ್ಷಗಳ ಹಳೆಯ ಕಚೇರಿ ಯಾವಾಗ ಕುಸಿದು ಬೀಳುತ್ತದೋ ಎಂಬ ದುಸ್ಥಿತಿಯಲ್ಲಿದೆ.

ವಸತಿ ಗೃಹಗಳ ಪರಿಸ್ಥಿತಿ ಇನ್ನೂ ಶೋಚನೀಯ. ಹಲವು ಮನೆಗಳು ಬದುಕುವುದಿರಲಿ, ಕಾಲಿಡಲೂ ಯೋಗ್ಯವಿಲ್ಲದೇ ಖಾಲಿ ಇವೆ. ಸಿಬ್ಬಂದಿ ಈಗ ನೆಲೆಸಿರುವ ಮನೆಗಳೂ ಯಾವ ದೃಷ್ಟಿಯಿಂದಲೂ ವಾಸ ಯೋಗ್ಯವಾಗಿ ಕಂಡು ಬರುತ್ತಿಲ್ಲ.



ಇದರಿಂದಾಗಿ ಅಗ್ನಿಶಾಮಕ ದಳದ ಸಿಬ್ಬಂದಿ ಕಚೇರಿಯಲ್ಲಿದ್ದರೂ, ಮನೆಯಲ್ಲಿದ್ದರೂ ತಾರಸಿ ನೋಡುತ್ತಾ ಕುಳಿತುಕೊಳ್ಳುವ ಪರಿಸ್ಥಿತಿ ಇದೆ. ಅಗ್ನಿಶಾಮಕ ದಳದ ಕೆಲಸವೇ ಒತ್ತಡದ್ದು. ಇದಾದ ನಂತರ ಮನೆಗೆ ಹೋದರೂ ನೆಮ್ಮದಿ ಸಿಗದ ಪರಿಸ್ಥಿತಿ ಇದೆ ಎಂದು ಇಲ್ಲಿನ ಸಿಬ್ಬಂದಿ ಹೇಳುತ್ತಾರೆ.

ವಸತಿ ಗೃಹಗಳು ಎಷ್ಟು ಹದಗೆಟ್ಟಿವೆ ಎಂದರೆ, ರಿಪೇರಿ ಕಾರ್ಯ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಸಂಬಂಧಿಗಳನ್ನು ಮನೆಗೆ ಕರೆಯಲೂ ಮುಜುಗರ ವಾಗುತ್ತದೆ. ಮನೆಗಳೂ ತೀರಾ ಚಿಕ್ಕವಿವೆ ಎಂದು ಇಲ್ಲಿ ನೆಲೆಸಿರುವ ಗೃಹಿಣಿಯೊಬ್ಬರು ತಮ್ಮ ಕಷ್ಟ ಹೇಳಿಕೊಂಡರು.

ಅಗ್ನಿಶಾಮಕ ದಳದ ಕೆಲಸ ತುರ್ತು ಸ್ವರೂಪದ್ದು. ಯಾವಾಗ ಕೆಲಸದ ಕರೆ ಬರುತ್ತದೋ ಗೊತ್ತಿರುವುದಿಲ್ಲ. ಹೀಗಾಗಿ ವಸತಿ ಗೃಹದಲ್ಲಿರುವುದೇ ಅನುಕೂಲ. ಅಲ್ಲದೇ, ಹೊರಗಡೆ ಬಾಡಿಗೆ ದುಬಾರಿಯಾಗಿದೆ. ಹೀಗಾಗಿ ಕಷ್ಟವಾದರೂ ಇಲ್ಲೇ ಮುಂದುವರೆಯುತ್ತಿದ್ದೇವೆ ಎಂದು ಸಿಬ್ಬಂದಿ ಹೇಳಿದ್ದಾರೆ.

**ಕರ್ತವ್ಯವೋ ರಕ್ಷಣೆಯೋ? :** ವಲಯ - ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳ ಕಚೇರಿ ಹಾಗೂ ವಸತಿ ಗೃಹಗಳಿರುವ 5 ಎಕರೆ ಪ್ರದೇಶವು ರಸ್ತೆಗಿಂತ ಒಂದು ಮೀಟರ್‌ನಷ್ಟು ತಗ್ಗಿನಲ್ಲಿದೆ. ಪ್ರತಿ ಬಾರಿ ಮಳೆ ಬಂದಾಗಲೂ ಇಲ್ಲಿಗೆ ನೀರು ನುಗ್ಗುವ ಅಪಾಯ ಇದೆ.

2013 ಹಾಗೂ 2017ರಲ್ಲಿ ಭಾರೀ ಮಳೆಯಿಂದಾಗಿ ಈ ಪ್ರದೇಶ 4-5 ಅಡಿ ಜಲಾವೃತವಾಗಿತ್ತು. ಈಗಲೂ ಮಳೆ ಬಂದಾಗಲೆಲ್ಲಾ ನೀರು ಹೊರ ಹಾಕಲು ಠಾಣೆಯಲ್ಲಿ ಲಭ್ಯವಿರುವ ವಾಹನ ಮತ್ತು ಪಂಪ್‌ಗಳನ್ನು ಬಳಸಲಾಗುತ್ತಿದೆ. ಮಳೆ ತೀವ್ರವಾದಾಗ ಸಾರ್ವಜನಿಕರಿಗೆ ನೆರವಾಗಲು ತೆರಳಬೇಕೋ ಅಥವಾ ನಮ್ಮ ಕುಟುಂಬಗಳ ರಕ್ಷಣೆಯಲ್ಲಿ ತೊಡಗಬೇಕೋ ಎಂಬ ಸವಾಲು ಎದುರಾಗುತ್ತಿದೆ ಎಂದು ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ಅಧಿಕಾರಿಗಳು ಹೇಳುತ್ತಾರೆ.

**ದಾವಣಗೆರೆಯಲ್ಲಿ ಮಾತ್ರ ಸಮಸ್ಯೆ :** ದಾವಣಗೆರೆ ವಲಯ ಕಚೇರಿಯ ವ್ಯಾಪ್ತಿಗೆ ದಾವಣಗೆರೆ, ಚಿತ್ರದುರ್ಗ ಹಾಗೂ ಹಾವೇರಿ ಜಿಲ್ಲೆಗಳು ಒಳಪಡುತ್ತವೆ. ಎಲ್ಲ ಕಡೆ ಕಚೇರಿಗಳು ಸುಸ್ಥಿತಿಯಲ್ಲಿವೆ. ಆದರೆ, ದಾವಣಗೆರೆಯಲ್ಲಿ ಮಾತ್ರ ಸಮಸ್ಯೆ ಉಳಿದುಕೊಂಡಿದೆ.

ಅಗ್ನಿ ಶಾಮಕ ದಳದ ಸುಗಮ ಕಾರ್ಯನಿರ್ವಹಣೆಗಾಗಿ 6 ವಾಹನಗಳ ನಿಲುಗಡೆಗೆ ಅವಕಾಶವಿರುವ ಠಾಣೆ, ನೂತನ ಪ್ರಾದೇಶಿಕ ಅಗ್ನಿಶಾಮಕ ಕಚೇರಿ ಹಾಗೂ ಅಗ್ನಿಶಾಮಕ ವಸತಿ ಗೃಹದ ನಿರ್ಮಾಣಕ್ಕಾಗಿ ಸ್ಮಾರ್ಟ್ ಸಿಟಿ ಕಚೇರಿಗೆ ಪ್ರಸ್ತಾವನೆಯೊಂದನ್ನು ಕಳಿಸಲಾಗಿದೆ. ಆದರೆ, ಅದಕ್ಕಿನ್ನೂ ಅನುಮೋದನೆ ಸಿಗಬೇಕಿದೆ.

# ಕೆಲವು ರೈಲುಗಳು ರದ್ದು / ಭಾಗಶಃ ರದ್ದು / ಮಾರ್ಗ ಬದಲಾವಣೆ / ನಿಯಂತ್ರಣ



ಮಂಡ್ಯ ನಿಲ್ದಾಣ ಹತ್ತಿರದ ಲೆವೆಲ್ ಕ್ರಾಸ್ ಗೇಟ್– 73ರ ಕೆಳ ಸೇತುವೆ ಕಾಮಗಾರಿಯ ಸಲುವಾಗಿ ಜುಲೈ 04 ರಿಂದ 31 ರವರೆಗೆ ಈ ಕೆಳಗಿನ ಕೆಲವು ರೈಲುಗಳನ್ನು ರದ್ದು/ಭಾಗಶಃ ರದ್ದು/ ಮಾರ್ಗ ಬದಲಾವಣೆ ಮತ್ತು ನಿಯಂತ್ರಿಸಲಾಗುತ್ತಿದೆ. ಅವುಗಳ ಸಂಪೂರ್ಣ ಮಾಹಿತಿ ಈ ಕೆಳಗಿನಂತಿವೆ.

**ರೈಲು ರದ್ದು:**

1. ಜುಲೈ 22 ರಂದು ಮೈಸೂರಿನಿಂದ ಪ್ರಾರಂಭಿಸುವ ರೈಲು ಸಂಖ್ಯೆ 06269 ಮೈಸೂರು - ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲನ್ನು ರದ್ದುಗೊಳಿಸಲಾಗುತ್ತಿದೆ.

### ಭಾಗಶಃ ರದ್ದು :

1. ರೈಲು ಸಂಖ್ಯೆ 06255 ಕೆ.ಎಸ್.ಆರ್ ಬೆಂಗಳೂರು - ಮೈಸೂರು ಮೆಮು ರೈಲನ್ನು ಜುಲೈ 17 ಮತ್ತು 22 ರಂದು ಮದ್ದೂರು-ಮೈಸೂರು ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳಿಸಲಾಗುತ್ತಿದೆ. ಈ ರೈಲು ಮದ್ದೂರಿನಲ್ಲಿ ತನ್ನ ಪ್ರಯಾಣ ಕೊನೆಗೊಳಿಸಲಿದೆ.
2. ರೈಲು ಸಂಖ್ಯೆ 06560 ಮೈಸೂರು – ಕೆ.ಎಸ್.ಆರ್ ಬೆಂಗಳೂರು ಮೆಮು ರೈಲನ್ನು ಜುಲೈ 17 ಮತ್ತು 22 ರಂದು ಮೈಸೂರು-ಮದ್ದೂರು ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳಿಸಲಾಗುತ್ತಿದೆ. ಈ ರೈಲು ಮದ್ದೂರು ನಿಲ್ದಾಣದಿಂದ ಹೊರಡಲಿದೆ.
3. ರೈಲು ಸಂಖ್ಯೆ 06267 ಅರಸೀಕೆರೆ - ಮೈಸೂರು ಎಕ್ಸ್‌ಪ್ರೆಸ್ ವಿಶೇಷ ರೈಲನ್ನು ಜುಲೈ 22 ರಂದು ಹಾಸನ-ಮೈಸೂರು ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳಿಸಲಾಗುತ್ತಿದೆ. ಈ ರೈಲು ಹಾಸನದಲ್ಲಿ ತನ್ನ ಪ್ರಯಾಣ ಕೊನೆಗೊಳಿಸಲಿದೆ.
4. ರೈಲು ಸಂಖ್ಯೆ 06559 ಕೆ.ಎಸ್.ಆರ್ ಬೆಂಗಳೂರು - ಮೈಸೂರು ಮೆಮು ರೈಲನ್ನು ಜುಲೈ 26 ಮತ್ತು 31 ರಂದು ಮದ್ದೂರು-ಮೈಸೂರು ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳಿಸಲಾಗುತ್ತಿದೆ. ಈ ರೈಲು ಮದ್ದೂರು ನಿಲ್ದಾಣದಲ್ಲಿ ತನ್ನ ಪ್ರಯಾಣ ಕೊನೆಗೊಳಿಸಲಿದೆ.
5. ರೈಲು ಸಂಖ್ಯೆ 06256 ಮೈಸೂರು – ಕೆ.ಎಸ್.ಆರ್ ಬೆಂಗಳೂರು ಮೆಮು ರೈಲನ್ನು ಜುಲೈ 26 ಮತ್ತು 31 ರಂದು ಮೈಸೂರು-ಮದ್ದೂರು ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳಿಸಲಾಗುತ್ತಿದೆ. ಈ ರೈಲು ಮದ್ದೂರು ನಿಲ್ದಾಣದಿಂದ ಹೊರಡಲಿದೆ.

### ಮಾರ್ಗ ಮಧ್ಯ ನಿಯಂತ್ರಣ :

1. ಜುಲೈ 16 ರಂದು ಅಜ್ಮೀರ್‌ನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 16209 ಅಜ್ಮೀರ್ - ಮೈಸೂರು ಎಕ್ಸ್‌ಪ್ರೆಸ್ ರೈಲನ್ನು ಹುಬ್ಬಳ್ಳಿ, ಮೈಸೂರು ಮತ್ತು ಬೆಂಗಳೂರು ವಿಭಾಗದಲ್ಲಿ ತಲಾ 30 ನಿಮಿಷಗಳ ಕಾಲ ನಿಯಂತ್ರಿಸಲಾಗುತ್ತಿದೆ.
2. ಜುಲೈ 17 ರಂದು ಮಂಗಳೂರು ಸೆಂಟ್ರಲ್‌ನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 16586 ಮಂಗಳೂರು ಸೆಂಟ್ರಲ್ - ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲನ್ನು ಮಾರ್ಗ ಮಧ್ಯ 45 ನಿಮಿಷ ಕಾಲ ನಿಯಂತ್ರಿಸಲಾಗುತ್ತಿದೆ.
3. ಜುಲೈ 17 ರಂದು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರಿನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 06270 ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ರೈಲನ್ನು ಮಾರ್ಗ ಮಧ್ಯ 10 ನಿಮಿಷ ಕಾಲ ನಿಯಂತ್ರಿಸಲಾಗುತ್ತಿದೆ.
4. ಜುಲೈ 21 ರಂದು ಅಜ್ಮೀರ್‌ನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 16209 ಅಜ್ಮೀರ್ - ಮೈಸೂರು ಎಕ್ಸ್‌ಪ್ರೆಸ್ ರೈಲನ್ನು ಮಾರ್ಗ ಮಧ್ಯ 30 ನಿಮಿಷ ಕಾಲ ನಿಯಂತ್ರಿಸಲಾಗುತ್ತಿದೆ.
5. ಜುಲೈ 22 ರಂದು ರೆಣಿಗುಂಟಾದಿಂದ ಪ್ರಾರಂಭವಾಗುವ ರೈಲು ಸಂಖ್ಯೆ 22136 ರೆಣಿಗುಂಟಾ - ಮೈಸೂರು ಎಕ್ಸ್‌ಪ್ರೆಸ್ ರೈಲನ್ನು ಮಾರ್ಗ ಮಧ್ಯ 75 ನಿಮಿಷ ಕಾಲ ನಿಯಂತ್ರಿಸಲಾಗುತ್ತಿದೆ.
6. ಜುಲೈ 23 ರಂದು ಮೈಸೂರಿನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 06256 ಮೈಸೂರು – ಕೆ.ಎಸ್. ಆರ್ ಬೆಂಗಳೂರು ಮೆಮು ರೈಲನ್ನು ಮಾರ್ಗ ಮಧ್ಯ 10 ನಿಮಿಷ ಕಾಲ ನಿಯಂತ್ರಿಸಲಾಗುತ್ತಿದೆ.
7. ಜುಲೈ 23 ರಂದು ಮೈಸೂರಿನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 17326 ಮೈಸೂರು – ಬೆಳಗಾವಿ ರೈಲನ್ನು ಮಾರ್ಗ ಮಧ್ಯ 30 ನಿಮಿಷ ಕಾಲ ನಿಯಂತ್ರಿಸಲಾಗುತ್ತಿದೆ.
8. ಜುಲೈ 30 ರಂದು ಎಂ.ಜಿ.ಆರ್ ಚೆನ್ನೈ ಸೆಂಟ್ರಲ್‌ನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 16021 ಎಂ.ಜಿ.ಆರ್ ಚೆನ್ನೈ ಸೆಂಟ್ರಲ್ - ಮೈಸೂರು ಎಕ್ಸ್‌ಪ್ರೆಸ್ ರೈಲನ್ನು ಮಾರ್ಗ ಮಧ್ಯ 90 ನಿಮಿಷ ಕಾಲ ನಿಯಂತ್ರಿಸಲಾಗುತ್ತಿದೆ.
9. ಜುಲೈ 30 ರಂದು ತಿರುಪತಿಯಿಂದ ಪ್ರಾರಂಭವಾಗುವ ರೈಲು ಸಂಖ್ಯೆ 16220 ತಿರುಪತಿ - ಚಾಮರಾಜನಗರ ಎಕ್ಸ್‌ಪ್ರೆಸ್ ರೈಲನ್ನು ಮಾರ್ಗ ಮಧ್ಯ 30 ನಿಮಿಷ ಕಾಲ ನಿಯಂತ್ರಿಸಲಾಗುತ್ತಿದೆ.

### ಮಾರ್ಗ ಬದಲಾವಣೆ :

1. ಜುಲೈ 22 ಮತ್ತು 30 ರಂದು ಸರ್. ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರಿನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 16585 ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು - ಮಂಗಳೂರು ಸೆಂಟ್ರಲ್ ಎಕ್ಸ್‌ಪ್ರೆಸ್ ರೈಲು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು, ಬಾಣಸವಾಡಿ, ಹೆಬ್ಬಾಳ, ಯಶವಂತಪುರ ಎ ಕ್ಯಾಬಿನ್, ಚಿಕ್ಕ ಬಾಣಾವರ, ನೆಲಮಂಗಲ, ಹಾಸನ ನಿಲ್ದಾಣಗಳ ಮೂಲಕ ಸಂಚರಿಸಲಿದೆ. ಹೀಗಾಗಿ ಬೆಂಗಳೂರು ಕಂಟೋನ್ಮೆಂಟ್, ಕೆ.ಎಸ್.ಆರ್ ಬೆಂಗಳೂರು, ಕೆಂಗೇರಿ, ರಾಮನಗರ, ಚನ್ನಪಟ್ಟಣ, ಮಂಡ್ಯ, ಮೈಸೂರು, ಕೃಷ್ಣರಾಜನಗರ ಮತ್ತು ಹೊಳೆ ನರಸಿಪುರ ನಿಲ್ದಾಣಗಳಲ್ಲಿ ನಿಲುಗಡೆ ಇರುವುದಿಲ್ಲ.

### ತಡವಾಗಿ ಪ್ರಾರಂಭ/ನಿಯಂತ್ರಣ :

1. ಜುಲೈ 23 ರಂದು ಮೈಸೂರಿನಿಂದ ಪ್ರಾರಂಭಿಸುವ ರೈಲು ಸಂಖ್ಯೆ 12610 ಮೈಸೂರು – ಎಂ.ಜಿ.ಆರ್. ಚೆನ್ನೈ ಸೆಂಟ್ರಲ್ ಎಕ್ಸ್‌ಪ್ರೆಸ್ ರೈಲನ್ನು ಮೂಲ ನಿಲ್ದಾಣದಿಂದ 45 ನಿಮಿಷ ತಡವಾಗಿ ಮತ್ತು 30 ನಿಮಿಷ ಕಾಲ ಮಾರ್ಗ ಮಧ್ಯ ನಿಯಂತ್ರಿಸಲಾಗುತ್ತಿದೆ.
2. ಜುಲೈ 23 ರಂದು ಬೆಂಗಳೂರಿನಿಂದ ಪ್ರಾರಂಭಿಸುವ ರೈಲು ಸಂಖ್ಯೆ 06559 ಕೆ.ಎಸ್.ಆರ್ ಬೆಂಗಳೂರು - ಮೈಸೂರು ಮೆಮು ರೈಲನ್ನು ಮೂಲ ನಿಲ್ದಾಣದಿಂದ 45 ನಿಮಿಷ ತಡವಾಗಿ ಮತ್ತು 30 ನಿಮಿಷ ಕಾಲ ಮಾರ್ಗ ಮಧ್ಯ ನಿಯಂತ್ರಿಸಲಾಗುತ್ತಿದೆ.
3. ಜುಲೈ 23 ರಂದು ಮೈಸೂರಿನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 06256 ಮೈಸೂರು – ಕೆ.ಎಸ್. ಆರ್ ಬೆಂಗಳೂರು ಮೆಮು ರೈಲನ್ನು 60 ನಿಮಿಷ ಕಾಲ ಮಾರ್ಗ ಮಧ್ಯ ನಿಯಂತ್ರಿಸಲಾಗುತ್ತಿದೆ.
4. ಜುಲೈ 25 ರಂದು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರಿನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 06270 ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ರೈಲನ್ನು ಮೂಲ ನಿಲ್ದಾಣದಿಂದ 70 ನಿಮಿಷ ಕಾಲ ತಡವಾಗಿ ಪ್ರಾರಂಭಿಸಲಾಗುತ್ತಿದೆ.

## ಮೋದಿಗೆ ಫ್ರಾನ್ಸ್‌ನ ಅತ್ಯುನ್ನತ ಗೌರವ

(1ನೇ ಪುಟದಿಂದ) ಪ್ಯಾಲೇಸ್‌ನಲ್ಲಿ ಅವರು ಗೌರವ ಪಡೆದುಕೊಂಡಿದ್ದಾರೆ. ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ನೆಲ್ಸನ್ ಮಂಡೇಲ, ಬ್ರಿಟನ್ ದೊರೆ ಚಾರ್ಲ್ಸ್, ಜರ್ಮನಿ ಮಾಜಿ ಚಾನ್ಸಲರ್ ಅಂಜೆಲಾ ಮರ್ಕೆಲ್ ಮುಂತಾದವರು ಈ ಗೌರವ ಪಡೆದುಕೊಂಡಿದ್ದಾರೆ. ಫ್ರಾನ್ಸ್‌ಗೆ ಎರಡು ದಿನಗಳ ಭೇಟಿ ನೀಡಿರುವ ಪ್ರಧಾನಿ ಮೋದಿ ಅವರಿಗೆ ಆತ್ಮೀಯ ಸ್ವಾಗತ ನೀಡಲಾಯಿತು. ನಂತರ ಫ್ರಾನ್ಸ್ ಅಧ್ಯಕ್ಷ ಎಮ್ಮಾನ್ಯುಯಲ್ ಮೆಕ್ರಾನ್ ಅವರು ಉನ್ನತ ಪ್ರಶಸ್ತಿ ಪ್ರದಾನ ಮಾಡಿದರು.

## ಆಹಾರ ಕಳಪೆಯಾದರೆ ಕ್ರಮ

(1ನೇ ಪುಟದಿಂದ) ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ. ಪ್ರತಿಯೊಂದನ್ನು ಪರಿಶೀಲನೆ ನಡೆಸಿಯೇ ವಿತರಣೆ ಮಾಡಬೇಕು. ಅವರು ಯಾವ ರೀತಿ ಇದು ವಿತರಣೆಯಾಗಿದೆ ಎಂಬುದರ ಕುರಿತು ಸಂಪೂರ್ಣ ತನಿಖೆ ನಡೆಸಲಾಗುವುದು ಎಂದರು. ನಮ್ಮ ಇಲಾಖೆಯಲ್ಲಿ ದುರುಪಯೋಗ ನಡೆದಿರುವುದು ನಿಮ್ಮ ಬಳಿ ದಾಖಲೆಗಳಿದ್ದರೆ ಕೊಡಿ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೆಬ್ಬಾಳ್ಕರ್ ಆಶ್ವಾಸನೆ ನೀಡಿದರು.

## ಜೂನ್‌ನಲ್ಲಿ ರಫ್ತು ಶೇ.22 ಕುಸಿತ

(1ನೇ ಪುಟದಿಂದ) ಜೂನ್ ತಿಂಗಳಲ್ಲಿ ರಫ್ತು ಪ್ರಮಾಣ 20.3 ಶತಕೋಟಿ ಡಾಲರ್ ಆಗಿದೆ. ಕಳೆದ ವರ್ಷ ಇದೇ ತಿಂಗಳಲ್ಲಿ 22.07 ಶತಕೋಟಿ ಡಾಲರ್ ರಫ್ತು ಮಾಡಲಾಗಿತ್ತು. ಆಮದು ಸಹ ಶೇ.17.48ರಷ್ಟು ಇಳಿಕೆಯಾಗಿ 53.10 ಶತಕೋಟಿ ಡಾಲರ್ ಆಗಿದೆ.


ಕರ್ನಾಟಕ ಸರ್ಕಾರ

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ದಾವಣಗೆರೆ.**

ಜಿಲ್ಲಾ ಆರ್.ಸಿ.ಹೆಚ್. ವಿಭಾಗ, ಕೊಠಡಿ ಸಂಖ್ಯೆ: 1, ಎಸ್.ಎಸ್.ಐ.ಎಂ.ಎಸ್. ಆಸ್ಪತ್ರೆ ಹಿಂಭಾಗ, ಎನ್.ಸಿ.ಸಿ.ಕ್ಯಾಂಪ್ ಹತ್ತಿರ, ಶ್ರೀ ರಾಮ ನಗರರಸ್ತೆ, ಶ್ರೀ ರಾಮ ನಗರ, ದಾವಣಗೆರೆ–577005, , ಈ ಮೇಲ್–rchodavangere@gmail.com

ಸಂ:ಜಿನಿಫ/ದಾಗೆರೆ/ಎನ್‌ಹೆಚ್‌ಎಂ/ ನೇಮಕ/36/2023–24 ದಿನಾಂಕ:12/07/2023

**ಸಂಕ್ಷಿಪ್ತ ನೇಮಕಾತಿ ಅಧಿಸೂಚನೆ**

ರಾಷ್ಟ್ರೀಯ ಆರೋಗ್ಯ ಅಭಿಯಾನದ ವಿವಿಧ ಉಪ ಕಾರ್ಯಕ್ರಮಗಳಡಿ ಮಂಜೂರಾಗಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ 31/03/2024ರವರೆಗೆ ಹಾಗೂ 2024–25ನೇ ಸಾಲಿನ ಹುದ್ದೆಗಳ ಮುಂದುವರಿಕೆ ಪಿಐಪಿ ಅನುಮೋದನೆ ಷರತ್ತಿಗೊಳಪಟ್ಟಿರುತ್ತದೆ. ಎನ್‌ಹೆಚ್‌ಎಂ ನಿಯಾಮನುಸಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಿಂದ ಆಯ್ಕೆ ಮಾಡುವ ಹಾಗೂ ರಾಷ್ಟ್ರೀಯ ಆರೋಗ್ಯ ಆಭಿಯಾನದ ನಿಯಾಮನುಸಾರ "ರೋಸ್ಟರ್ ಕಂ ಮೆರಿಟ್ ಸಿಸ್ಟಮ್" ಅಧಾರದಲ್ಲಿ ನೇಮಕ ಮಾಡಲು ಆಸಕ್ತರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

**ಹುದ್ದೆಗಳ ವಿವರ:– ಪದನಾಮ:–** ಪ್ರಸೂತಿತಜ್ಞರು. **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ಲಕ್ಷ್ಯಕಾರ್ಯಕ್ರಮ. **ವಿದ್ಯಾರ್ಹತೆ:– DGO/ DNB /MD (OBG)** (2) **ಪದನಾಮ:–** ಅರವಳಿಕೆ ತಜ್ಞರು. **ಹುದ್ದೆ ಸಂಖ್ಯೆ:–** 02 **ಕಾರ್ಯಕ್ರಮ:–** ಲಕ್ಷ್ಯಕಾರ್ಯಕ್ರಮ /Obsteric ICU/HDU **ವಿದ್ಯಾರ್ಹತೆ:– DA/DNB/MD(Anaesthesia)** (3) **ಪದನಾಮ:–** ತಜ್ಞವೈದ್ಯರು **ಹುದ್ದೆ ಸಂಖ್ಯೆ:–**02 **ಕಾರ್ಯಕ್ರಮ:–** ಎನ್‌ಪಿಸಿಸಿ ಕಾರ್ಯಕ್ರಮ **ವಿದ್ಯಾರ್ಹತೆ:–** ಎಂಬಿಬಿಎಸ್: (ಆದ್ಯತೆ:– ಮೆಡಿಸಿನ್/ಆನ್‌ಸ್ತೀಷಿಯ (ಡಿಪ್ಲೋಮೊ/ಸ್ನಾತಕೋತ್ತರ) ರೆಡಿಯೋಥೆರಪಿ (ಡಿಪ್ಲೋಮೊ/ಸ್ನಾತಕೋತ್ತರ) **ವಯೋಮಿತಿ:–40 ವರ್ಷ** (4) **ಪದನಾಮ:–**ಮನೋವೈದ್ಯರು **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ಎನ್‌ಎಂಹೆಚ್‌ಪಿ ಕಾರ್ಯಕ್ರಮ **ವಿದ್ಯಾರ್ಹತೆ:–** ಎಂಸಿಐ ಯಿಂದಗುರುತಿಸಲ್ಪಟ್ಟ ಸಂಸ್ಥೆಯಿಂದ ಎಂಬಿಬಿಎಸ್ ಡಿಗ್ರಿ ಮತ್ತು ಎಂ.ಡಿ ಸೈಕಿಯಾಟ್ರಿ ಆಥವಾ ಡಿಪಿಎಂ ಆಥವಾ ಡಿಎನ್‌ಬಿ ಸೈಕಿಯಾಟ್ರಿ **ಆದ್ಯತೆ:–** ಯಾವುದೇ ಆಸ್ಪತ್ರೆಯಲ್ಲಿ ಮನೋವೈದ್ಯರಾಗಿ 2 ವರ್ಷಗಳ ಕೆಲಸ ಮಾಡಿದ ಅನುಭವ (5) **ಪದನಾಮ:–** ವೈದ್ಯಾಧಿಕಾರಿಗಳು **ಹುದ್ದೆ ಸಂಖ್ಯೆ:–** 19 **ಕಾರ್ಯಕ್ರಮ:–** ತಾಯಿ ಆರೋಗ್ಯ ಕಾರ್ಯಕ್ರಮ/ ಮಕ್ಕಳ ಅರೋಗ್ಯ ಕಾರ್ಯಕ್ರಮ ICU/HDU **ವಿದ್ಯಾರ್ಹತೆ:–** ಎಂಬಿಬಿಎಸ್ ಉತ್ತೀರ್ಣರಾಗಿರಬೇಕು ಮತ್ತು ಕಡ್ಡಾಯವಾಗಿ ಇಂಟರ್ ಶಿಫ್ ಪೂರೈಸಿರಬೇಕು ಹಾಗೂ KMC ನೊಂದವಣೆಯನ್ನು ಹೊಂದಿರತಕ್ಕದ್ದು. ಸಂಬಂಧಪಟ್ಟ ವಿಶ್ವವಿದ್ಯಾನಿಲಯದಿಂದ Convocation/Degree Certificate ನ್ನುಕಡ್ಡಾಯವಾಗಿ ಹೊಂದಿರಬೇಕು. ವಿಶೇಷ ಸೂಚನೆ:– ಕಡ್ಡಾಯ ಗ್ರಾಮೀಣ ಸೇವೆಯನ್ವಯ ಎಂಬಿಬಿಎಸ್ ವೈದ್ಯರು ಕರ್ತವ್ಯಕ್ಕೆ ಹಾಜರಾದಲ್ಲಿ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು. (6) **ಪದನಾಮ:–** ಜಿಲ್ಲಾ ಆಸ್ಪತ್ರೆಯ ಗುಣಮಟ್ಟ ವ್ಯವಸ್ಥಾಪಕರು **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ಜಿಲ್ಲಾ ಗುಣಮಟ್ಟ ಖಾತರಿ ಘಟಕ **ವಿದ್ಯಾರ್ಹತೆ:– UG qualification-MBBS/BDS/AYUSH/Nursing Life science /Social Science Graduate(Regular Full time from Recognized University) and PG Qualification –Masters in Hospital Administration /Health Management (Regular Full time from Recognized University) with 1 year experience in Public Health /Hospital Administration.** (7) **ಪದನಾಮ:–** ಆಡಿಯೋಮೆಟ್ರಿಕ್ ಅಸಿಸ್ಟೆಂಟ್ **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಪಿಪಿಸಿಡಿ.) **ವಿದ್ಯಾರ್ಹತೆ:– Diploma in Hearing Language and speech (DHLS) From a RCI Recognised Institute** (8) **ಪದನಾಮ:–** ಇನ್‌ಸ್ಟ್ರಕ್ಟರ್ ಫಾರ್ ಹೀಯರಿಂಗ್ ಇಂಪೇರಡ್ ಚಿಲ್ಡರ್ನ್. **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಪಿಪಿಸಿಡಿ.) **ವಿದ್ಯಾರ್ಹತೆ:–** Diploma in Training Young Deaf & Hearing Handicapped (DTYDHH) From a RCI Recognised Institute **(9) ಪದನಾಮ:–** ಪಂಚಕರ್ಮ ತಜ್ಞವೈದ್ಯರು **ಹುದ್ದೆ ಸಂಖ್ಯೆ:–**01 **ಕಾರ್ಯಕ್ರಮ:–** ಆಯುಷ್ ಕಾರ್ಯಕ್ರಮ **ವಿದ್ಯಾರ್ಹತೆ:–** ಪಂಚಕರ್ಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಸದರಿ ಅಭ್ಯರ್ಥಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಕಾಯಚಿಕಿತ್ಸಾ ವಿಷಯದಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳಿಗೆ ಆಯ್ಕೆ ಮಾಡಲಾಗುವುದು. ಅಥವಾ ಕನಿಷ್ಠ 3 ವರ್ಷಗಳು ಪಂಚಕರ್ಮ ವಿಭಾಗದಲ್ಲಿ ಕೆಲಸ ನಿರ್ವಹಿಸಿರುವ ಅನುಭವವುಳ್ಳ ಆರ್ಯುವೇದ ಪದವೀಧರ ವೈದ್ಯರಾಗಿರಬೇಕು. (ಪರಿಶಿಷ್ಠ ಪಂಗಡ/ಮಹಿಳಾ ಮೀಸಾಲಾತಿ) **(10) ಪದನಾಮ:–** 24/7 ಪ್ರಾ.ಆ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ /ಸಾರ್ವಜನಿಕ ಆಸ್ಪತ್ರೆ ಆಯುಷ್ ವೈದ್ಯರು **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ಆಯುಷ್ ಕಾರ್ಯಕ್ರಮ **ವಿದ್ಯಾರ್ಹತೆ:–** ಬಿ.ಎ.ಎಂ.ಎಸ್/ಬಿ.ಹೆಚ್.ಎಂ.ಎಸ್/ಬಿ.ಎನ್.ವೈ.ಎಸ್/ಬಿ.ಯು.ಎಂ.ಎಸ್/ಸಿದ್ಧಪದವಿ ವೈದ್ಯ ಪದ್ಧತಿಯಲ್ಲಿ ಅಂಗೀಕೃತ ವಿಶ್ವ ವಿದ್ಯಾಲಯದಿಂದ ಪದವಿ ಪಡೆದಿರಬೇಕು. ಕಡ್ಡಾಯವಾಗಿ ಹೌಸ್ಮನ್ ಶಿಪ್‌ಅನ್ನು ಮುಗಿಸಿರಬೇಕು ಅಂಗೀಕೃತ ನೊಂದಣಿ ಪ್ರಾಧಿಕಾರದಿಂದ ವೃತ್ತಿ ನೋಂದಣಿಯನ್ನು ಮಾಡಿಕೊಂಡಿರಬೇಕು. **(11) ಪದನಾಮ:–**ಡೆಂಟಲ್ ಹೈಜಿನಿಸ್ಟ್ **ಸಂಖ್ಯೆ:–**01 **ಕಾರ್ಯಕ್ರಮ:–** ಓರಲ್‌ಹೆಲ್ತ್ **ವಿದ್ಯಾರ್ಹತೆ:– 1) 10+2 Science from Recognized Board 2) Diploma in Dental Hygienist course from a recognized institution 3) Registration with state Dental Council. Exp two years of experience in a Dental College/Clinic)** (12) **ಪದನಾಮ:–** ಫಿಜಿಯೋಥೆರಾಪಿಸ್ಟ್ **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ಎನ್‌ಪಿಸಿಡಿಎಸ್ **ವಿದ್ಯಾರ್ಹತೆ:–** 1) **Bachelor Degree in Physiotherapy (B.P.T)** (13):– **ಪದನಾಮ:–** ಶುಶ್ರೂಷಕಿಯರು **ಹುದ್ದೆ ಸಂಖ್ಯೆ:–** 19 **ಕಾರ್ಯಕ್ರಮ:–** ತಾಯಿ ಆರೋಗ್ಯ ಕಾರ್ಯಕ್ರಮ/ಮಕ್ಕಳ ಆರೋಗ್ಯ /ಎನ್‌ಪಿಪಿಸಿ **ವಿದ್ಯಾರ್ಹತೆ:–** 1) ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಡಿಪ್ಲೋಮೊ ಇನ್ ನರ್ಸಿಂಗ್ ಪದವಿ ಹೊಂದಿರಬೇಕು.ಕರ್ನಾಟಕ ಕೌನ್ಸಲಿಂಗ್‌ನಲ್ಲಿ ನೊಂದವಣೆ/ಮರು ನವೀಕರಣ ಹೊಂದಿರಬೇಕು. ಅನುಭವ:– ಸಾರ್ವಜನಿಕ ಆರೋಗ್ಯ ಕಾರ್ಯಕ್ರಮದಲ್ಲಿ (ಆದ್ಯತೆ:– ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಕೆಲಸದ ಅನುಭವ) **(14) ಪದನಾಮ:–** ಹಿರಿಯ ಮಹಿಳಾ ಆರೋಗ್ಯ ಸಹಾಯಕಿಯರು **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ **ವಿದ್ಯಾರ್ಹತೆ:–** 1) ಹಿರಿಯ ಮಹಿಳಾ ಆರೋಗ್ಯ ಸಹಾಯಕಿ ತರಬೇತಿಯನ್ನು ಹೊಂದಿರಬೇಕು. ಈ ತರಬೇತಿಯು ಸೇವಾ ನಿರತರಿಗೆ ಮಾತ್ರ ನೀಡಲಾಗುತ್ತಿದ್ದು ಬಾಹ್ಯ ಮೂಲದಿಂದ ಅಭ್ಯರ್ಥಿಗಳು ಲಭ್ಯವಾಗುವ ಸಂಭವ ತೀರಾ ಕಡಿಮೆ ಇರುವುದರಿಂದ ಆರೋಗ್ಯವಂತ ನಿವೃತ್ತ ಕಿ.ಮ.ಆ. ಸಹಾಯಕಿಯರನ್ನು ಆಯ್ಕೆಗೆ ಪರಿಗಣಿಸಲಾಗುವುದು. **(15) ಪದನಾಮ:–** ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು. **ಹುದ್ದೆ ಸಂಖ್ಯೆ:–** 03 **ಕಾರ್ಯಕ್ರಮ:–** ರಾಷ್ಟ್ರೀಯ ನಗರಆರೋಗ್ಯಅಭಿಯಾನ **ವಿದ್ಯಾರ್ಹತೆ:–** 1) ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಕಿರಿಯಾ ಮಹಿಳಾ ಆರೋಗ್ಯ ಸಹಾಯಕಿ ತರಬೇತಿ ಹೊಂದಿರಬೇಕು. ಕರ್ನಾಟಕ ನರ್ಸಿಂಗ್ ಕೌನ್ಸಲಿಂಗ್‌ನಲ್ಲಿ ನೊಂದಾವಣೆಯಾಗಿರಬೇಕು. ಕಡ್ಡಾಯವಾಗಿ ಕಂಪ್ಯೂಟರ್ ಸಾಕ್ಷರತೆ ಹಾಗೂ ಪ್ರಮಾಣ ಪತ್ರ ಹೊಂದಿರಬೇಕು. **(16) ಪದನಾಮ:–** ಕಿರಿಯ ಪುರುಷ ಆರೋಗ್ಯ ಸಹಾಯಕರು **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ **ವಿದ್ಯಾರ್ಹತೆ:–** 1) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ರಾಜ್ಯದ ಆಯೋಗ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿವಿದೋದ್ದೇಶ ಮೂಲ ಆರೋಗ್ಯ ಕಾರ್ಯಕರ್ತರ ತರಬೇತಿಯನ್ನು ಪಡೆದಿರಬೇಕು. 2) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 3 ವರ್ಷಗಳ ಆರೋಗ್ಯ ನೀರಿಕ್ಷಕರ ಡಿಪ್ಲೋಮಾ ಹೊಂದಿರಬೇಕು. 3) ಪಿ.ಯು.ಸಿ (ವಿಜ್ಞಾನ) ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 2 ವರ್ಷಗಳ ಆರೋಗ್ಯ ನೀರಿಕ್ಷಕರ ಡಿಪ್ಲೋಮಾ ಹೊಂದಿರಬೇಕು. ಕಡ್ಡಾಯವಾಗಿ ಕಂಪ್ಯೂಟರ್ ಸಾಕ್ಷರತೆ ಹಾಗೂ ಪ್ರಮಾಣ ಪತ್ರ ಹೊಂದಿರಬೇಕು.

ಅಸಕ್ತರು ಅರ್ಜಿಗಳನ್ನು ದಿನಾಂಕ: 26/07/2023ರಂದು ಬೆಳಗ್ಗೆ 10–30ರಿಂದ 2–00ಗಂಟೆವರೆಗೆ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಛೇರಿ, ಶ್ರೀರಾಮನಗರ ರಸ್ತೆ, ದಾವಣಗೆರೆ ಎಸ್.ಎಸ್. ಆಸ್ಪತ್ರೆ ಹಿಂಭಾಗ, ಎನ್.ಸಿ.ಸಿ. ಕ್ಯಾಂಪ್ ಪಕ್ಕ, ದಾವಣಗೆರೆ ಇಲ್ಲಿ ಅರ್ಜಿಗಳನ್ನು ವಿತರಿಸಿ ಪಡೆಯಲಾಗುವುದು. ಅರ್ಜಿದಾರರು ಸೂಕ್ತ ಅರ್ಜಿಗಳನ್ನು ಪಡೆದು ಸರಿಯಾದ ವಿವರಗಳನ್ನು ತುಂಬಿ, ವಿದ್ಯಾರ್ಹತೆ, ಮೀಸಲಾತಿ ಮತ್ತು ಅನುಭವಕ್ಕೆ ಸಂಬಂಧಿಸಿದಂತೆ ಮೂಲದಾಖಲೆಗಳನ್ನು ಪರಿಶೀಲನೆಗೆ ಹಾಜರು ಪಡಿಸುವುದು. ಭರ್ತಿ ಮಾಡಿದ ಅರ್ಜಿಯೊಂದಿಗೆ ಇತ್ತೀಚಿನ ಭಾವಚಿತ್ರ ಹಾಗೂ ಒಂದು ಸೆಟ್ ಸ್ವಯಂಧೃಡಿಕೃತ ದಾಖಾಲಾತಿಗಳನ್ನು ಲಗತ್ತಿಸಿ ಅದೇ ದಿನ ಸಂಜೆ 5–00 ಗಂಟೆಗೆಯೊಳಗೆ ಅರ್ಜಿಗಳನ್ನು ಹಿಂದಿರುಗಿಸತಕ್ಕದು ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಸ್ಥಾನಿಕರಿಗೆ ಆದ್ಯತೆ ಕಂಪ್ಯೂಟರ್ ಸಾಕ್ಷರತೆ ಕಡ್ಡಾಯ ಹಾಗೂ ಸರ್ಕಾರದ /ಇಲಾಖೆಯ ನಿಯಾಮವಳಿಗಳಂತೆ ವಯೋಮಿತಿ ಮತ್ತು ಮೀಸಲಾತಿ ನಿಗದಿಪಡಿಸಲಾಗಿದೆ. ಮೇಲೆ ನಮೂದಿಸಿದ ಹುದ್ದೆಗಳನ್ನು ಹೆಚ್ಚಿಸುವುದು/ಕಡಿಮೆಗೊಳಿಸುವುದು ಯಾವುದೇ ಕಾರಣ ನೀಡದೇ ಈ ಆಯ್ಕೆ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಪಡಿಸುವ ತೀರ್ಮಾನ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಾಗಿರುತ್ತದೆ. ಪ್ರಕಟಿಸಿದ ಹುದ್ದೆಗಳ ವಿದ್ಯಾರ್ಹತೆ, ರೋಸ್ಟರ್ ಮತ್ತು ಅನುಭವ ಇತರೆ ಮಾಹಿತಿಗಳಿಗೆ ಸಂಬಂದಿಸಿದಂತೆ ಕಛೇರಿ ಸೂಚನಾ ಫಲಕದಲ್ಲಿ ನೇಮಕಾತಿ ಅಧಿಸೂಚನೆಯನ್ನು ಪ್ರಕಟಿಸಿದೆ.

ಸಹಿ/– **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ದಾವಣಗೆರೆ ಜಿಲ್ಲೆ**

ವಾಸಾಇ/ದಾವಣಗೆರೆ/119/ಕೆಎಸ್‌ಎಂಸಿಎ/2023–24


# ಅಮೆರಿಕ : ಹತ್ಯಾಕಾಂಡಗಳಲ್ಲಿ ಹೊಸ ದಾಖಲೆ

ನ್ಯೂಯಾರ್ಕ್, ಜು. 14 - ಹತ್ಯಾಕಾಂಡಗಳಲ್ಲಿ ಅಮೆರಿಕ ಹೊಸ ದಾಖಲೆ ಬರೆದಿದೆ. 2006ರ ನಂತರ ಇದೇ ಮೊದಲ ಬಾರಿಗೆ, ವರ್ಷದ ಆರು ತಿಂಗಳಲ್ಲಿ 28 ಸಾಮೂಹಿಕ ಹತ್ಯಾಕಾಂಡಗಳು ನಡೆದಿವೆ.

ಜನವರಿ 1ರಿಂದ ಜೂನ್ 30ರ ನಡುವೆ ಸರಣಿ ಹತ್ಯಾಕಾಂಡಗಳು ನಡೆದಿವೆ. ಪ್ರತಿ ವಾರವೂ ಹತ್ಯಾಕಾಂಡಗಳಿಂದ ಸಾವುಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಈ ಹತ್ಯಾಕಾಂಡಗಳಲ್ಲಿ 140 ಜನ ಸಾವನ್ನಪ್ಪಿದ್ದಾರೆ.

ದೊಡ್ಡ ಹಾಗೂ ಸಣ್ಣ ನಗರಗಳೆಂಬ ಭೇದವಿಲ್ಲದೇ, ಮನೆಗಳಿಂದ ಹಿಡಿದು ಶಾಲೆಗಳವರೆಗೆ ಎಲ್ಲೆಡೆ ಹತ್ಯಾಕಾಂಡಗಳು ನಡೆದಿವೆ. ಹಂತಕರನ್ನು ಹೊರತು ಪಡಿಸಿ 24 ಗಂಟೆಗಳಲ್ಲಿ ನಾಲ್ಕು ಅಥವಾ ಹೆಚ್ಚು ಜನರು ಸಾವನ್ನಪ್ಪಿದಾಗ ಅದನ್ನು ಹತ್ಯಾಕಾಂಡ ಎಂದು ಅಮೆರಿಕದ ಕಾನೂನು ಗುರುತಿಸುತ್ತದೆ.

ಕಳೆದ ವರ್ಷ ಮೊದಲ ಆರು ತಿಂಗಳಲ್ಲಿ 27 ಹತ್ಯಾಕಾಂಡಗಳು ನಡೆದಿದ್ದವು. ಈ ವರ್ಷ ಹಳೆಯ ದಾಖಲೆ ಮುರಿದಿದೆ. ಐದು ವರ್ಷಗಳ ಹಿಂದೆ ಈ ರೀತಿಯ ದಾಖಲೆ ಊಹಿಸಲಿಕ್ಕೂ ಆಗುತ್ತಿರಲಿಲ್ಲ ಎಂದು ನಾರ್ತ್‌ಈಸ್ಟರ್ನ್ ವಿಶ್ವ ವಿದ್ಯಾಲಯದ ಅಪರಾಧ ವಿಭಾಗದ ಉಪನ್ಯಾಸಕ ಜೇಮ್ಸ್ ಆಲನ್ ಫಾಕ್ಸ್ ಹೇಳಿದ್ದಾರೆ.

ಈ ಹಿಂದೆ ವರ್ಷಕ್ಕೆ ಎರಡು, ಇಲ್ಲವೇ ಮೂರು ಡಜನ್ ಹತ್ಯಾಕಾಂಡಗಳು ನಡೆಯುತ್ತಿದ್ದವು. ಈ ವರ್ಷ ಮೊದಲ ಆರು ತಿಂಗಳಲ್ಲೇ 28 ಹತ್ಯಾಕಾಂಡಗಳು ನಡೆದಿವೆ. 27 ಹತ್ಯಾಕಾಂಡಗಳಲ್ಲಿ ಬಂದೂಕು ಬಳಸಲಾಗಿದೆ ಎಂದವರು ಹೇಳಿದ್ದಾರೆ.

ಅಮೆರಿಕದಲ್ಲಿ ಬಂದೂಕು ಹೊಂದಿರುವವರ ಸಂಖ್ಯೆ ಹೆಚ್ಚಾಗುತ್ತಿರುವುದೇ ಹತ್ಯಾಕಾಂಡಗಳಿಗೆ ಕಾರಣ. ಒಟ್ಟಾರೆ ಬಂದೂಕಿನಿಂದ ಸಂಭವಿಸುವ ಹಿಂಸಾಚಾರ ಗಳು, ಹತ್ಯಾಕಾಂಡಗಳಿಗಿಂತ ಎಷ್ಟೋ ಪಟ್ಟು ಹೆಚ್ಚಾಗಿವೆ ಎಂದು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಹಿಂಸಾಚಾರ ತಡೆ ಸಂಶೋಧನಾ ಕಾರ್ಯಕ್ರಮದ ನಿರ್ದೇಶಕ ಡಾ. ಏಮಿ ಬಾರ್ನ್ಹಾರ್ಸ್ಟ್ ಹೇಳಿದ್ದಾರೆ.

ಬಂದೂಕು ಹಿಂಸಾಚಾರಗಳನ್ನು ತಡೆಯುವ ಸಲುವಾಗಿ ಕಾನೂನುಗಳನ್ನು ಜಾರಿಗೆ ತರಬೇಕು ಎಂಬ ಒತ್ತಾಯ ಅಮೆರಿಕದಲ್ಲಿ ಹಿಂದಿನಿಂದಲೂ ಕೇಳಿ ಬರುತ್ತಿದೆ. ಆದರೆ, ಈ ಬಗ್ಗೆ ರಾಜಕೀಯ ಒಮ್ಮತವಿಲ್ಲ. ಅಪಾಯಕಾರಿ ಎಂದು ಗುರುತಿಸಲಾದ ವ್ಯಕ್ತಿಗಳು ಬಂದೂಕು ಹೊಂದದಂತೆ ತಡೆಯಬೇಕು ಎಂಬ ಕಾಯ್ದೆಯ ಕುರಿತು ಒಮ್ಮತಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಆದರೆ, ಬಂದೂಕಿನ ಮೇಲೆ ನಿರ್ಬಂಧ ಹೇರುವುದರಿಂದ ಅಪರಾಧಿಗಳಿಗೆ ಉತ್ತೇಜನ ನೀಡಿದಂತಾಗುತ್ತದೆ. ಆತ್ಮರಕ್ಷಣೆಯ ಕಾಯ್ದೆ ಜಾರಿಗೆ ತರುವುದು ಸೂಕ್ತ ಎಂದು ನ್ಯಾಷನಲ್ ರೈಫಲ್ ಅಸೋಸಿಯೇಷನ್ ಪ್ರತಿಪಾದಿಸಿದೆ.

# ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಜವಳಿ ವರ್ತಕ ನೀಲಿ ಉಮೇಶ್











**ನಗರದಲ್ಲಿ ಇಂದಿನ ಪದಗ್ರಹಣ ಸಮಾರಂಭಕ್ಕೆ ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲರುಗಳಾದ ಜಯಕರ್ ಶೆಟ್ಟಿ ಇಂದ್ರಾಳಿ, ಸುಗ್ಗಲಾ ಯಲಮಲಿ**



ದಾವಣಗೆರೆ, ಜು.14- ನಗರದ ಲಯನ್ಸ್ ಕ್ಲಬ್‌ನ ನೂತನ 2023-24ನೇ ಸಾಲಿನ ಅಧ್ಯಕ್ಷರಾಗಿ ಜವಳಿ ವರ್ತಕ ನೀಲಿ ಉಮೇಶ್ ಆಯ್ಕೆಯಾಗಿದ್ದಾರೆ.

ನೀಲಿ ಉಮೇಶ್, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ದಿ. ನೀಲಿ ಹನುಮಂತಪ್ಪ ಮತ್ತು ದಿ. ಶ್ರೀಮತಿ ನಾಗಮ್ಮ ದಂಪತಿ ನಾಲ್ಕನೇ ಪುತ್ರ. ಪೂಜಾ ಡ್ರೆಸ್ ಲ್ಯಾಂಡ್ ಮಾಲೀಕರಾದ ಉಮೇಶ್, ತಮ್ಮ ಉದ್ಯಮದ ಜೊತೆಗೆ, ಸಾಮಾಜಿಕ ಸೇವೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದು, ಇದೀಗ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿದ್ದಾರೆ.

ಕಾರ್ಯದರ್ಶಿಯಾಗಿ ಭೀಮಾನಂದ ಶೆಟ್ಟಿ, ಖಜಾಂಚಿಯಾಗಿ ಕೆ.ಟಿ. ಮಹಾಲಿಂಗಪ್ಪ, ಸಹ ಕಾರ್ಯದರ್ಶಿಯಾಗಿ ಎಂ.ಎನ್. ಅಮಿತ್ ಆಯ್ಕೆಯಾಗಿದ್ದಾರೆ. ಡಾ. ಬಿ.ಎಸ್. ನಾಗಪ್ರಕಾಶ್, ಆರ್.ಜಿ. ಶ್ರೀನಿವಾಸ್ ಮೂರ್ತಿ, ಅಜ್ಜಂಪುರ ಶೆಟ್ರು ಮೃತ್ಯುಂಜಯ, ಎಸ್.ಓಂಕಾರಪ್ಪ ಸಲಹೆಗಾರರಾಗಿದ್ದಾರೆ.

ಉಪಾಧ್ಯಕ್ಷ ರುಗಳಾಗಿ ಎಸ್.ಜಿ. ಉಳುವಯ್ಯ, ಎನ್.ಸಿ. ಬಸವರಾಜ್, ಮಹಾಂತೇಶ್ ವಿ. ಒಣರೊಟ್ಟಿ, ಟೇಮರ್ ಆಗಿ ಪ್ರವೀಣ್ ರಾವ್ ಎಂ. ಪವಾರ್, ಟೈಲ್ ಟ್ವಿಸ್ಟರ್ ಆಗಿ ಯರ್ರಿಸ್ವಾಮಿ, ಸಂಪರ್ಕಾಧಿಕಾರಿಯಾಗಿ ಎನ್.ವಿ.ಬಂಡಿವಾಡ, ಟ್ವಿಸ್ಟ್ ಪ್ರೋಗ್ರಾಮ್ ಚೇರ್ಮನ್ ಆಗಿ ಸಿ. ಅಜಯ್ ನಾರಾಯಣ್, ಸದಸ್ಯತ್ವ ಸಮಿತಿ ಚೇರ್ಮನ್ ಆಗಿ ಬೆಳ್ಳೂಡಿ ಶಿವಕುಮಾರ್, ಕ್ಲಬ್ ವಿಸ್ತರಣಾ ಸಮಿತಿ ಚೇರ್ಮನ್ ಆಗಿ ಕೆ.ಎಸ್. ಸಂತೋಷ್ ಕುಮಾರ್, ಕ್ಲಬ್ ಮಾರ್ಕೆಟಿಂಗ್ ಚೇರ್ಮನ್ ಆಗಿ ಹೆಚ್.ವಿ. ಮಂಜುನಾಥಸ್ವಾಮಿ, ಎಲ್‌ಸಿಐಎಫ್ ಕೋ-ಆರ್ಡಿನೇಟರ್ ಚೇರ್ಮನ್ ಆಗಿ ಎ.ಎನ್. ಮದನ್ ಕುಮಾರ್, ಪ್ರಚಾರ ಸಮಿತಿ ಚೇರ್ಮನ್ ಆಗಿ ಇ.ಎಂ. ಮಂಜುನಾಥ, ಲಿಯೋ ಚೇರ್ಮನ್ ಆಗಿ ಎಂ.ಎಸ್. ಉದಯ್ ಕುಮಾರ್ ಆಯ್ಕೆಯಾಗಿದ್ದಾರೆ.

**ನಿರ್ದೇಶಕರುಗಳು :** ಬಿ.ವಿ.ಗಂಗಪ್ಪ ಶೆಟ್ಟಿ, ಹೆಚ್.ಸಿ. ರವಿಶಂಕರ್ ವಾಲಿ, ಜಂಬಗಿ ರಾಧೇಶ್, ಎನ್.ಕೆ.ಕೊಟ್ರೇಶ್, ಕೋರಿ ಶಿವಕುಮಾರ್, ಸಜ್ಜನ್ ನಾಗರಾಜ್, ಆರ್. ಆನಂದ ಕಂದ, ಪಿ.ಹೆಚ್. ಗೋವಿಂದರಾಜ್, ಮುರುಗೇಶ್ ಬಣಕಾರ್, ಆರ್.ಎನ್. ನಾಗೇಂದ್ರ, ಮಾಳಗಿ ಷಣ್ಮುಖಪ್ಪ, ಗುಂಡಾಲ್ ಮಂಜುನಾಥ್, ಬಿ.ಎಸ್. ಶಿವಾನಂದ, ಎಂ. ಬಸವರಾಜಪ್ಪ, ಹೆಚ್.ಎಂ. ನಾಗರಾಜ್, ಕೆ. ವಿ. ರಂಗನಾಥ ಶೆಟ್ಟಿ, ಎಂ.ಎನ್. ಮುರುಳೀಧರ ಗುಪ್ತ, ಮಾಳಗಿ ಕೊಟ್ರೇಶ್, ಟಿ.ವಿ. ಸುಬ್ಬರಾಜು, ಪಿ.ಸಿ. ಜಗದೀಶ್ ಕುಮಾರ್, ಹೆಚ್.ಕೆ. ಹೇಮಣ್ಣ, ಸೋಗಿ ಮುರುಗೇಶ್, ಡಾ. ಸುರೇಶ್, ಜೆ.ವಿ. ಬದರಿನಾಥ್, ಜಯದೇವ ಜೆ. ಚಿಗಟೇರಿ.

**ಪದಗ್ರಹಣ :** ದಾವಣಗೆರೆ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿರುವ ನೀಲಿ ಉಮೇಶ್ ಅವರ ನೇತೃತ್ವದ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ನಾಳೆ ದಿನಾಂಕ 15ರ ಶನಿವಾರ ಸಂಜೆ 6.30ಕ್ಕೆ ಚೌಕಿಪೇಟೆಯಲ್ಲಿರುವ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಸ್ವಾಮಿ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ದಾವಣಗೆರೆ ಲಯನ್ಸ್ ಕ್ಲಬ್ ಪ್ರಥಮ ಮಹಿಳೆ ಶ್ರೀಮತಿ ನೀಮಾ ನೀಲಿ ಉಮೇಶ್ ಅವರು, ಲಯನ್ಸ್ ಕ್ಲಬ್ ಹಾಲಿ ಅಧ್ಯಕ್ಷ ಎನ್. ಆರ್. ನಾಗಭೂಷಣರಾವ್ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಜಿಲ್ಲಾ ಲಯನ್ಸ್ 317ಸಿ ಮಾಜಿ ರಾಜ್ಯಪಾಲ ಜಯಕರ್ ಶೆಟ್ಟಿ ಇಂದ್ರಾಳಿ ಅವರು ನೂತನ ಪದಾಧಿಕಾರಿಗಳನ್ನು ಪ್ರತಿಷ್ಠಾಪಿಸುವರು.

ಜಿಲ್ಲಾ ಲಯನ್ಸ್ 317 ಬಿ ಮಾಜಿ ರಾಜ್ಯಪಾಲರಾದ ಶ್ರೀಮತಿ ಸುಗ್ಗಲಾ ಯಲಮಲಿ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಡಾ. ಬಿ.ಎಸ್. ನಾಗಪ್ರಕಾಶ್, ಲಯನ್ಸ್ ಪ್ರಾಂತೀಯ ಅಧ್ಯಕ್ಷ ಎಸ್. ಓಂಕಾರಪ್ಪ ಅತಿಥಿಗಳಾಗಿದ್ದಾರೆ.

**ಅಪಾರ್ಟ್‌ಮೆಂಟ್‌ನಲ್ಲಿ ಎರಡು ಮನೆಗಳು ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೆಯರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು ಹಾಗೂ ಎಲ್ಲಾ ಸೌಕರ್ಯವಿರುವ ಅಪಾರ್ಟ್‌ಮೆಂಟ್‌ನಲ್ಲಿ ಎರಡು ಮನೆಗಳು ಭೋಗ್ಯಕ್ಕಿವೆ. - ಬಿ.ಎಸ್. ಸಂತೋಷ್
96322 67555

**ಮನೆಗಳು ಮಾರಾಟಕ್ಕಿವೆ**
# 24, "ಸಿರಿಸಾರ" ಶ್ರೀ ದೇವರಾಜ ಅರಸ್ ಬಡಾವಣೆ, "ಬಿ" ಬ್ಲಾಕ್, 2ನೇ ಹಂತ, ಎಸ್.ಪಿ. ಆಫೀಸ್ ಎದುರುಗಡೆ ರಸ್ತೆ, ದಾವಣಗೆರೆಯಲ್ಲಿರುವ ಗ್ರೌಂಡ್ ಫ್ಲೋರ್, 2 ಮತ್ತು ಫಸ್ಟ್ ಫ್ಲೋರ್ 2
94489 63300

**ಸೈಟುಗಳು ಮಾರಾಟಕ್ಕಿವೆ**
ದೇವರಬೆಳಕೆರೆ ರೋಡ್, ತಿರುಮಲ ಬಾರ್ ಎದುರು ಪೂರ್ವ ಮತ್ತು ಪಶ್ಚಿಮ 30x50 ಅಳತೆಯ ಫೈನಲ್ ಅಪ್ರೂವಲ್ ಸೈಟುಗಳು ಮತ್ತು ಶ್ಯಾಬನೂರು ಶಿವ - ಪಾರ್ವತಿ ಲೇಔಟ್‌ನಲ್ಲಿ 40x70 ಅಡಿ ಅಳತೆಯ ಸೈಟುಗಳು ಮಾರಾಟಕ್ಕಿವೆ. Direct ಓನರ್.
ಮೊ. 97385-23711

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ಗ್ಲೋಬಲ್ ಸ್ಕೂಲ್ ಹತ್ತಿರ, 30x50, 30x50 South ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆಗೆ**
ಹಳೇ ಪಿ.ಬಿ. ರಸ್ತೆ, ಶ್ರೀಗಂಧ ಲಾಡ್ಜ್ ಪಕ್ಕದಲ್ಲಿ
1. ಗ್ರೌಂಡ್ ಫ್ಲೋರ್ - 800 ಅಡಿ
2. ಮೊದಲನೇ ಮಹಡಿ - 4000 ಅಡಿ
3. ಎರಡನೇ ಮಹಡಿ - 4000 ಅಡಿ
4. Terrace Floor - 4000 ಅಡಿ
5. Basement - 4000 ಅಡಿ
ಸಂಪರ್ಕಿಸಿ : ಮೊ. 94480 28103

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ ಮತ್ತು ಆಯಾ ಬೇಕಾಗಿದ್ದಾರೆ. ಈ ಕೆಳಗಿನ ಮೊಬೈಲ್ ನಂಬರ್ ಗೆ ತಮ್ಮ ಬಯೋಡೇಟಾದೊಂದಿಗೆ ಸಂಪರ್ಕಿಸಿ.
ಮೊ : 98450 35710

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಲೇಔಟ್‌ನಲ್ಲಿ 40x70 East, 40x70 ಕಾರ್ನರ್, 80x63 East, 40x63 East, 40 ಅಡಿ ರೋಡ್‌ಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಬಾರ್ & ರೆಸ್ಟೋರೆಂಟ್‌ನಲ್ಲಿ ಮ್ಯಾನೇಜರ್, ಕ್ಯಾಷಿಯರ್, ಸರ್ವರ್ ಕೆಲಸಕ್ಕೆ ಬೇಕಾಗಿದ್ದಾರೆ.
97316 45909
94489 47909

**EC / ಇಸಿ, E-swathu, Khatha Change Building Licence & Other Property Documents**
96118-66449

**ಮನೆ ಮತ್ತು ಗೋಡೌನ್ ಮಾರಾಟಕ್ಕಿದೆ**
ನರಸರಾಜ ರಸ್ತೆಯಲ್ಲಿ ಇರುವ ಮನೆ ಮತ್ತು ಎಪಿಎಂಸಿ ಯಾರ್ಡ್ 'ಸಿ' ಬ್ಲಾಕ್‌ನಲ್ಲಿ ಇರುವ ಗೋಡೌನ್ ಮಾರಾಟಕ್ಕಿದೆ.
90361 89699, 7259269940

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. PUC or any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**REQUIRED COMMERCIAL LAND FOR RENT**
- Shamanur road
- Ring road
- Service road
Shamanur to Vidyanagar.
Call : 99889-94562

**ಬೇಕಾಗಿದ್ದಾರೆ**
ತಕ್ಷಣ ಸೇಲ್ಸ್ ಗರ್ಲ್ಸ್, ಸೇಲ್ಸ್ ಬಾಯ್ಸ್ ಹಾಗೂ ಹೆಲ್ಪರ್ ಬೇಕಾಗಿದ್ದಾರೆ. ಸಂಪರ್ಕಿಸಿ : ಗಂಗಾವತಿ ಸಿಲ್ಕ್ಸ್ ಸ್ಯಾರಿ ಸೆಂಟರ್, ಬಿನ್ನಿ ಕಂಪನಿ ರೋಡ್, ದಾವಣಗೆರೆ -1.

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಅನುಭವ ಉಳ್ಳವರಿಗೆ ಮಾತ್ರ. 18,000/- ಸಾವಿರ ಸಂಬಳ ಕೊಡಲಾಗುತ್ತದೆ.
70262 70024

**COMMERCIAL SPACE FOR RENT**
**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಜೆರಾಕ್ಸ್ ಅಂಗಡಿಗೆ ಅನುಕೂಲವಾಗುವ ಮಳಿಗೆ ಬಾಡಿಗೆಗೆ ಇದೆ.
99452 49088
99001 88514

**ROOM FOR RENT**
**ರೂಂ ಬಾಡಿಗೆಗೆ ಇದೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಅಟ್ಯಾಚ್ ಬಾತ್ ರೂಂ ವುಳ್ಳ 15x15 ಅಳತೆಯುಳ್ಳ 1 ರೂಂ ಬಾಡಿಗೆಗೆ ಇದೆ.
99452 49088
99001 88514

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20x48 West, 20x30 East, 20x30 North, 30x50 South, 30x40 West.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಚೆಸ್ ತರಬೇತಿ**
ನಿಮ್ಮ ಮಕ್ಕಳ ಬುದ್ಧಿ ಶಕ್ತಿ ಬೆಳವಣಿಗೆಗೆ ಚದುರಂಗ ತರಬೇತಿ
ಮಂಜುಳ ಯುವರಾಜ್
72593 10197, 99456 13469

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992


# ಯುವ 'ಕೌಶಲ್ಯ' ಸದೃಢ ಭಾರತ ನಿರ್ಮಾಣಕ್ಕೆ ಪ್ರೇರಣೆ

ಭಾರತ ಸೇರಿದಂತೆ, ಇಡೀ ವಿಶ್ವ ಯುವ ಜನಾಂಗದ ಕೌಶಲ್ಯ ಜ್ಞಾನದ ತಳಹದಿಯ ಮೇಲೆ ನಿಂತಿದೆ. ಇಡೀ ಜಗತ್ತಿನ ಭವಿಷ್ಯವನ್ನು ಇದೇ ಕೌಶಲ್ಯಯುತ ಯುವ ಜನಾಂಗ ನಿರ್ಧರಿಸಲಿದೆ.

ನಮ್ಮ ಭಾರತ ಯುವ ಶಕ್ತಿಯ ಭಂಡಾರವನ್ನೇ ಹೊಂದಿದೆ. ಆದರೆ ಈ ಶಕ್ತಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗುವಂತಾಗಬೇಕು. ಭಾರತದ ಯುವ ಜನಾಂಗ ಕೌಶಲ್ಯ ಮತ್ತು ಆಧುನಿಕ ಜ್ಞಾನದ ಸಾಗರದಲ್ಲಿ ಈಜಾಡುತ್ತಿದೆ. ಪ್ರಸ್ತುತ ನಮ್ಮ ದೇಶಕ್ಕೆ ಹಿಂದೆಂದಿಗಿಂತಲೂ ಇವರ ಸೇವೆ ಅತ್ಯಗತ್ಯವಾಗಿದೆ. ಕೌಶಲ್ಯ ಮತ್ತು ಆಧುನಿಕ ಜ್ಞಾನದ ಸಹಾಯದಿಂದ ಯುವ ಸಮುದಾಯ ನಮ್ಮ ದೇಶವನ್ನು ಮುನ್ನಡೆಸಬೇಕಿದೆ.

ಕೌಶಲ್ಯ ಅಭಿವೃದ್ಧಿಯಿಂದ ಮಾತ್ರ ವ್ಯಕ್ತಿ ಮತ್ತು ಸಮಾಜದ ಅಭಿವೃದ್ಧಿ ಸಾಧ್ಯ. ಕೌಶಲ್ಯ ಕಲಿಕೆಗೆ ಯಾವುದೇ ಕ್ಷೇತ್ರ, ಯಾವುದೇ ವ್ಯಕ್ತಿ ಹೊರತಾಗಿಲ್ಲ. ಯಾವುದೇ ವಯಸ್ಸಿನ ಹಂಗಿಲ್ಲ. ಕೌಶಲ್ಯವನ್ನು ಅಭಿವೃದ್ಧಿಗೊಳಿಸಿಕೊಳ್ಳುವುದು ಮಾನವನ ಮೂಲ ಹಾಗೂ ಪ್ರಮುಖ ಗುಣಗಳಲ್ಲಿ ಒಂದು.

ಕೆಲಸ ಕಾರ್ಯಗಳಿಗೆ ಅಥವಾ ಸಂಕೀರ್ಣ ಚಟುವಟಿಕೆಯ ಬಗೆಗೆ ಉದ್ದೇಶಪೂರ್ವಕವಾಗಿ, ವ್ಯವಸ್ಥಿತವಾಗಿ, ನಿರಂತರ ಪ್ರಯತ್ನದ ಮೂಲಕ ಸರಾಗವಾಗಿ ಹೊಂದಿಕೊಳ್ಳುವ ಸಾಮರ್ಥ್ಯ ಮತ್ತು ದಕ್ಷತೆಯನ್ನು ಸ್ವಾಧೀನಪಡಿಸಿಕೊಳ್ಳುವುದೇ 'ಕೌಶಲ್ಯ'.


'ಕೌಶಲ್ಯ' ಮನೋಕ್ರಿಯಾಜನ್ಯ ವಲಯಕ್ಕೆ ಸೇರಿದ ಅಂಶವಾಗಿದ್ದು, ಇಲ್ಲಿ ಅನುಕರಣೆ, ಕೈಚಳಕ, ಖಚಿತತೆ, ಸ್ಪಷ್ಟೀಕರಣ, ಸ್ವಾಭಾವೀಕರಣದ ಮೂಲಕ ನಮ್ಮಲ್ಲಿ ಕೌಶಲ್ಯ ಬೆಳೆಸುವುದು.

'ಕೌಶಲ್ಯ' ಎಂಬ ಪದ ಆಂಗ್ಲ ಭಾಷೆಯ ಸ್ಕಿಲ್ ಎಂಬ ಪದದಿಂದ ಬಂದಿದ್ದು, ಅದರರ್ಥ ಒಳನೋಟ ಅಥವಾ ಸೂಕ್ಷ್ಮ ದೃಷ್ಟಿ.

'ಕೌಶಲ' ಎಂದರೆ ಯಾವುದೇ ಒಂದು ಕಾರ್ಯ, ಚಟುವಟಿಕೆಯ ಬಗೆಗೆ ಹೊಂದಿರುವ ಒಳನೋಟ ಅಥವಾ ಸೂಕ್ಷ್ಮ ದೃಷ್ಟಿ ಎಂಬುದಾಗಿದೆ.

**ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ತಮ್ಮ ಜ್ಞಾನವನ್ನು ಬಳಸಿಕೊಂಡು ವ್ಯಕ್ತಪಡಿಸುವ ಅತ್ಯುದ್ಭುತ ಕ್ರಿಯೆಯೇ ಕೌಶಲ್ಯ. ಕೌಶಲ್ಯಕ್ಕೆ ಬೇಕಾಗಿರುವ ಅವಶ್ಯಕ ಅಂಶಗಳು :** ಜ್ಞಾನ, ಅನ್ವಯ, ಅಭ್ಯಾಸ, ತಂತ್ರಗಳು, ಅನುಭವಗಳು.

'ಕೌಶಲ್ಯ' ಒಂದು ಪ್ರಾಯೋಗಿಕ ಅಂಶವಾಗಿದೆ. ಕೌಶಲ್ಯದಿಂದ ಜ್ಞಾನದ ಅಭಿವೃದ್ಧಿಯಾಗುತ್ತದೆ. ಕೌಶಲ್ಯಗಳನ್ನು ಒಬ್ಬರಿಂದ ಮತ್ತೊಬ್ಬರಿಗೆ

ಇಂದು ವಿಶ್ವ ಯುವ ಕೌಶಲ್ಯ ದಿನಾಚರಣೆ

ಪರಿಣಾಮಕಾರಿಯಾಗಿ ವರ್ಗಾಯಿಸಲು ಸಾಧ್ಯವಿಲ್ಲ. ಕೌಶಲ್ಯವನ್ನು ಅಧ್ಯಯನದ ಅಥವಾ ವೀಕ್ಷಿಸುವ ಮೂಲಕ ಬೆಳೆಸಿಕೊಳ್ಳಲು ಸಾಧ್ಯವಿಲ್ಲ. ಕೌಶಲ್ಯ ಯಾವಾಗಲೂ ಮೂರ್ತ ರೂಪದ್ದಾಗಿರುತ್ತದೆ. ಕೌಶಲ್ಯ ಅಭ್ಯಾಸದಿಂದ ವಿಕಾಸ ಹೊಂದುವುದು. ಕೌಶಲ್ಯವು ತರಬೇತಿ ಮತ್ತು ಅನುಭವದ ಮೂಲಕ ಮೇಲ್ದರ್ಜೆಗೆ ಏರುವುದು.

ಅತ್ಯಂತ ನಿಕಟಕವಾಗಿ ಕಲಿಕೆ ಮತ್ತು ಸಮಸ್ಯೆ ಪರಿಹಾರಕ್ಕೆ ಸಂಬಂಧಿಸಿದ ವಿವಿಧ ಮಾನಸಿಕ ಚಟುವಟಿಕೆಗಳನ್ನು ನಿರ್ವಹಿಸುವ ವ್ಯಕ್ತಿಯ ಸಾಮರ್ಥ್ಯವೇ ಅರಿವಿನ ಕೌಶಲ್ಯವಾಗಿದೆ.

ಗಣಿತ, ಇಂಜಿನಿಯರಿಂಗ್, ವೈಜ್ಞಾನಿಕ ಅಥವಾ ಗಣಕಯಂತ್ರ ಸಂಬಂಧಿತ ಕಾರ್ಯಗಳನ್ನು ಸಾಧಿಸಲು ಬೇಕಾದ ಸಾಮರ್ಥ್ಯ ಹಾಗೂ ತಂತ್ರಜ್ಞಾನಕ್ಕೆ ಸಂಬಂಧಿಸಿದ ಇತರೆ ನಿರ್ದಿಷ್ಟ ಕಾರ್ಯಗಳನ್ನು ಒಳಗೊಂಡಿದ್ದು, ಆ ಕಾರ್ಯಗಳ ಬಗೆಗೆ ಹೊಂದಿರುವ ತಾಂತ್ರಿಕ ನೈಪುಣ್ಯತೆಯೇ ತಾಂತ್ರಿಕ ಕೌಶಲ್ಯವಾಗಿದೆ.

ಆಲಿಸುವ ಕೌಶಲ, ಇತರರೊಡನೆ ಹೊಂದಿಕೊಳ್ಳುವ ಕೌಶಲ್ಯ, ಸಮಸ್ಯೆ ಪರಿಹಾರದ ಕೌಶಲ್ಯ, ಮೌಖಿಕ ಮತ್ತು ಅಮೌಖಿಕ ಸಂವಹನ ಕೌಶಲ್ಯಗಳ ನೈಪುಣ್ಯತೆಯೇ ಅಂತರ್ವ್ಯಕ್ತೀಯ ಕೌಶಲ್ಯವಾಗಿದೆ.

ಮಾನವ ಜೀವನ ನಡೆಸಲು ಪ್ರಮುಖವಾಗಿ ಕೆಲವು ಕೌಶಲ್ಯಗಳ ಅಗತ್ಯತೆಯಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಅನ್ವಯಿಸಿಕೊಳ್ಳುವ ಸಾಮರ್ಥ್ಯ ಮತ್ತು ಧನಾತ್ಮಕ ವರ್ತನೆಗಳ ಆಧಾರಿತವಾಗಿ ದಿನನಿತ್ಯದಿಂದ ಬರುವ ಸಮಸ್ಯೆಗಳನ್ನು ಸುಲಲಿತವಾಗಿ ಬಗೆಹರಿಸಿಕೊಳ್ಳುವ ಸಾಮರ್ಥ್ಯವೇ ಜೀವನದ ಕೌಶಲ್ಯವಾಗಿದೆ.

ಒಬ್ಬ ವ್ಯಕ್ತಿಯ ಸಾಮಾಜಿಕ ಕೌಶಲ್ಯ, ಸಂವಹನ ಕೌಶಲ್ಯ, ವೃತ್ತಿ ಸಂಬಂಧಿತ, ಭಾವನಾತ್ಮಕ, ಇತರರೊಡನೆ ಬೆರೆಯುವ, ಬುದ್ಧಿವಂತಿಕೆಯನ್ನು ಹೊಂದಿರುವ ಗಣವೇ ಮೃದು ಕೌಶಲ್ಯವಾಗಿದೆ.

ಕೈಚಳಕಕ್ಕೆ ಸಂಬಂಧಿಸಿದಂತೆ ತಂತ್ರಾಂಶ ಆಧಾರಿತ ಸಾಧನಗಳನ್ನು ನಿರ್ವಹಿಸುವ ಸಾಮರ್ಥ್ಯವೇ ಕಠಿಣ ಕೌಶಲ್ಯವಾಗಿದೆ.

ಒಬ್ಬ ವ್ಯಕ್ತಿ ಒಂದು ನಿರ್ದಿಷ್ಟ ಕಾರ್ಯಕ್ಷೇತ್ರದಲ್ಲಿ ಆಳವಾದ ಜ್ಞಾನ ಮತ್ತು ಕುಶಲತೆಯನ್ನು ಹೊಂದಿರುವ ಸಾಮರ್ಥ್ಯವೇ ತಜ್ಞತಾ ಕೌಶಲ್ಯವಾಗಿದೆ.

ಈ ಮೇಲ್ಕಂಡ ಎಲ್ಲಾ ಕೌಶಲ್ಯಗಳನ್ನು ಹೊಂದಿದ ವ್ಯಕ್ತಿಗೆ ಉದ್ಯೋಗ ಅವಕಾಶಗಳು ಹೆಚ್ಚು. ಪ್ರತಿಯೊಬ್ಬ ಸಾಮಾನ್ಯ ವ್ಯಕ್ತಿಗೆ ಈ ಕೌಶಲ್ಯಗಳಿಂದ ಅವನು ಸಂಪನ್ಮೂಲ ವ್ಯಕ್ತಿಯೆನಿಸುವನು. ಯಾವುದೇ ಒಂದು ಸಮಸ್ಯೆಯನ್ನು ಸುಲಭವಾಗಿ, ನಿರಾಯಾಸವಾಗಿ ಬಗೆಹರಿಸುವ ಸಾಮರ್ಥ್ಯ ಹೊಂದಿರುವವನು. ಈ ಕೌಶಲ್ಯಗಳು ವಿವಿಧ ಸನ್ನಿವೇಶಗಳಲ್ಲಿ ವೈವಿಧ್ಯಮಯ ಕಾರ್ಯಚಟುವಟಿಕೆಗಳನ್ನು ಸಂಘಟಿಸಲು ಸಹಕಾರಿಯಾಗುವುದು.

ಪ್ರಸ್ತುತ ನಮ್ಮ ದೇಶಕ್ಕೆ ಹಿಂದೆಂದಿಗಿಂತಲೂ ಯುವ ಜನತೆಯ ಕೌಶಲ್ಯ ಮತ್ತು ಆಧುನಿಕ ತಂತ್ರಜ್ಞಾನದ ಸಹಾಯದ ಅವಶ್ಯಕತೆ ಬಹಳಷ್ಟಿದೆ. ಕಾರಣ ಇಷ್ಟೇ...

ಏಕಾಏಕಿ ಆಕ್ರಮಿಸಿದ ಕೊರೊನಾ ವೈರಸ್ ಸಾಂಕ್ರಾಮಿಕದಿಂದಾಗಿ ಶಿಕ್ಷಣ ಮತ್ತು ತರಬೇತಿ ಕೇಂದ್ರಗಳು ಅಡೆತಡೆಗಳನ್ನು ಎದುರಿಸಬೇಕಾಯಿತು. ವ್ಯವಹಾರ ಸಂಸ್ಥೆಗಳು ಮುಚ್ಚಲ್ಪಟ್ಟವು. ಎಲ್ಲಾ ಚಟುವಟಿಕೆಗಳು ಕುಂಠಿತವಾದವು. ಎಲ್ಲವೂ ಇಂಟರ್‌ನೆಟ್ ಮೂಲಕ ಡಿಜಿಟಲ್ ಯುಗಕ್ಕೆ ಹೊಂದಿಕೊಳ್ಳಬೇಕಾಯಿತು. ಹೊಸ ಉದ್ಯೋಗಸ್ಥರಿಗೆ ಹೊಡೆತವನ್ನು ಉಂಟು ಮಾಡಿತು. ಲಾಕ್‌ಡೌನ್ ತೆರವುಗೊಳಿಸುತ್ತಿದ್ದಂತೆಯೇ ತರಬೇತಿ ಕಾರ್ಯಕ್ರಮಗಳಿಗೆ ಋಣಾತ್ಮಕ ಪರಿಣಾಮ ಬೀರಿತು. ಉದ್ಯೋಗ ಅವಕಾಶಗಳು ಕಡಿಮೆಯಾದವು. ಸಣ್ಣ ಕೌಶಲ್ಯ ಅಭಿವೃದ್ಧಿ ಸಂಸ್ಥೆಗಳು ಹೆಚ್ಚು ಒತ್ತಡಕ್ಕೆ ಸಿಲುಕಿದವು. ಅದೆಷ್ಟೋ ಜನರು ಉದ್ಯೋಗ ಕಳೆದುಕೊಂಡರು.

ಕಳೆದ ಐದು ವರ್ಷಗಳಲ್ಲಿ ಭಾರತದಲ್ಲಿ ಇಂಟರ್‌ನೆಟ್ ಉಪಯೋಗ ಶೇ. 27 ರಿಂದ 50ಕ್ಕೆ ಏರಿಕೆಯಾಗಿದೆ. ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದ ಯುವ ಜನಾಂಗ ಮೊಬೈಲ್ ಮತ್ತು ಇಂಟರ್‌ನೆಟ್, ವೆಬ್‌ಗಳಿಗೆ ಹೆಚ್ಚು ಹೊಂದಿಕೊಂಡರು. ಸಾಂಕ್ರಾಮಿಕ ಸಮಯವು ವಿದ್ಯಾರ್ಥಿಗಳ, ಯುವ ಜನಾಂಗದವರ ನಡುವೆ ಡಿಜಿಟಲ್ ಯುಗವನ್ನು ಹೆಚ್ಚಿಸಿದೆ.

ವಿಶ್ವಸಂಸ್ಥೆ ಜುಲೈ 15 ಅನ್ನು ವಿಶ್ವ ಯುವ ಕೌಶಲ್ಯ ದಿನವೆಂದು ಘೋಷಿಸಿತು. ಯುವ ಜನರು ಕೆಲಸದ ವಾತಾವರಣದಲ್ಲಿ ತೊಡಗಿಕೊಳ್ಳುವುದು, ಯುವ ಜನರ ಶ್ರಮವನ್ನು ಗುರುತಿಸಿ, ಈ ದಿನವನ್ನು ವಿಶ್ವ ಯುವ ಕೌಶಲ್ಯ ದಿನ ಎಂಬುದಾಗಿ ಆಚರಿಸಲಾಗುತ್ತಿದೆ.

ವೃತ್ತಿಪರ ಶಿಕ್ಷಣ, ತರಬೇತಿ ಸಂಸ್ಥೆಗಳು, ವ್ಯವಹಾರಗಳು, ಉದ್ಯೋಗ, ಕಾರ್ಮಿಕ ಸಂಘಗಳು ಮತ್ತು ಅಭಿವೃದ್ಧಿ ಏಜೆನ್ಸಿಗಳ ಜೊತೆಗೆ ಯುವ ಜನಾಂಗ ಸಂವಹನ ನಡೆಸುವ ಸುದಿನ ಇದಾಗಿದೆ.

ಸುಸ್ಥಿರ ಅಭಿವೃದ್ಧಿಯಲ್ಲಿ ಸಾಗುತ್ತಿರುವಾಗ ಕೌಶಲ್ಯಗಳ ಪ್ರಾಮುಖ್ಯತೆಯನ್ನು ಸಾರುವ ದಿನ ಇದಾಗಿದೆ.

ದೇಶದ ಭವಿಷ್ಯ ಯುವ ಜನತೆಯ ಕೈಯಲ್ಲಿದೆ. ದೇಶದ ಅಭಿವೃದ್ಧಿ ಯುವ ಜನರ ಕೌಶಲ್ಯಭರಿತ



ಮೆದುಳಿನಲ್ಲಿದೆ. ದೇಶದ ಪ್ರಗತಿ ಯುವ ಜನಾಂಗ ಮನಸ್ಸು ಮಾಡಿದರೆ ಮಾತ್ರ ಸಾಧ್ಯ. ಇಂತಹ ಯುವ ಜನತೆ ಕಾಲಕ್ಕೆ ತಕ್ಕಂತೆ ಬದಲಾಗಿ, ತಮ್ಮ ತಮ್ಮ ಸೇವಾ ನಿರತ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸಲು ಬೇಕಾದ ಕೌಶಲ್ಯಗಳನ್ನು ಬೆಳೆಸಿಕೊಳ್ಳುವ ಪಣ ತೊಡಬೇಕಾಗಿದೆ. ಕೌಶಲ್ಯಯುತ ವ್ಯಕ್ತಿಗೆ ಮಾತ್ರ ಸಮಾಜದಲ್ಲಿ, ಜೀವನದಲ್ಲಿ, ಕಾರ್ಯಕ್ಷೇತ್ರಗಳಲ್ಲಿ ಗೌರವ, ಮನ್ನಣೆ ದೊರಕುತ್ತದೆ.

ಈ ದಿಸೆಯಲ್ಲಿ ಮುನ್ನಡೆಯುತ್ತಾ, ತಪ್ಪು ದಾರಿ ತುಳಿಯುವ, ಕೆಟ್ಟ ಹವ್ಯಾಸಗಳಿಂದ (ದುರಭ್ಯಾಸಗಳಿಂದ) ದೂರ ಉಳಿಯುವ, ಅವಕಾಶವನ್ನು ಕಲ್ಪಿಸಿಕೊಳ್ಳದೇ ಇರುವಲ್ಲಿ ಈ ಕೌಶಲ್ಯಗಳು ಸಹಾಯಕವಾಗಿವೆ. ಕೌಶಲ್ಯಭರಿತ ವ್ಯಕ್ತಿ ತಾನು ಅಭಿವೃದ್ಧಿ ಹೊಂದುತ್ತಾ, ಸಮಾಜದ ಸತ್ಪ್ರಜೆಯಾಗಿ, ದೇಶದ ಆಸ್ತಿಯಾಗಿ ಇರಬಲ್ಲನು. ದೇಶದ ಅಭಿವೃದ್ಧಿಗೆ ತನ್ನ ಅಳಿಲು ಸೇವೆ ಸಲ್ಲಿಸಬಲ್ಲನು.

ಈ ನಿಟ್ಟಿನಲ್ಲಿ ಸಾಗುತ್ತಿರುವ ಎಲ್ಲಾ ಯುವ ಜನಾಂಗದವರಿಗೆ ವಿಶ್ವ ಯುವ ಕೌಶಲ್ಯ ದಿನಾಚ ರಣೆಯ ಶುಭಾಶಯಗಳು.



**- ಡಾ. ಅನಿತಾ ಹೆಚ್. ದೊಡ್ಡಗೌಡರ್**, ದಾವಣಗೆರೆ.
99021 98655

# ರಾಜ್ಯದಿಂದ ಬಿಜೆಪಿ ಅವನತಿ ಆರಂಭ

## ಲೋಕಸಭಾ ಚುನಾವಣೆ ವೇಳೆ ಇಡೀ ದೇಶಕ್ಕೇ ವಿಸ್ತರಣೆ : ಸಿದ್ದರಾಮಯ್ಯ

ಬೆಂಗಳೂರು, ಜು.14 - ಬಿಜೆಪಿಯ ಅವನತಿ ಕರ್ನಾಟಕದಿಂದ ಶುರುವಾಗಿದ್ದು, ಮುಂದಿನ ಲೋಕಸಭಾ ಚುನಾವಣಾ ವೇಳೆಗೆ ಇಡೀ ದೇಶಕ್ಕೆ ವಿಸ್ತರಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭವಿಷ್ಯ ನುಡಿದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದಲ್ಲಿ ಪ್ರವಾಸ ಮಾಡಿದ ಎಲ್ಲಾ ಕಡೆ ಹಾಗೂ ಅದರ ವ್ಯಾಪ್ತಿಯ ಪ್ರದೇಶದಲ್ಲಿ ಬಿಜೆಪಿ ಹೀನಾಯ ಸೋಲು ಕಂಡಿದ್ದು, ಕಾಂಗ್ರೆಸ್ ಅಭ್ಯರ್ಥಿಗಳು ಜಯಭೇರಿ ಭಾರಿಸಿದ್ದಾರೆ. ಮೋದಿ ಅವರ ವರ್ಚಸ್ಸು ಕಳೆಗುಂದಿರುವುದಕ್ಕೆ ಕರ್ನಾಟಕ ವಿಧಾನಸಭೆ ಚುನಾವಣೆ ಫಲಿತಾಂಶವೇ ಸಾಕ್ಷಿಯಾಗಿದೆ ಎಂದು ಹೇಳಿದರು.

ವಿಧಾನ ಪರಿಷತ್‌ನಲ್ಲಿ ರಾಜ್ಯಪಾಲರ ಭಾಷಣದ ಮೇಲೆ ನಡೆದ ಚರ್ಚೆಗೆ ಉತ್ತರಿಸುತ್ತಾ, ವಿಧಾನಸಭಾ ಚುನಾವಣೆಯಲ್ಲಿ 28 ಬಾರಿ ಪ್ರಚಾರಕ್ಕೆ ಬಂದರು. ಹಿಂದಿನ ಯಾವ ಪ್ರಧಾನಿಗಳೂ ರಾಜ್ಯಗಳ ಚುನಾವಣೆ ವೇಳೆ ಹೀಗೆ ವರ್ತಿಸಿರಲಿಲ್ಲ. ಉಳಿದ ಪ್ರಧಾನಿಗಳಿಗೆ ದೇಶವನ್ನು



ಮುನ್ನಡೆಸುವುದು ಪ್ರಥಮ ಆದ್ಯತೆ ಆಗಿರುತ್ತಿತ್ತು. ಬರೀ ಚುನಾವಣೆಗಳನ್ನು ನಡೆಸುತ್ತಾ ಓಡಾಡುತ್ತಿರಲಿಲ್ಲ ಎಂದು ಟೀಕಿಸಿದರು.

ಚುನಾವಣೆಯಲ್ಲಿ ಮೋದಿ ಅವರು ರೋಡ್ ಶೋ ನಡೆಸಿದ, ಪ್ರಚಾರ ನಡೆಸಿದ ಕ್ಷೇತ್ರಗಳಲ್ಲಿ ಮತ್ತು ಸುತ್ತಮುತ್ತಲ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅತ್ಯಂತ ಬಹುಮತದಿಂದ ಗೆದ್ದಿದೆ. ಇದರಿಂದ ಮೋದಿ ಅವರ ಪ್ರಭಾವ ಮಂಕಾಗುತ್ತಿರುವುದನ್ನು ನೀವು ಒಪ್ಪಿಕೊಳ್ಳಿ. ಮೋದಿ ಅವರ ಮೇಲೆ ಅವಲಂಬಿತರಾಗಬೇಡಿ ಎಂದು ಬಿಜೆಪಿ ಸದಸ್ಯರಿಗೆ ತಿಳಿಸಿದರು.

ಕಾಂಗ್ರೆಸ್ ಗೆಲುವಿಗೆ ಕಾರಣವಾದ ಸಂಗತಿಗಳನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ಮುಖ್ಯಮಂತ್ರಿಗಳು, ಜನರ ಜೇಬಿನಲ್ಲಿ ಹಣ ಇರಬೇಕು ಎನ್ನುವ ಉದ್ದೇಶದಿಂದ ಕಾಂಗ್ರೆಸ್ ಐದು ಗ್ಯಾರಂಟಿಗಳನ್ನು ಘೋಷಿಸಿ ಜಾರಿ ಮಾಡಿತು. ಬಡವರು-ಮಧ್ಯಮ ವರ್ಗದವರ ಜೇಬಿನಲ್ಲಿ ಹಣ ಇದ್ದರೆ ನಾಡಿನ ಆರ್ಥಿಕತೆ ಬೆಳೆಯುತ್ತದೆ ಎನ್ನುವುದು ಕಾಂಗ್ರೆಸ್‌ನ ಬದ್ಧತೆ ಮತ್ತು ಸಿದ್ಧಾಂತ ಎಂದರು. ಆದರೆ, ಬಿಜೆಪಿ ಜನರ ಜೇಬಿನಲ್ಲಿರುವ ಹಣ ಕಿತ್ತುಕೊಳ್ಳುವ ಮನಸ್ಥಿತಿ ಹೊಂದಿರುವ ಕಾರಣದಿಂದ ಹೀನಾಯವಾಗಿ ಸೋಲು ಕಾಣಬೇಕಾಯಿತು ಎಂದರು. ಪಂಪನಿಂದ ಹಿಡಿದು ಬಸವಣ್ಣನವರನ್ನು ಪ್ರಸ್ತಾಪಿಸಿ ಇವರೆಲ್ಲರ ಆಶಯಗಳೇ ನಮ್ಮ ಸಂವಿಧಾನದಲ್ಲಿದೆ. ಆದರೆ ತಾನು ಮಾತ್ರ ಶ್ರೇಷ್ಠ ಎನ್ನುವ ಹಿಟ್ಲರ್ ಒಬ್ಬ ಮತಾಂಧ. ಆತ ಮನುಷ್ಯ ವಿರೋಧಿ ಎಂದರು.

ಹಿಟ್ಲರ್ ತನ್ನ ತಿಕ್ಕಲುತನದಿಂದ ಹೇಗೆ ಮನುಷ್ಯರ ಮಾರಣ ಹೋಮಕ್ಕೆ ಕಾರಣನಾದ ಎಂದು ವಿವರಿಸುತ್ತಿದ್ದಾಗ ಬಿಜೆಪಿ ಸದಸ್ಯರು ಮುಖ್ಯಮಂತ್ರಿಗಳ ಮಾತಿಗೆ ಅಡ್ಡಿಪಡಿಸಿದರು. ಈ ವೇಳೆ ಮುಖ್ಯಮಂತ್ರಿಗಳು, ಹಿಟ್ಲರ್‌ಗೆ ಬೈದರೆ ನಿಮಗೇಕೆ ಸಿಟ್ಟು? ಎಂದು ಪ್ರಶ್ನಿಸಿದರು.

# ಕೊರೊನಾ ನಿಯಮ ಉಲ್ಲಂಘನೆ : ಡಿಕೆಶಿ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು, ಜು. 14 - ಕೊರೊನಾ ನಿರ್ಬಂಧಗಳ ಉಲ್ಲಂಘನೆ ಆರೋಪದ ಮೇಲೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದು ಮಾಡಿದೆ.

ಶಿವಕುಮಾರ್ ಕೈಗೊಂಡಿದ್ದ ಮೇಕೆ ದಾಟು ಪಾದಯಾತ್ರೆ ವೇಳೆ ಕೊರೊನಾ ನಿಯಮ ಉಲ್ಲಂಘನೆಯಾಗಿತ್ತು ಎಂದು ಆರೋಪಿಸಿ ಪ್ರಕರಣ ದಾಖಲಿಸಲಾಗಿತ್ತು. ಪ್ರಕರಣ ದಾಖಲಿಸುವುದರ ವಿರುದ್ಧ ಶಿವಕುಮಾರ್ ಅವರು ಹೈಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ ಏಕಸದಸ್ಯ ಪೀಠ ಪ್ರಕರಣ ರದ್ದು ಮಾಡಿ ಆದೇಶ ನೀಡಿದೆ.

# ಆಲೆಮನೆಗೆ ಆತ್ಮನಿರ್ಭರ ನೆರವು

ಬೆಂಗಳೂರು, ಜು.14 - ದೇಶೀಯ ಬೆಲ್ಲ ಉತ್ಪಾದಿಸುವ ಆಲೆಮನೆಗಳ ಅಭಿವೃದ್ಧಿಗೆ ಆತ್ಮನಿರ್ಭರ ಭಾರತ ಅಭಿಯಾನದ ಅಡಿ ಅಗತ್ಯ ನೆರವು ನೀಡುವ ಜೊತೆಗೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ನಿರಾಪೇಕ್ಷಣ ಪತ್ರ ಕೊಡಿಸಲು ಸರಳ ಮಾರ್ಗ ಅನುಸರಿಸಲಾಗುವುದು ಎಂದು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವ ಶಿವಾನಂದ ಪಾಟೀಲ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರದ ಅವಧಿಯಲ್ಲಿ ರವಿಕುಮಾರ್ ಗಾಣಿಗ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ಆಲೆಮನೆಗಳಿಗೆ ಅನುಕೂಲ ಮಾಡಿಕೊಡಲು ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ಪರಿಸರ ಮಾಲಿನ್ಯ ಮಂಡಳಿ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು. ಆಲೆಮನೆಯ ಮಾಲೀಕರು ಕೂಡ ನಿಯಮಗಳನ್ನು ಪಾಲನೆ ಮಾಡಬೇಕೆಂದು ಸಲಹೆ ಮಾಡಿದರು.


**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**COMMERCIAL SPACE FOR RENT**
**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಗ್ರೌಂಡ್ ಫ್ಲೋರ್‌ನಲ್ಲಿ ಇರುವ 15x15 ಅಳತೆಯುಳ್ಳ ಮಳಿಗೆ ಬಾಡಿಗೆಗೆ ಇದೆ.
99452 49088
99001 88514

**ವಾಟರ್ ಪ್ರೂಫಿಂಗ್ (ನೀರಿನ ಲೀಕೇಜ್)**
ನಿಮ್ಮ ಮನೆಯ ಅಥವಾ ಕಟ್ಟಡಗಳ, ಮಹಡಿ, ಮೆಟ್ಟಿಲುಗಳು, ಬಾತ್ ರೂಂ, ಟೆರೆಸ್, ಸಂಪು, O.H ಟ್ಯಾಂಕ್, ಗೋಡೆಯ ಬಿರುಕು, ಕೀಟುಗಳ ಬಿರುಕು, ಕಿಟಕಿ, ಸಜ್ಜಾ, ಈಜುಕೊಳ, ಇತ್ಯಾದಿ ಯಾವುದೇ ರೀತಿಯ ನೀರಿನ ಲೀಕೇಜ್ ಆಗುತ್ತಿದ್ದರೆ, ನಮ್ಮನ್ನು ತಕ್ಷಣವೇ ಸಂಪರ್ಕಿಸಿ :
80955 09025
ಕೆಲಸ 100% ಗ್ಯಾರಂಟಿಯಿದೆ.

**URGENT REQUIREMENT**
**MATHS TEACHER**
(HIGHER PRIMARY) B.Sc., B.Ed., PM Method
**ENGLISH TEACHER**
(HIGH SCHOOL) M.A. / B.A., B.Ed., English Major
99809 33292
97410 52600

**HOUSE TO LET**
3 Bed Room House First Floor (M.C.C `B' Block) 2 Bed Room House. (Anjaneya Badavane) Single Room Attached for Ideal PG Student.
83106 98903

**HOME FOR RENT**
**ಮನೆ ಬಾಡಿಗೆಗೆ ಇದೆ**
ಕೆ.ಬಿ. ಬಡಾವಣೆಯಲ್ಲಿನ ಗುಳ್ಳಮ್ಮ ದೇವಸ್ಥಾನದ ಹತ್ತಿರುವ ಇರುವ ಮನೆ ನಂ. 384/1 ಬನಶಂಕರಿ ನಿಲಯ, 3 BHK ಮನೆ ಬಾಡಿಗೆಗೆ ಇದೆ.
99452 49088
99001 88514

**ಬೇಕಾಗಿದ್ದಾರೆ**
B.A., B.Ed., ಮತ್ತು B.Sc., B.Ed., (PCM/CBZ) ಶಿಕ್ಷಕರು ಹಾಗೂ ಆಯಾ ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್ 6ನೇ ಕ್ರಾಸ್‌ನಲ್ಲಿರುವ ಹೊಸ RTO ಕಚೇರಿ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ.
ಕಾರ್ಯದರ್ಶಿ, 99640 17729

**ಬಾಲಾಜಿ ಲೇಔಟ್ ಗ್ರೌಂಡ್ ಫ್ಲೋರ್ ಮನೆ ಬಾಡಿಗೆಗೆ ಇದೆ**
30x50 ಅಳತೆಯ ಪೂರ್ವ ಬಾಗಿಲು, 2 ದೊಡ್ಡದಾದ ಬೆಡ್ ರೂಂ ಇರುವ ಉತ್ತರ ಪೂರ್ವ ಕಾರ್ನರ್ ಹೊಸದಾದ ಮನೆ ಬಾಡಿಗೆಗೆ ಇದೆ. ಕುಂದುವಾಡ ಕೆರೆ ಹತ್ತಿರ.
99861 46807

**ಬೇಕಾಗಿದ್ದಾರೆ**
ಹೋಟೆಲ್ ಅಥವಾ ಕೆಫೆಯಲ್ಲಿ ಕೆಲಸ ಮಾಡಿದ ಅನುಭವವಿರುವ ಯುವಕರು ಬೇಕಾಗಿದ್ದಾರೆ. ಸಂಬಳ ಹಾಗೂ ಪ್ರೋತ್ಸಾಹ ಧನ ಹಾಗೂ ವಸತಿ ಇರುತ್ತದೆ.
98445 67456

**TEACHERS WANTED**
PUC, SCIENCE D.Ed-01 or English D.Ed - 01, ಆಯಾ - 01.
*Lingaiah Public School*
Basvarajapete, Davanagere.Near Old BSc Shop.
73534 48181

**ಮಳಿಗೆ ಬಾಡಿಗೆಗೆ ಇದೆ**
ಪಶ್ಚಿಮ ದಕ್ಷಿಣ ಕಾರ್ನರ್ ಮಳಿಗೆ H.K.R. ಸರ್ಕಲ್ ಹತ್ತಿರ ನಿಟುವಳ್ಳಿ ಹೊಸ ಬಡಾವಣೆ
98447 45856, 98867 93942

**ಬೇಕಾಗಿದ್ದಾರೆ**
ಫೀಲ್ಡ್ ವರ್ಕ್ ಮಾಡಲು ITI/ Diploma ಆದಂತಹ ಯುವಕರು ಬೇಕಾಗಿದ್ದಾರೆ.
ಸಂಪರ್ಕಿಸಿ. ಜ್ಯೋತಿ ಗ್ಯಾಸ್ ಏಜೆನ್ಸಿ, ಲಾಯರ್ ರೋಡ್, ದಾವಣಗೆರೆ.
99645 96070

**1BHK ಮನೆ ಬಾಡಿಗೆಗೆ ಇದೆ**
ಶಿವಕುಮಾರ ಸ್ವಾಮಿ ಬಡಾವಣೆ, 1ನೇ ಹಂತ, 6ನೇ ಕ್ರಾಸ್, 2ನೇ ಮೇನ್, 2ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ, ಮನೆ ಬಾಡಿಗೆಗೆ ಇದೆ.
(ಸಸ್ಯಹಾರಿಗಳಿಗೆ ಮಾತ್ರ)
73493 72914

**ಹೆಸರು ಸ್ಪಷ್ಟೀಕರಣ**
ಸುಬ್ರಮಣಿ ಎಸ್. ಬಿನ್ ರಾಮಾಚಾರಿ 74 ವರ್ಷ ಡೋರ್ ನಂ. 750 ಆರ್.ಎಂ.ಸಿ. ರೋಡ್ ಪಾಂಡುರಂಗ ದೇವಸ್ಥಾನ ಹಿಂಭಾಗ ಬಂಬೂಬಜಾರ್ ದಾವಣಗೆರೆ ವಾಸಿಯಾದ ನಾನು ನನ್ನ ಆಧಾರ್ ಕಾರ್ಡ್‌ನಲ್ಲಿ ಸುಬ್ರಮಣಿ ಎಸ್. ಎಂದು ನಮೂದಾಗಿರುತ್ತದೆ. ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ. ಪಿ.ಬಿ. ರಸ್ತೆ ದಾವಣಗೆರೆ ಇದ ಸಾಲದ ಅರ್ಜಿಯ ದಾಖಲೆಯಲ್ಲಿ ಖಾತೆ ನಂ. 4346 ಹಾಗೂ ಷೇರು ನಂ. 6408 ಇವುಗಳಲ್ಲಿ ಎಸ್. ಮಣಿ ಎಂದು ನಮೂದಾಗಿರುತ್ತದೆ. ಆದ್ದರಿಂದ ದಿನಾಂಕ 13.07.2023ರಂದು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ಎಸ್.ಮಣಿ ಹಾಗೂ ಸಬ್ರಮಣಿ ಎಸ್. ಈ ಎರಡೂ ಹೆಸರುಗಳು ನನ್ನದೇ ಎಂದು ದೃಢೀಕರಿಸುತ್ತೇನೆ. - ಸುಬ್ರಮಣಿ.ಎಸ್

**ಸೈಟ್ & ಮನೆ & ಹೊಲಕ್ಕೆ ಸಂಪರ್ಕಿಸಿ**
ಡಾಲರ್ಸ್‌ನಲ್ಲಿ 30x50 ಪೂರ್ವ ದಿಕ್ಕು ಸೈಟ್ ಇದೆ. ಸರ್ಕಾರಿ ನೌಕರರ ಬಡಾವಣೆಯಲ್ಲಿ 'ಬಿ' ಬ್ಲಾಕ್‌ನಲ್ಲಿ 30x50 ಪೂರ್ವ & ಶ್ರೀ ಸಾಮಾನ್ಯದಲ್ಲಿ 3 ಸೈಟ್ ಉತ್ತರ ಇವೆ. ಬೈಪಾಸ್ ಸರ್ವೀಸ್ ರೋಡ್‌ಗೆ ಕುಬೇರ ಹೋಟೆಲ್ ಹತ್ತಿರ 30x55 ಕಮರ್ಷಿಯಲ್ ಸೈಟ್ ದಕ್ಷಿಣ (ಮಾರಾಟಕ್ಕೆ) ಇದೆ. ಎಂ.ಎನ್. ಲೇಔಟ್ ಪೂರ್ವ ದಿಕ್ಕು 30x56 ಸೈಟು. ಜೆ.ಹೆಚ್. ಪಟೇಲ್‌ನಲ್ಲಿ 30x40 ಪಶ್ಚಿಮ ಸೈಟ್ ಇದೆ. (Saledeed ಆಗಿದೆ)
ಸಂಪರ್ಕಿಸಿ : ಸುರೇಶ್ P.S. ಶಾಮನೂರು
84314 00907

**WANTED LADY TEACHERS**
1) Head Masters - 2 Post.
2) B.Sc, B.Ed - 2 Post.
**S.R.P Group of Institution**
17th Cross, Anjaneya Badavane, Davanagere-04.
91645 05229, 97439 24203, 91136 31266

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಮನೆಯೊಂದರಲ್ಲಿ ಮನೆ ಕೆಲಸ ಹಾಗು ಮನೆಯ ಎಲ್ಲಾ ಜವಾಬ್ದಾರಿ ನಿರ್ವಹಿಸಲು ಸ್ಟ್ಯಾಂಡರ್ಡ್ ಮಹಿಳೆ ಬೇಕಾಗಿದ್ದಾರೆ. ಊಟ, ವಸತಿ ವ್ಯವಸ್ಥೆ ಇದೆ. ಸಂಬಳ : 30,000 ರೂ.
ಫೋ. : 78291 91921

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
88920 08800

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗ-ಹುಡುಗಿಯರು ಬೇಕಾಗಿದ್ದಾರೆ.
ಶ್ರೀಧರ್ ಅಕ್ವೇರಿಯಂ
ಎಂ.ಸಿ.ಸಿ. 'ಎ' ಬ್ಲಾಕ್, ಚರ್ಚ್ ರಸ್ತೆ, ದಾವಣಗೆರೆ
63621 49155

**ಸೈಟ್ ಮಾರಾಟಕ್ಕೆ**
ಡಾಲರ್ಸ್ ಕಾಲೋನಿ (40x51) ಪಶ್ಚಿಮ, ಕುಂದುವಾಡ ಸೈಟ್ 44 (30x50) ಪಶ್ಚಿಮ ನೈರುತ್ಯ ಮೂಲೆ & ಸೈಟ್ 43 (30x50) ಪಶ್ಚಿಮ (ಅಕ್ಕ-ಪಕ್ಕ)
ಫೋ. : 97404 47907

**ಬೇಕಾಗಿದ್ದಾರೆ**
**PUC /DEGREE**
ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಮಹಿಳೆಯರು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ: 6-30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಕೇರ್ ಟೇಕರ್**
ವಯೋವೃದ್ಧರನ್ನು ನಮ್ಮಲ್ಲೇ ಇರಿಸಿಕೊಂಡು ನೋಡಿಕೊಳ್ಳಲಾಗುವುದು, ಸ್ಪೆಷಲ್ ರೂಮ್ಸ್ ಮತ್ತು ಕೇರಿಂಗ್ ರೂಮ್ಸ್ ಇರುತ್ತವೆ, 24 ಗಂಟೆ ಕೇರ್‌ಟೇಕರ್ ಇರುತ್ತಾರೆ, ಸಂಪರ್ಕಿಸಿ :
89711 92936

**ಗ್ಯಾಸ್ ಗೀಜರ್**
Fully Automatic 2990/- Rs.
R.O. +uv ವಾಟರ್ ಫಿಲ್ಟರ್, 5490/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ಮನೆ ಮಾರುವುದಿದೆ**
ಜಯನಗರ 'ಎ' ಬ್ಲಾಕ್ ಕಾಳಿದಾಸ ಸರ್ಕಲ್ ಹಿಂಭಾಗ 30x40 ಅಳತೆಯ ಎರಡು ಅಂತಸ್ತಿನ ಪಶ್ಚಿಮ ದಿಕ್ಕಿನ ಕಾರ್ನರ್ ಎರಡು ವರ್ಷದ ಸುಸಜ್ಜಿತ ಹೊಸ ಮನೆ ಮಾರುವುದಿದೆ. ಸಂಪರ್ಕಿಸಿ.
9482764316
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ನೇರ ಪರೀಕ್ಷೆಗಳು**
PUC - ARTS / COMM/SCIENCE
NTC - ನರ್ಸರಿ ಟೀಚರ್ಸ್ ಟ್ರೇನಿಂಗ್.
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ -2 ವರ್ಷ. (Regular)
ಶ್ರೀ ಗಂಗೋತ್ರಿ ಕಮ್ಯುನಿಟಿ ಕಾಲೇಜ್
ಲಾಯರ್ ರೋಡ್ ,ದಾವಣಗೆರೆ.
86602 35013

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**WANTED TEACHER**
B.Sc / M.Sc or Any Degree
99641 10736

**ಸೈಟುಗಳು ಮಾರಾಟಕ್ಕಿವೆ**
ಶಿವಗಂಗಾ ಚೌಟ್ರಿ ಹಿಂಭಾಗ ಬಂಗ್ಲೆ ಸೈಟು 40 ಅಡಿ ರಸ್ತೆಗೆ ದಕ್ಷಿಣ 60x83, KHB ಕಾಲೋನಿಯಲ್ಲಿ ಪಶ್ಚಿಮ 40x60, ಅಮರನಾಥ ಲೇಔಟ್‌ನಲ್ಲಿ ಪೂರ್ವಕ್ಕೆ 30x35.5
ಬಸವರಾಜ. N
98440 84229

**ವಯೋವೃದ್ಧರ ಆರೈಕೆ ಕೇಂದ್ರ**
ನಮ್ಮಲ್ಲಿ ವೃದ್ಧರು, ವೃದ್ಧೆಯರನ್ನು ಬೆಡ್ ರಿಡನ್ ಪೇಷೆಂಟ್‌ಗಳನ್ನು ನಮ್ಮಲ್ಲೇ ಇರಿಸಿಕೊಂಡು ನೋಡಿಕೊಳ್ಳಲಾಗುವುದು, ಉತ್ತಮ ಆರೈಕೆಗಾಗಿ ಸಂಪರ್ಕಿಸಿ :
89711 92936, 97410 64663

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000ರೂ ವರೆಗೆ. ಸಂಪರ್ಕಿಸಿ
ಸ್ಕಂದ ಚಿಟ್ ಫಂಡ್ಸ್ (ರಿ.)
78997 75159

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2&3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಹೆಸರು ಸ್ಪಷ್ಟೀಕರಣ**
ಶ್ರೀ ಮಂಜು ಜಂಗ್ಲಿ ತಂದೆ ಚೆನ್ನಪ್ಪ, ಕಂದಗಲ್ ಗ್ರಾಮ, ಬಾಗಲಕೋಟೆ ತಾ||, ಜಿ|| ವಾಸಿಯಾದ ನಾನು ನನ್ನ ಎಲ್ಲಾ ದಾಖಲಾತಿಗಳಲ್ಲೂ ಈ ಮೇಲ್ಕಂಡ ಹೆಸರಿನಂತೆ ಇದ್ದು, ಆದರೆ DLನಲ್ಲಿ ಮಾತ್ರ ನನ್ನ ಹೆಸರು ಮಂಜು ಜಂಗ್ಲಿ ಬದಲು ಮಂಜು ಎಂದು ತಪ್ಪಾಗಿ ನಮೂದಾಗಿದೆ. ಆದ್ದರಿಂದ ದಿನಾಂಕ : 13.07.2023 ರಂದು ನೋಟರಿ ದಾವಣಗೆರೆಯವರ ಸಮಕ್ಷಮ ನನ್ನ ಹೆಸರು ಮಂಜು ಜಂಗ್ಲಿ ಸರಿ ಎಂದು ಪ್ರಮಾಣ ಮಾಡಿದ್ದೇನೆ.
ಸಹಿ/- ಮಂಜು ಜಂಗ್ಲಿ

**ನಂ.1. ವಶೀಕರಣಂ**
ಕನ್ನಡ, ತೆಲುಗು, ಹಿಂದಿ ಭಾಷೆಯಲ್ಲಿ ಭವಿಷ್ಯ, ಸ್ತ್ರೀ-ಪುರುಷರ ಎಲ್ಲಾ ರೀತಿಯ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಶ್ರೀ ಲಕ್ಷ್ಮಿಕಾಂತ್ ಗುರೂಜಿ, ಆಂಧ್ರಪ್ರದೇಶ ಲಾಯರ್ ರಸ್ತೆ, ದಾವಣಗೆರೆ.
9740064163

**ಸಾಲ ಸೌಲಭ್ಯ**
✦ ಮನೆ ಕಟ್ಟಲು ✦ ಮನೆ ರಿಪೇರಿ ✦ ಸೈಟು ಖರೀದಿಸಲು ✦ ಬೇರೆ ಬ್ಯಾಂಕಿನ ಸಾಲ ತೀರಿಸಲು ✦ ಮನೆ ಮೇಲೆ ಸಾಲ ✦ ಸೈಟಿನ ಮೇಲೆ ಸಾಲ ✦ ಹಂಚಿನ ಮನೆಗೆ ✦ ಶೀಟಿನ ಮನೆಗೆ, ಡೋರ್ ನಂ. ಮತ್ತು ರೆವಿನ್ಯೂ ಪ್ರಾಪರ್ಟಿ ಮೇಲೆ ಸಾಲ.
63614 28175

**ದಾನೇಶ್ ಹೋಂ ಡೆಕೋರ್**
(ಗೃಹ ಅಲಂಕಾರಿಕ ಹೂಗಳು ಮತ್ತು ಮೀನುಗಳ ಅಂಗಡಿಯಲ್ಲಿ) ಕೆ.ಟಿ.ಜೆ. ನಗರ ಹಾಗೂ ಜಯನಗರ ದಾವಣಗೆರೆ ಇಲ್ಲಿ ಕೆಲಸಕ್ಕೆ ಮಹಿಳೆಯರು ಹಾಗೂ ಯುವಕರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು
98453 70694

**REQUIERED**
Experienced Accountant in Tally Prime candidate to Famous Jewellary Shop, Davanagere. Contact :
99649 32113
88808 89524

**HOUSE FOR RENT**
2 BHK North facing with Borewell & Muncipal water and parking facility available at 11th Main, Opp. Indoor Stadium, S.S. Layout A Block.
AHMED 94481 34006

**AVOID MOSQUITOES**
Mosquito Nets For Doors & Windows
SRI GOWRI ENTERPRISES
#7C2, 4th Cross, Near, Shaneshwara Temple Karur Industrial-Area, P.B. Road, DVG-6.
72049 94628

# ಅಭಿವೃದ್ಧಿಗಾಗಿ ಸಿಎಂ ಭೇಟಿ, ಹೊಂದಾಣಿಕೆಗಲ್ಲ



## ಮಾಜಿ ಸಚಿವ ಹೆಚ್.ಡಿ. ರೇವಣ್ಣ ಸ್ಪಷ್ಟನೆ

ಬೆಂಗಳೂರು, ಜು. 14 - ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡುತ್ತೇನೆಯೇ ಹೊರತು ಯಾವುದೇ ಹೊಂದಾಣಿಕೆಗಲ್ಲ ಎಂದು ಜೆಡಿಎಸ್ ಹಿರಿಯ ಸದಸ್ಯ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ವಿಧಾನಸಭೆಯಲ್ಲಿಂದು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಅವರನ್ನು ಆಗಿಂದಾಗ್ಗೆ ಭೇಟಿ ಮಾಡುತ್ತಿರುತ್ತೀರಿ. ಮತ್ತೊಂದೆಡೆ ನಿಮ್ಮ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ. ಕುಮಾರಸ್ವಾಮಿ ಅವರು, ಸದಾಕಾಲ ಸರ್ಕಾರದ ವಿರುದ್ಧ ಆರೋಪಗಳ ಸುರಿಮಳೆಗೈಯ್ಯುತ್ತಾರೆ. ನಿಮ್ಮಲ್ಲಿಯೇ ಈ ರೀತಿಯ ವೈರುಧ್ಯ ಏಕೆ ಎಂದು ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರು ರೇವಣ್ಣ ಅವರ ಕಾಲೆಳೆದಿದ್ದರು.

ಬರೀ ಸಿದ್ದರಾಮಯ್ಯ ಅವರ ಬಳಿ ಅಷ್ಟೇ ಅಲ್ಲ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ, ಕಂದಾಯ ಸಚಿವರಾಗಿದ್ದ ಅಶೋಕ್ ಅವರ ಬಳಿಯೂ ಕೆಲಸ ಮಾಡಿಸಿಕೊಳ್ಳುತ್ತಿದ್ದೆ. ಬೇಕಾದರೆ ಅಶೋಕ್ ಅವರನ್ನೇ ಕೇಳಿ ಎಂದರು.

ಚುನಾವಣಾ ಸಂದರ್ಭದಲ್ಲಿ ನಮ್ಮ ಮಾತನ್ನು ಅವರು ಸರಿಯಾಗಿ ಕೇಳಲಿಲ್ಲ. ಕೇಳಿದ್ದರೆ ಇಬ್ಬರಿಗೂ ಇಂತಹ ಸ್ಥಿತಿ ಬರುತ್ತಿರಲಿಲ್ಲ ಎಂದಾಗ ಅಶೋಕ್ ಮಾತನಾಡಿ, ನನ್ನ ಬುಡಕ್ಕೆ ಏಕೆ ಬರುತ್ತೀರಿ? ಮಂತ್ರಿಸುವುದನ್ನು ಸರಿಯಾಗಿ ಮಂತ್ರಿಸಿದ್ದರೆ ಇನ್ನೊಂದು 40 ಸೀಟು ಬಂದಿದ್ದರೆ ಬುಗರಿಯಾಡಿಸುತ್ತಿದ್ದಿರಿ ಎಂದು ಛೇಡಿಸಿದರು.

ಆಗ ರೇವಣ್ಣ ಅವರು, ನೀವು ನಮ್ಮ ಮಾತು ಕೇಳಲಿಲ್ಲ. ನೀವಿಬ್ಬರು ಸೇರಿ ನಮ್ಮನ್ನು ತೆಗೆಯಲು ನೋಡಿದ್ದೀರಿ. ಅದರಿಂದ ನೀವೂ ಹೋದ್ರಿ, ನಾವೂ ಹೋದೆವು ಎಂದರು.

ಇದಕ್ಕೆ ಅಶೋಕ್ ಅವರು, ನೀವು ಜ್ಯೋತಿಷಿ ಬದಲಾಯಿಸಿ ಅರ್ಧ ದಾರಿಯಲ್ಲೇ ಕೈಬಿಟ್ಟರಂತೆ. ಅವರನ್ನೇ ಇಟ್ಟುಕೊಂಡಿದ್ದರೆ ರಾಹುಕಾಲ, ಗುಳಿಕಾಲ ಎಲ್ಲವನ್ನು ಸರಿಯಾಗಿ ಹೇಳುತ್ತಿದ್ದರು. ಈಗಿರುವ ಜ್ಯೋತಿಷಿ ನಿಮಗೆ ಸರಿಯಾಗಿ ಹೇಳುತ್ತಿಲ್ಲ ಎಂದು ಹೇಳಿದರು.

ಆಗ ಸಚಿವ ಎಂ.ಬಿ.ಪಾಟೀಲ್ ಮಾತನಾಡಿ, ರೇವಣ್ಣ ಅವರಿಗೆ ಅಶೋಕ್ ಮೇಲೆ ತುಂಬಾ ಪ್ರೀತಿ ಎಂದರು. ಇದಕ್ಕೆ ರೇವಣ್ಣ ಅವರು, ಹೆಚ್.ಡಿ.ಕುಮಾರಸ್ವಾಮಿ ಹಾಗೂ ಜಿ.ಪರಮೇಶ್ವರ್ ಅವರು ಚೆನ್ನಾಗಿದ್ದಾರೆ ಎಂದರು.

ಆಗ ಬಿಜೆಪಿ ಶಾಸಕ ಸುನೀಲ್‌ಕುಮಾರ್ ಮಾತನಾಡಿ, ಇನ್ನಾರು ಬಾಕಿ ಉಳಿದಿದ್ದಾರೆ ಎಂದಾಗ ಅಶೋಕ್ ಅವರು, ಹೆಚ್.ಕೆ.ಪಾಟೀಲ್ ಒಬ್ಬರೇ ಉಳಿದಿದ್ದಾರೆ ಎಂದು ತಿಳಿಸಿದರು.

ಹೆಚ್.ಕೆ.ಪಾಟೀಲ್ ಮಾತನಾಡಿ ಅವರೇ ನನ್ನನ್ನು ಬಿಟ್ಟಿದ್ದಾರೆ. ನೀವೇಕೆ ಪ್ರಸ್ತಾಪಿಸುತ್ತೀರಿ. ನಾವು ದೂರದಲ್ಲಿದ್ದೇವೆ ಎಂದರು.

ಒಂದು ಹಂತದಲ್ಲಿ ಮಧ್ಯಪ್ರವೇಶಿಸಿದ ಎಸ್.ಟಿ.ಸೋಮಶೇಖರ್, ರೇವಣ್ಣನವರು ಯಾರ ಬಗ್ಗೆ ಬೇಕಾದರೂ ಹೇಳಬಹುದು. ನಾವು ಹೇಳಲು ಹೋದರೆ ಹುಷಾರ್ ಎನ್ನುತ್ತಾರೆ ಎಂದರು.

ಆಗ ರೇವಣ್ಣ ಮಾತನಾಡಿ, ಸೋಮಶೇಖರ್ ಅವರಿಗೆ ಹುಷಾರ್ ಎಂದು ಹೇಳುತ್ತಿಲ್ಲ. ಕಾಲಚಕ್ರ ತಿರುಗುತ್ತಿದೆ. ಅಶೋಕ್ ಹಾಗೂ ಬೊಮ್ಮಾಯಿ ಅವರು ನಮ್ಮ ಒಂದು ಕುಟುಂಬವಿದ್ದಂತೆ ಅವರ ಬಗ್ಗೆ ಗೌರವವಿದೆ. ಎಂ.ಬಿ.ಪಾಟೀಲ್ ಅವರ ತಂದೆಯವರು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಕಾಲದವರು.

ಅಶೋಕಣ್ಣನವರ ಜತೆ ಕುಮಾರಣ್ಣ ಚೆನ್ನಾಗಿದ್ದಾರೆ. ಹೆಚ್.ಕೆ.ಪಾಟೀಲ್ ಅವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಎರಡು ಹೋಬಳಿಗೆ ನೀರು ಕೊಟ್ಟಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದರು. ಆಗ ಬಿಜೆಪಿಯ ಅರವಿಂದ್ ಬೆಲ್ಲದ್ ಮಾತನಾಡಿ, ನಿಮ್ಮ ನೇತೃತ್ವದಲ್ಲಿ ರಾಷ್ಟ್ರೀಯ ಸರ್ಕಾರ ಮಾಡೋಣ ಎಂದು ಛೇಡಿಸಿದರು.

# ಆದಷ್ಟು ಬೇಗ ಬ್ರಿಡ್ಜ್ ನಿರ್ಮಿಸುವಂತೆ ಅಧಿಕಾರಿಗಳಿಗೆ ಪಾಲಿಕೆ ಮೇಯರ್ ಸೂಚನೆ



## ಕೆಟಿಜೆ ನಗರಕ್ಕೆ ವಿನಾಯಕ ಪೈಲ್ವಾನ್, ಗಡಿಗುಡಾಳ್ ಮಂಜುನಾಥ್ ಭೇಟಿ

ದಾವಣಗೆರೆ, ಜು. 14 - ನಗರದ ಕೆಟಿಜೆ ನಗರದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಬ್ರಿಡ್ಜ್, ಜಲಸಿರಿ ಯೋಜನೆ, ರಾಜಕಾಲುವೆ ಕಾಮಗಾರಿಯನ್ನು ಮಹಾನಗರ ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಪಾಲಿಕೆ ವಿರೋಧ ಪಕ್ಷದ ಮಾಜಿ ನಾಯಕ ಗಡಿಗುಡಾಳ್ ಮಂಜುನಾಥ್ ಅವರು ಅಧಿಕಾರಿಗಳ ಜೊತೆ ತೆರಳಿ ವೀಕ್ಷಿಸಿದರು.

ಡಾಂಗೆ ಪಾರ್ಕ್ ಹಾಗೂ ಆಂಜನೇಯ ಸ್ವಾಮಿ ದೇವಸ್ಥಾದ ಸಮೀಪದಲ್ಲಿ ಬ್ರಿಡ್ಜ್ ಅಥವಾ ಕಲ್ಲು ಒಡ್ಡು ನಿರ್ಮಾಣ ಮಾಡಲಾಗುತ್ತಿದೆ. ಇಲ್ಲಿ ಶಾಲೆಗಳಿಗೆ ಹೋಗಲು, ಬೈಕ್, ಸಾಮಾನ್ಯ ಜನರಿಗೆ ತೊಂದರೆ ಉಂಟಾಗುತ್ತಿದೆ ಎಂಬ ದೂರುಗಳು ಬಂದ ಕಾರಣ ವಿನಾಯಕ ಪೈಲ್ವಾನ್ ಹಾಗೂ ಗಡಿಗುಡಾಳ್ ಮಂಜುನಾಥ್ ಅವರು ಸ್ಥಳದಲ್ಲಿ ನಡೆಯುತ್ತಿರುವ ಕಾಮಗಾರಿ ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಮೇಯರ್ ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಬೇಕು. ಗುಣ ಮಟ್ಟಕ್ಕೆ ಆದ್ಯತೆ ಕೊಡಬೇಕು. ಯಾವುದೇ ಕಾರಣಕ್ಕೂ ಜನರಿಂದ ದೂರು ಬರಬಾರದು. ನೀವು ತೆಗೆದುಕೊಂಡಿರುವ ಸಮಯದೊಳಗೆ ಕೆಲಸ ಮುಗಿಸಬೇಕು. ಜನರು ಎಂದಿನಂತೆ ಓಡಾಡಲು ಆದಷ್ಟು ಬೇಗ ಶ್ರಮ ವಹಿಸಿ ಬ್ರಿಡ್ಜ್ ನಿರ್ಮಾಣ ಮಾಡಬೇಕು. ಜನರಿಂದ ತುಂಬಾ ತೊಂದರೆಯಾಗುತ್ತಿದೆ ಎಂಬ ದೂರುಗಳು ಈಗಾಗಲೇ ಸಾಕಷ್ಟು ಬಂದಿವೆ. ನೆಪ ಹೇಳುವುದನ್ನು ಬಿಟ್ಟು ಜನರಿಗಾಗಿ ಕೆಲಸ ಮಾಡಿ ಎಂದು ಸೂಚಿಸಿದರು.

ನಿಟುವಳ್ಳಿ ಹಾಗೂ ಭಗತ್ ಸಿಂಗ್ ನಗರಕ್ಕೂ ಭೇಟಿ ನೀಡಿದ ಅವರು, ಜಲಸಿರಿ ಯೋಜನೆ ಹಾಗೂ ರಾಜಕಾಲುವೆ ಕಾಮಗಾರಿಗಳನ್ನೂ ಸಹ ವೀಕ್ಷಿಸಿದರು. ಮೇಯರ್ ಅವರು, ಜಲಸಿರಿ ಯೋಜನೆ ಶುರುವಾಗಿ ಕೆಲ ವರ್ಷಗಳೇ ಉರುಳಿದವು. ಇನ್ನೂ ಕಾಮಗಾರಿ ಮುಗಿದಿಲ್ಲ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿ ಜನರಿಗೆ ನೀರು ಪೂರೈಸುವ ಕೆಲಸ ಮಾಡಿ. ರಾಜ ಕಾಲುವೆ ಒತ್ತುವರಿ ತೆರವು, ಈಗ ತೆಗೆದುಕೊಂಡಿರುವ ಕಾಮಗಾರಿಗಳನ್ನು ಆದ್ಯತಾನುಸಾರ ಪೂರ್ಣಗೊಳಿಸಿ ಎಂದು ಸೂಚಿಸಿದರು.

ಪಾಲಿಕೆಯ ಎಕ್ಸಿಕ್ಯೂಟಿವ್ ಎಂಜಿನಿಯರ್ ಮನೋಹರ್ ಮಾತನಾಡಿ, ಕೆಟಿಜೆ ನಗರದಲ್ಲಿ ಕೈಗೊಳ್ಳಲಾಗಿರುವ ಬ್ರಿಡ್ಜ್ ಬೇಗನೇ ಮುಗಿಯುತ್ತಿತ್ತು. ವಿಧಾನಸಭೆ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿತ್ತು. ಈ ಕಾರಣಕ್ಕೆ ಕಾಮಗಾರಿ ನಿಲ್ಲಿಸಲಾಗಿತ್ತು.

ಈಗ ಕೆಲಸ ಆರಂಭಿಸಲಾಗಿದೆ. ಬ್ರಿಡ್ಜ್ ನಿರ್ಮಾಣ ಕಾರ್ಯ ವೇಗವಾಗಿ ನಡೆಯುತ್ತಿದೆ. ಸ್ಲಾಬ್ ಹಾಕಬೇಕು. ಇನ್ನು 15 ರಿಂದ 20 ದಿನಗಳೊಳಗೆ ಪೂರ್ಣಗೊಳಿಸಿ ಜನರ ಸೇವೆಗೆ ಅನುವು ಮಾಡಿಕೊಡಲಾಗುವುದು. ಭಗತ್ ಸಿಂಗ್ ನಗರದ ರಾಜಕಾಲುವೆ, ಬ್ರಿಡ್ಜ್ ನಿರ್ಮಾಣ ಸೇರಿದಂತೆ ಒಟ್ಟು 1. 50 ಕೋಟಿ ರೂಪಾಯಿ ವೆಚ್ಚದಲ್ಲಿ ಕಾಮಗಾರಿ ನಡೆಸಲಾಗುತ್ತಿದೆ. ಬ್ರಿಡ್ಜ್ ನಿರ್ಮಾಣದ ಸಮೀಪ ಕಸ, ಕಡ್ಡಿ, ತ್ಯಾಜ್ಯ ಇದ್ದು, ಅದನ್ನು ತೆರವುಗೊಳಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಜಲಸಿರಿ ಯೋಜನೆಯಡಿ ನಡೆಯುತ್ತಿರುವ ಕಾಮಗಾರಿಯೂ ವೇಗ ಪಡೆದಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ಜಲಸಿರಿ ಯೋಜನೆಯ ಇಂಜಿನಿಯರ್ ಶಿವಕುಮಾರ್, ಪಾಲಿಕೆಯ ಮಾಜಿ ಉಪ ಮಹಾಪೌರರಾದ ದ್ಯಾಮಪ್ಪ ಮತ್ತಿತರರು ಹಾಜರಿದ್ದರು.

## ನಗರದಲ್ಲಿ ಇಂದು ಶಿವಾನಂದ ತೀರ್ಥ ಗುರುಗಳವರ ಜಯಂತ್ಯೋತ್ಸವ



ಶ್ರೀ ಶಿವಾನಂದ ತೀರ್ಥ ಗುರು ಅಧ್ಯಾತ್ಮ ಮಂದಿರ, ಶ್ರೀ ರಾಜನಹಳ್ಳಿ ಹರಿಹರಪ್ಪ ಟ್ರಸ್ಟ್ ವತಿಯಿಂದ ಜಯದೇವ ಸರ್ಕಲ್‌ನಲ್ಲಿರುವ ಶ್ರೀ ಶಿವಾನಂದ ತೀರ್ಥಗುರು ಅಧ್ಯಾತ್ಮ ಮಂದಿರದಲ್ಲಿ ಶ್ರೀಮತ್ಪರಮಹಂಸೇತ್ಯಾದಿ ಶ್ರೀ ಶಿವಾನಂದ ತೀರ್ಥಗುರುಗಳವರ ಜಯಂತ್ಯೋತ್ಸವವನ್ನು ಇಂದು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 6 ಗಂಟೆಗೆ ಶ್ರೀ ಗುರುಗಳವರ ಪಾದುಕೆಗೆ ಕಾಕಡಾರತಿ, ಮಂಗಳಸ್ನಾನ, ಶ್ರೀ ಗಣಪತಿ ಸ್ಮರಣೆ, ಶ್ರೀ ವೀರಾಂಜನೇಯ ಸ್ವಾಮಿ ಪೂಜೆ, ಬೆಳಿಗ್ಗೆ 9.30 ಕ್ಕೆ ಶ್ರೀ ಗುರುಗಳವರ ಪಾದುಕೆಗೆ ಲಘು ನ್ಯಾಸಪೂರ್ವಕ ಲಘುನ್ಯಾಸಪೂರ್ವಕ ಏಕಾದಶವರ್ತನ ರುದ್ರಾಭಿಷೇಕ, 11.30 ಕ್ಕೆ ಶ್ರೀ ಶಿವಾನಂದ ತೀರ್ಥಗುರುಗಳವರ ನಿರೂಪಣೆ ಮತ್ತು ತೊಟ್ಟಿಲೋತ್ಸವ, ಮಧ್ಯಾಹ್ನ 1 ಗಂಟೆಗೆ ಅಷ್ಟಾವಧಾನ, ವೇದಘೋಷ, ಮಂತ್ರಪುಷ್ಪ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ನಡೆಯುವುದು. ಸಂಜೆ 6 ಗಂಟೆಗೆ ಶ್ರೀ ವಾಸವಿ ಭಜನಾ ಮಂಡಳಿಯಿಂದ ಭಜನೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ನಡೆಯುವುದು.

ಕಾರ್ಯಕ್ರಮವನ್ನು ಧರ್ಮಪ್ರಕಾಶ ದಿ. ರಾಜನಹಳ್ಳಿ ರಾಮಶ್ರೇಷ್ಠಿಯವರ ಸುಪುತ್ರಿ ದಿ. ಶ್ರೀಮತಿ ಸಿ.ವಿ. ಸುನಂದಮ್ಮನವರ ಹೆಸರಿನಲ್ಲಿ ಮತ್ತು ದಿ. ಶ್ರೀಮತಿ ಬ್ಯಾಡಿಗಿ ಜಯಲಕ್ಷ್ಮಮ್ಮ, ದಿ. ವಿರುಪಾಕ್ಷಪ್ಪ ಶ್ರೇಷ್ಠಿ ಇವರ ಹೆಸರಿನಲ್ಲಿ ಮತ್ತು ಶ್ರೀ ರಾಜನಹಳ್ಳಿ ಗೋಪಾಲಕೃಷ್ಣ ಶೆಟ್ಟಿ ಇವರ ಜ್ಞಾಪಕಾರ್ಥವಾಗಿ ಶ್ರೀಮತಿ ರಾಜನಹಳ್ಳಿ ಕಾಂತಲಕ್ಷ್ಮಮ್ಮ ಮತ್ತು ಮಕ್ಕಳ ಹೆಸರಿನಲ್ಲಿ ಶ್ರೀ ರಾಜನಹಳ್ಳಿ ಹರಿಹರಪ್ಪ ಟ್ರಸ್ಟ್‌ನಿಂದ ನಡೆಸಲಾಗುವುದು.

## ಜೆಜೆಎಂ ವಿದ್ಯಾರ್ಥಿ ಸಂಘದಿಂದ ಇಂದು ಮಾನ್ಸೂನ್ ಫಿಯೆಸ್ಟಾ

ಜೆ.ಜೆ.ಎಂ. ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಸಂಘದಿಂದ 76ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಜೆ.ಜೆ.ಎಂ. ಕಾಲೇಜು ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಮಾನ್ಸೂನ್ ಫಿಯೆಸ್ಟಾ ಕ್ರೀಡೆಗಳನ್ನು ಇಂದಿನಿಂದ ಹಮ್ಮಿಕೊಳ್ಳಲಾಗಿದೆ.

ಕಾಲೇಜಿನ ಪ್ರಾಚಾರ್ಯ ಡಾ.ಎಸ್.ಬಿ. ಮುರುಗೇಶ್ ಅವರ ನೇತೃತ್ವದಲ್ಲಿ ದೇಸೀ ಕ್ರೀಡೆಗಳ ಉತ್ಸವ ಹಮ್ಮಿಕೊಳ್ಳಲಾಗಿದೆ. ಮರೆಯಾಗುತ್ತಿರುವ ದೇಸೀ ಕ್ರೀಡೆಗಳನ್ನು ಆಡಿಸಿ, ಅದನ್ನು ಜೀವಂತವಾಗಿಸುವ ಪ್ರಯತ್ನ ಇದಾಗಿದ್ದು, ಅಂದು ಬೆಳಿಗ್ಗೆ 11 ಗಂಟೆಗೆ ಇಲ್ಲಿನ ಗಾಜಿನ ಮನೆ ಎದುರು ಇರುವ ವೀರಬಸಪ್ಪ ಗದ್ದೆಯಲ್ಲಿ ಕ್ರೀಡಾ ಕೂಟಗಳು ನಡೆಯಲಿದ್ದು, ಮೇಯರ್ ವಿನಾಯಕ ಪೈಲ್ವಾನ್ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಮುಖ್ಯ ಅತಿಥಿಗಳಾಗಿ ಪಾಲಿಕೆ ಸದಸ್ಯ ಗಡಿಗುಡಾಳ ಮಂಜುನಾಥ, ರೈತರಾದ ವೀರಬಸಪ್ಪ, ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು, ವಿದ್ಯಾರ್ಥಿಗಳು ಭಾಗವಹಿಸುವರು.

ಇಂದು ಕೆಸರುಗದ್ದೆಯಲ್ಲಿ ಕೆಸರುಗದ್ದೆ ಓಟ, ಹಗ್ಗ ಜಗ್ಗಾಟ, ವಾಲಿಬಾಲ್, ಥ್ರೋಬಾಲ್ ಕ್ರೀಡೆಗಳು ನಡೆಯಲಿವೆ.

ಇದೇ ದಿನಾಂಕ 23 ರ ಭಾನುವಾರ ಜಿಲ್ಲಾ ಕ್ರೀಡಾಂಗಣದಲ್ಲಿ ಬುಗುರಿ, ಚಿನ್ನಿದಾಂಡು, ಗೋಲಿ, ಲಗೋರಿ, ಕುಂಟಬಿಲ್ಲೆ ಆಟಗಳನ್ನು ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಉದ್ಘಾಟಿಸುವರು.

ದಿನಾಂಕ 30 ರ ಭಾನುವಾರ ಜೆ.ಜೆ.ಎಂ. ಮೆಡಿಕಲ್ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಚೌಕಾಬಾರ, ಕುರಿ ಮತ್ತು ನರಿ, ಅಳಿಗುಳಿ ಮನೆ ಆಟ ನಡೆಯಲಿದೆ. ಆಗಸ್ಟ್ 6 ರಂದು ಜೆ.ಜೆ.ಎಂ. ಮೆಡಿಕಲ್ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಕೇರಂ, ಚೆಸ್, ಟೇಬಲ್ ಟೆನ್ನಿಸ್ ಆಟಗಳನ್ನು ಆಡಿಸಲಾಗುವುದು.

## ಎಸ್ಪಿ ಕಚೇರಿ ಆವರಣದಲ್ಲಿಯೇ ಮಹಿಳೆಯಿಂದ ವಿಷ ಸೇವನೆ

ದಾವಣಗೆರೆ, ಜು. 14- ಆಸ್ತಿ ವ್ಯಾಜ್ಯ ವಿಚಾರವಾಗಿ ದೂರು ನೀಡಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಗೆ ಆಗಮಿಸಿದ್ದ ಮಹಿಳೆಯೊಬ್ಬರು, ಎಸ್ಪಿ ಅವರನ್ನು ಭೇಟಿ ಮಾಡುವ ಮೊದಲೇ ಏಕಾಏಕಿ ವಿಷ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದ ಘಟನೆ ನಡೆದಿದೆ.

ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರು ಪೊಲೀಸ್ ಠಾಣೆ ವ್ಯಾಪ್ತಿಯ ಶಿವಕುಳೇನೂರು ಗ್ರಾಮದ ಶ್ರೀಮತಿ ವೇದಾವತಿ ಇಂದು ಮಧ್ಯಾಹ್ನ ಸುಮಾರು 2 ಗಂಟೆ ಸಮಯದಲ್ಲಿ ತನ್ನ ಗಂಡನ ಅಣ್ಣನಾದ ವೆಂಕಟೇಶ ಮತ್ತು ಅವರ ಮನೆಯ ಕಡೆಯವರ ವಿರುದ್ಧ ದೂರು ನೀಡಲು ಎಸ್ಪಿ ಕಚೇರಿಗೆ ಆಗಮಿಸಿದ್ದರು. ಏಕಾಏಕಿಯಾಗಿ ವಿಷ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದ ಅವರನ್ನು ಕೂಡಲೇ 112 ವಾಹನವನ್ನು ಕರೆಯಿಸಿ ಅದರಲ್ಲಿ ಸಿಬ್ಬಂದಿಯೊಂದಿಗೆ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಗೆ ಕಳಿಸಲಾಯಿತು ಎಂದು ಎಸ್ಪಿ ಡಾ.ಅರುಣ್ ಕೆ. ತಿಳಿಸಿದ್ದಾರೆ. ನಂತರ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಿಸಲಾಗಿದ್ದು, ಸದರಿ ಮಹಿಳೆಗೂ ಅವರ ಗಂಡನ ಸಹೋದರ ಹಾಗೂ ಅವರ ಕುಟುಂಬದೊಂದಿಗೆ ಸುಮಾರು 7-8 ವರ್ಷಗಳಿಂದ ಆಸ್ತಿ ವ್ಯಾಜ್ಯ ನಡೆಯುತ್ತಿರುವುದು ತಿಳಿದುಬಂದಿದೆ.

ಮಹಿಳೆಯಿಂದ ದೂರು ಅರ್ಜಿಯನ್ನು ಪಡೆದು, ದೂರು ಅರ್ಜಿಯ ವಿಚಾರಣೆಯನ್ನು ಹೆಚ್ಚುವರಿ ಪೊಲೀಸ್ ಅಧೀಕ್ಷಕರವರಿಗೆ ನೀಡಲಾಗಿದೆ. ಮಹಿಳೆ ನೀಡಿರುವ ದೂರು ಅರ್ಜಿಯನ್ನು ಪರಿಶೀಲಿಸಲು ಕಂದಾಯ ಇಲಾಖೆಯ ಅಧಿಕಾರಿಗಳ ಅಭಿಪ್ರಾಯವನ್ನು ಪಡೆದುಕೊಂಡು ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದವರು ಹೇಳಿದ್ದಾರೆ.

## ಎಂಟನೇ ಚೀತಾ ಸಾವು

ಭೂಪಾಲ್, ಜು. 14 - ಮಧ್ಯ ಪ್ರದೇಶದ ಕುನ್ನೊ ರಾಷ್ಟ್ರೀಯ ಉದ್ಯಾನದಲ್ಲಿ ಮತ್ತೊಂದು ಚಿರತೆ ಸಾವನ್ನಪ್ಪಿದೆ. ವಿದೇಶಗಳಿಂದ ಚೀತಾಗಳನ್ನು ತರಿಸಿದ ನಂತರ ಇದುವರೆಗೂ ಎಂಟು ಸಾವನ್ನಪ್ಪಿವೆ.


ಸೂರಜ್ ಹೆಸರಿನ ಚೀತಾ ಸಾವನ್ನಪ್ಪಿದೆ. ಮೂರು ದಿನಗಳ ಹಿಂದಷ್ಟೇ ತೇಜಸ್ ಎಂಬ ಹೆಸರಿನ ಚೀತಾ ಸಾವನ್ನಪ್ಪಿತ್ತು. ಚಿರತೆಯ ಕತ್ತು ಹಾಗೂ ಬೆನ್ನಿನಲ್ಲಿ ಗಾಯದ ಗುರುತುಗಳು ಕಂಡು ಬಂದಿವೆ. ಈ ಬಗ್ಗೆ ವಿವರವಾದ ವರದಿ ಪಡೆಯಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## 'ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣಗಳು' ಹೊತ್ತಿಗೆ ಲೋಕಾರ್ಪಣೆ

ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿನ ಸಿರಿಗೇರಿ ಅನ್ನಪೂರ್ಣ ಪ್ರಕಾಶನದ ಸಿರಿಗೇರಿ ಯರಿಸ್ವಾಮಿ ಅವರ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣಗಳು ಹೊತ್ತಿಗೆ ಲೋಕಾರ್ಪಣೆ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿಜ್ಞಾನ ಪದವಿ ಪೂರ್ವ ವಿದ್ಯಾಲಯದಲ್ಲಿ ನಡೆಯಲಿದೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪುಸ್ತಕ ಬಿಡುಗಡೆ ಮಾಡುವರು. ಕವಿ ಹುಲಿಕಟ್ಟೆ ಚನ್ನಬಸಪ್ಪ ಅಧ್ಯಕ್ಷತೆ ವಹಿಸಲಿದ್ದು, ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ವಾಮದೇವಪ್ಪ, ಆಡಳಿತ ಮಂಡಳಿ ಅಧ್ಯಕ್ಷ ಮಹಾಲಿಂಗಪ್ಪ ಉಪಸ್ಥಿತರಿರುವರು.

## ಬಾಡಾದಲ್ಲಿ ನಾಳೆ ಶ್ರೀ ನಿಜ ಸುಖಿ ಹಡಪದ ಅಪ್ಪಣ್ಣನವರ ಜಯಂತಿ



ದಾವಣಗೆರೆ, ಜು.14- ತಾಲ್ಲೂಕಿನ ಬಾಡ ಗ್ರಾಮ ಪಂಚಾಯಿತಿ ಆವರಣದಲ್ಲಿ ನಾಡಿದ್ದು ದಿನಾಂಕ 16 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ನಿಜ ಸುಖಿ ಹಡಪದ ಅಪ್ಪಣ್ಣನವರ 889ನೇ ಜಯಂತ್ಯೋತ್ಸವವನ್ನು ಶ್ರೀ ಹಡಪದ ಅಪ್ಪಣ್ಣ ಸೇವಾ ಸಮಿತಿಯಿಂದ ಹಮ್ಮಿಕೊಳ್ಳಲಾಗಿದೆ.

ಸಾನ್ನಿಧ್ಯವನ್ನು ಶ್ರೀ ಅನ್ನದಾನಿ ಭಾರತಿ ಹಡಪದ ಅಪ್ಪಣ್ಣ ಮಹಾ ಸ್ವಾಮೀಜಿ, ಸುಕ್ಷೇತ್ರ ತಂಗಡಗಿ ಮಠ, ಮುದ್ದೇಬಿಹಾಳ್ ತಾ. ಇವರು ವಹಿಸುವರು. ಕಾರ್ಯಕ್ರಮವನ್ನು ಶಾಸಕ ಕೆ.ಎಸ್. ಬಸವಂತಪ್ಪ ಉದ್ಘಾಟಿಸುವರು. ಬಿ.ಎನ್. ಮಹಾರುದ್ರಪ್ಪ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ನಿವೃತ್ತ ಉಪನ್ಯಾಸಕ ಡಾ. ಎನ್.ಜೆ. ಶಿವಕುಮಾರ್ ಅನುಭಾವ ನಡೆಸಿ ಕೊಡುವರು.

## ನಗರದಲ್ಲಿ ಇಂದು ಯಕ್ಷಗಾನ ಪ್ರದರ್ಶನ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಯಕ್ಷರಂಗ ಯಕ್ಷಗಾನ ಸಂಸ್ಥೆಯ ಆಶ್ರಯದಲ್ಲಿ ಇಂದು ಸಂಜೆ 6 ಗಂಟೆಗೆ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲೆಯಲ್ಲಿ ಯಕ್ಷಗಾನ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಯಕ್ಷಗಾನ ಭಾಗವತರಾದ ರಾಘವೇಂದ್ರ ಮಯ್ಯ ಉದ್ಘಾಟಿಸಲಿದ್ದು, ಸಮಾರಂಭದ ಅಧ್ಯಕ್ಷತೆಯನ್ನು ಯಕ್ಷರಂಗದ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿ ವಹಿಸುವರು. ಮುಖ್ಯ ಅತಿಥಿಗಳಾಗಿ ಸಾಲಿಗ್ರಾಮ ಗಣೇಶ್ ಶೆಣೈ, ಕಲಾಕುಂಚದ ಅಧ್ಯಕ್ಷ ಕೆ.ಹೆಚ್.ಮಂಜುನಾಥ್, ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ ಆಗಮಿಸುವರು.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಾಲಾಡಿಯ ಶ್ರೀ ಮಹಾಗಣಪತಿ ಪ್ರವಾಸಿ ಯಕ್ಷಗಾನ ಮಂಡಳಿಯ ಪ್ರಖ್ಯಾತ ಯಕ್ಷಗಾನ ಕಲಾವಿದರಿಂದ 'ಮಾಯಾಪುರಿ ಮಹಾತ್ಮೆ', 'ಶಿವಭಕ್ತ ವೀರಮಣಿ' ಪೌರಾಣಿಕ ಕಥಾನಕದ ಯಕ್ಷಗಾನ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

## ಇ-ಸ್ಟೋರ್ ಮಾಡುವುದಾಗಿ ಹೇಳಿ ವಂಚನೆ; ಆರೋಪಿಗಳ ಪತ್ತೆಗೆ ತನಿಖೆ: ಎಸ್ಪಿ ಅರುಣ್



ದಾವಣಗೆರೆ, ಜು. 14- ಇ-ಸ್ಟೋರ್ ಮಾಡುವುದಾಗಿ ಹೇಳಿ ಹಲವರಿಂದ 2 ಕೋಟಿ ರೂ.ಗೂ ಹೆಚ್ಚು ಹಣ ವಂಚನೆ ಕುರಿತಂತೆ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಎಸ್ಪಿ ಡಾ. ಅರುಣ್ ಕುಮಾರ್ ಕೆ. ಹೇಳಿದ್ದಾರೆ.

ಕಳೆದ ಏಪ್ರಿಲ್ ತಿಂಗಳಲ್ಲಿ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಹಣ ವಂಚನೆಯ ದೂರು ದಾಖಲಾಗಿತ್ತು. ಆದರೆ ದೂರು ನೀಡಿದವರಿಗೆ ವಂಚಿಸಿದ ವ್ಯಕ್ತಿಗಳು ಯಾರು? ಎಲ್ಲಿಂದ ಬಂದಿದ್ದಾರೆ ಎಂಬುದೂ ಗೊತ್ತಿಲ್ಲ.

ಇ-ಸ್ಟೋರ್ ಅಂಗಡಿ ಮಾಡಿಕೊಡುವುದಾಗಿ ಅಲ್ಲಿನ ಸ್ಥಳೀಯರಿಗೆ ಹೇಳಿ ಹಣ ಪಡೆದು, ಕೆಲವರಿಗೆ ಅಂಗಡಿ ಮಾಡಿಕೊಟ್ಟಿದ್ದಾರೆ. ಅದರಲ್ಲಿ ರಿಯಾಯಿತಿ ದರದಲ್ಲಿ ವಸ್ತುಗಳನ್ನು ಕೊಡುವುದಾಗಿ ಹೇಳಿ ಸ್ವಲ್ಪ ದಿನಗಳ ಕಾಲ ರಿಯಾಯಿತಿಯಲ್ಲಿ ವಸ್ತುಗಳನ್ನೂ ಕೊಟ್ಟಿದ್ದಾರೆ. ನಂತರ ಹಣ ಪಡೆದವರಿಗೆ ಅಂಗಡಿಯನ್ನೂ ಮಾಡಿಕೊಡದೆ ಮೋಸ ಮಾಡಿದ್ದಾರೆ ಎಂಬ ವಿಷಯ ಗಮನಕ್ಕೆ ಬಂದಿದೆ. ದಾವಣಗೆರೆ ಜಿಲ್ಲೆ ಮಾತ್ರವಲ್ಲದೆ, ಶಿವಮೊಗ್ಗದಲ್ಲೂ ಇಂತಹ ದೂರು ಬಂದಿದ್ದು, ತನಿಖೆ ನಡೆಸಿ ಆರೋಪಿಗಳನ್ನು ಪತ್ತೆ ಹಚ್ಚಲಾಗುವುದು ಎಂದವರು ಹೇಳಿದರು.


ಯಶಸ್ವೀ 75ನೇ ಪ್ರದರ್ಶನದತ್ತ ಸಾಗುತ್ತಿರುವ

ಶ್ರೀ ಸಂತ ಶರೀಫ ಶಿವಯೋಗಿ ನಾಟ್ಯಸಂಘ (ರಿ.) ತೆಗ್ಗಿಹಳ್ಳಿ ಇವರಿಂದ

ದಾವಣಗೆರೆ ಪಿ.ಬಿ. ರಸ್ತೆ, ಟಿ.ಎಂ. ವಿನಾಯಕ ಪಿಎಂಪಿಎಸ್. ಕಾಂಪೌಂಡಿನಲ್ಲಿ

ಮಧ್ಯಾಹ್ನ 3 ಗಂಟೆಗೆ, ಸಂಜೆ 6.15ಕ್ಕೆ ಪ್ರತಿದಿನ 2 ಪ್ರದರ್ಶನಗಳು



ಬಳಿಗಾರ ಹನುಮವ್ವ

ಹೆಣ್ಣುಮಕ್ಕಳು ಅತ್ಯವಶ್ಯಕವಾಗಿ ನೋಡುವಂತಹ ನಾಟಕ

ಈ ನಾಟಕದಲ್ಲಿ ದಾನಮ್ಮ ದೇವಿ ಚಿತ್ರದಲ್ಲಿ ನಟಿಸಿದ ಆಶಾರಾಣಿ ಬಿಜಾಪುರ ಇವರು ಮುಖ್ಯ ಪಾತ್ರದಲ್ಲಿದ್ದಾರೆ.

ಟಿಕೆಟ್ ದರ ಖರ್ಚು 100/-

ಮಾಲೀಕರು : ಖತಾಲಸಾಬ ಆರ್. ಬಣಗಾರ

ಸಂಚಾಲಕರು : ಆಶಾರಾಣಿ ಬಿಜಾಪುರ


## ನಂದಗೋಕುಲ ಶಾಲೆಯಲ್ಲಿ ಗೀತ ಗಾಯನ ಸ್ಪರ್ಧೆ




ದಾವಣಗೆರೆ, ಜು. 14 - ನಂದಗೋಕುಲ ಆಂಗ್ಲ ಮಾಧ್ಯಮ ನರ್ಸರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಇಂದು ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಕಬ್ ಮತ್ತು ಬುಲ್ ಬುಲ್ ಘಟಕಗಳ ವಿದ್ಯಾರ್ಥಿಗಳಿಗೆ ಗೀತ ಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯದರ್ಶಿ ಶ್ರೀಮತಿ ಬಿ.ಅನುಸೂಯ, ಶಾಲೆಯ ಶಿಕ್ಷಕಿ ಶ್ರೀಮತಿ ರೆಹನಾ ಬಾನು, ನಾಸಿಕ ಪ್ರೌಢಶಾಲಾ ವಿಭಾಗದ ಹಿರಿಯ ಶಿಕ್ಷಕ ಬಸವರಾಜ್ ಮತ್ತು ಪ್ರಾಥಮಿಕ ವಿಭಾಗದ ಶ್ರೀಮತಿ ನಾಜಿಮಾ ಬಾನು, ಭಾರತ್ ಸ್ಕೌಟ್ ಅಂಡ್ ಗೈಡ್ ಯುವ ಸಮಿತಿ ಅಧ್ಯಕ್ಷ ಮುಸ್ತಫರಾಜ ಹಾಗೂ ಸ್ಕೌಟ್ ಕಬ್ ಮಾಸ್ಟರ್ ಕೆ.ಬಿ. ನಳಿನ, ಕೆ. ಮಾನಸ ಮತ್ತು ಗೈಡ್ ಹಾಗೂ ಬುಲ್ ಬುಲ್ ಕ್ಯಾಪ್ಟನ್ಸ್ ವಿಜಯಲಕ್ಷ್ಮಿ, ಸೋನಿಕ ಹಾಗೂ ಕಚೇರಿಯ ವ್ಯವಸ್ಥಾಪಕರಾದ ಪುಷ್ಪ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.


ಡೀಲರ್‌ಶಿಪ್ ಅವಕಾಶ

ದಾವಣಗೆರೆ ನಗರ, ಚನ್ನಗಿರಿ, ಹೊನ್ನಾಳಿಗೆ ಗೋ ಗ್ಯಾಸ್ ವಾಣಿಜ್ಯ ಬಳಕೆ (ಕಮರ್ಷಿಯಲ್) ಗ್ಯಾಸ್ ಸಿಲಿಂಡರ್ ವಿತರಕರು ಬೇಕಾಗಿದ್ದಾರೆ.

ಕಡಿಮ ಬಂಡವಾಳ / ಆಕರ್ಷಕ ಲಾಭ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.

93800 15165 / 93800 04019

ಕಮರ್ಷಿಯಲ್ / ಗೂಡ್ಸ್ ಆಟೋ ಹೊಂದಿದವರಿಗೆ ಮೊದಲ ಆದ್ಯತೆ.


## ಓದುಗರ ಪತ್ರ

### ಸರ್ಕಾರ ಅವಿವಾಹಿತರಿಗೆ ಕಂಕಣ ಭಾಗ್ಯ ನೀಡಲಿ

**ಮಾನ್ಯರೇ,**

ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ದಾಖಲೆಯ ಬಹುಮತದೊಂದಿಗೆ ಸರ್ಕಾರ ರಚನೆ ಮಾಡಿದ್ದು, ತನ್ನ ಭರವಸೆಗಳನ್ನೆಲ್ಲಾ ಈಡೇರಿಸುವತ್ತ ದಾಪುಗಾಲಿಟ್ಟಿದೆ. ಕೆಲ ಜನಪ್ರಿಯ ಯೋಜನೆಗಳೇ ಕಾಂಗ್ರೆಸ್‌ನ ಈ ಬಹುಮತಕ್ಕೆ ಕಾರಣವೂ ಎನ್ನಬಹುದು. ಆದರೆ, ರಾಜ್ಯದಲ್ಲಿ ಅವಿವಾಹಿತ ಯುವಕರ ಸಂಖ್ಯೆ ಪ್ರತಿ ವರ್ಷವೂ ಹೆಚ್ಚಾಗುತ್ತಲೇ ಇದೆ. ರೈತಾಪಿ, ಬಡ ಮತ್ತು ಮಧ್ಯಮ ವರ್ಗದ ಯುವಕರಿಗೆ ಹೆಣ್ಣು ಕೊಡಲು ಯಾರೂ ಮುಂದೆ ಬರುತ್ತಿಲ್ಲ. ಕಾರಣ ಹುಡುಗ ಸರ್ಕಾರಿ ನೌಕರಿಯಲ್ಲಿರಬೇಕು, ಕೋಟ್ಯಂತರ ರೂಪಾಯಿ ಆಸ್ತಿಪಾಸ್ತಿ ಹಿನ್ನೆಲೆ ಯಳ್ಳವರಾಗಿರಬೇಕು ಎಂಬ ಮನಸ್ಥಿತಿ. ಸರ್ಕಾರಿ ನೌಕರಿ ಎಂಬುದು ಮಾರುಕಟ್ಟೆಯಲ್ಲಿ ಸಿಗುವ ವಸ್ತು ಎಂದು ಬಹುಶಃ ತಿಳಿದಿರಬಹುದೇನೋ ಈ ಹೆಣ್ಣೆತ್ತವರು, ನಿಜಕ್ಕೂ ನಾ ಕಾಣೆ. 'ಹೆಣ್ಣಿನ ಸಮಸ್ಯೆ' ಎಂಬುದು ಕಣ್ಣಿಗೆ ಕಾಣದ ರಾಜ್ಯದ ಜ್ವಲಂತ ಸಮಸ್ಯೆಗಳಲ್ಲಿ ಒಂದಾಗಿದೆ. ಆದ ಕಾರಣ, ಸರ್ಕಾರವು ರಾಜ್ಯದ ಎಲ್ಲಾ ವರ್ಗದವರಿಗೂ ಭಾಗ್ಯಗಗಳನ್ನು ನೀಡಿದ ಹಾಗೆ ಅವಿವಾಹಿತ ಯುವಕರಿಗೆ ಯಾವ ರೂಪದಲ್ಲಾದರೂ ಕೂಡ ಕಂಕಣ ಭಾಗ್ಯ ನೀಡಬೇಕಾಗಿದೆ.

- **ಮುರುಗೇಶ ಡಿ.,** ಹವ್ಯಾಸಿ ಬರಹಗಾರರು, ದಾವಣಗೆರೆ.

## ರಸ್ತೆ ಅಪಘಾತದಲ್ಲಿ ಬ್ಯಾಂಕ್ ಉದ್ಯೋಗಿಯ ಸಾವು



ದಾವಣಗೆರೆ,ಜು.14- ಇಲ್ಲಿನ ರಾಷ್ಟ್ರೀಯ ಹೆದ್ದಾರಿ 4 ರಲ್ಲಿನ ಸರ್ವಿಸ್ ರೋಡ್‌ನಲ್ಲಿ ಇಂದು ಸಂಜೆ ರಾತ್ರಿ 7.30ರ ಸಮಯದಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಲೆಕ್ಕಾಧಿಕಾರಿ ಶ್ರೀಮತಿ ಶುಭಾ ನವೀನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಶುಭಾ ಅವರು ದ್ವಿಚಕ್ರ ವಾಹನ ಪ್ಲೆಜರ್ ಅನ್ನು ಸವಾರಿ ಮಾಡಿ ಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಹಿಂದಿನಿಂದ ವೇಗದಲ್ಲಿ ಬಂದ ಕಾರೊಂದು ಪ್ಲೆಜರ್ ವಾಹನಕ್ಕೆ ಅಪ್ಪಳಿಸಿ, ಎದುರಿಗೆ ಬರುತ್ತಿದ್ದ ಮತ್ತೊಂ ದು ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಈ ದುರಂತ ನಡೆದಿದೆ. ಎಂದಿನಂತೆ ಇಂದೂ ಬ್ಯಾಂಕಿನ ಕೆಲಸ ಮುಗಿಸಿದ ಶುಭಾ ಅವರು, ಎಸ್.ಎಸ್. ಹೈಕೆಟ್ ಆಸ್ಪತ್ರೆ ಆವರಣದಲ್ಲಿರುವ ಸ್ಪರ್ಷ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತಮ್ಮ ಅತ್ತೆಯನ್ನು ನೋಡಿಕೊಂಡು ವಾಪಸ್ ಮನೆಗೆ ಹೋಗುತ್ತಿದ್ದ ವೇಳೆ ಈ ಅಪಘಾತ ನಡೆದಿದೆ.

ಎಂ.ಸಿ.ಸಿ. 'ಎ' ಬ್ಲಾಕ್‌ನ ತೊಗಟವೀರ ಕಲ್ಯಾಣ ಮಂಟಪದ ಹತ್ತಿರದಲ್ಲಿ ವಾಸವಾಗಿದ್ದ ಶುಭಾ ಅವರಿಗೆ ಸುಮಾರು 45 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದು, ನಾಳೆ ದಿನಾಂಕ 15ರ ಶನಿವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ.

## 20ರಂದು ನಿವೃತ್ತ ಶಿಕ್ಷಕರಿಗೆ ಉಚಿತ ಕೀಲು ಬದಲಾವಣೆ ಶಸ್ತ್ರ ಚಿಕಿತ್ಸೆ

ದಾವಣಗೆರೆ, ಜು. 14 - ಬೆಂಗಳೂರಿನ ಸ್ಪರ್ಶ್ ಗ್ರೂಪ್ ಆಫ್ ಹಾಸ್ಪಿಟಲ್‌ನ ದತ್ತಿ ವಿಭಾಗದ ಸ್ಪರ್ಶ್ ಫೌಂಡೇಶನ್‌ನಿಂದ 'ಸ್ಪರ್ಶ್ ಗುರು ನಮನ' ಕಾರ್ಯಕ್ರಮದಡಿ ನಿವೃತ್ತ ಶಿಕ್ಷಕರಿಗೆ ಉಚಿತ ಕೀಲು ಬದಲಾವಣೆ ಶಸ್ತ್ರ ಚಿಕಿತ್ಸೆಯನ್ನು ಇದೇ ದಿನಾಂಕ 20ರಂದು ನಗರದ ಎಸ್‌ಎಸ್ ಸ್ಪೆಷಾಲಿಟಿ ಕ್ಲಿನಿಕ್ ಮೋದಿ ಕಾಂಪೌಂಡ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ವಿವರಕ್ಕೆ ನಾಗರಾಜ್ (89042 43944), ಚೇತನ ಕುಮಾರ್ (99800 33277) ಅವರನ್ನು ಸಂಪರ್ಕಿಸಬಹುದು.

## ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜು. 14- ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಸದಸ್ಯರ ಮಕ್ಕಳಿಗೆ ಹಾಗೂ ದಾವಣಗೆರೆ ತಾಲ್ಲೂಕು ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ. 60 ಹಾಗೂ ಅದಕ್ಕೂ ಮೇಲ್ಪಟ್ಟು ಅಂಕ ಗಳಿಸಿ ಉತ್ತೀರ್ಣರಾದವರು ಇದೇ ದಿನಾಂಕ 31ರೊಳಗಾಗಿ ಸೊಸೈಟಿಯ ಕಛೇರಿಯಲ್ಲಿ ಅರ್ಜಿ ಸಲ್ಲಿಸಲು ಸಂಘದ ಅಧ್ಯಕ್ಷ ಎನ್. ರಂಗಸ್ವಾಮಿ ಕೋರಿದ್ದಾರೆ. ಮಾಹಿತಿಗೆ 08192 271329ಗೆ ಸಂಪರ್ಕಿಸಬಹುದಾಗಿದೆ.


ಬೇಕಾಗಿದ್ದಾರೆ

ಶ್ರೀ ಮರುಳಸಿದ್ದೇಶ್ವರ ರೈಸ್‌ಮಿಲ್ ಬಾಡ

ರೈಸ್‌ಮಿಲ್‌ನಲ್ಲಿ ಅಕೌಂಟೆಂಟ್ ಕೆಲಸ ಮಾಡಲು ಬಿ.ಕಾಂ. ಪದವೀಧರರು ಬೇಕಾಗಿದ್ದಾರೆ. ಸಂಪೂರ್ಣ ಕಂಪ್ಯೂಟರ್ ಜ್ಞಾನವಿರುವ ಮತ್ತು Tally ಅನುಭವವಿರುವವರಿಗೆ ಮೊದಲ ಆದ್ಯತೆ.

ಊಟ, ವಸತಿ ಉಚಿತವಿರುತ್ತದೆ.

ಫೋ. : 95919 72869, 99722 22663



ಹುಟ್ಟುಹಬ್ಬದ ಶುಭಾಶಯಗಳು





ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಆತ್ಮೀಯ ಸ್ನೇಹಿತ

ಬಿ.ಜೆ. ಹರೀಶ್

ಅವರಿಗೆ ಹಾರ್ದಿಕ ಶುಭಾಶಯಗಳು. ಹರೀಶ್ ಅವರಿಗೆ ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಶುಭ ಕೋರುವವರು : ✦ ಚಂದ್ರು ✦ ರಾಜೇಶ್ ದಾವಣಗೆರೆ.

## ಇಂದು ಸಂತ ಶ್ರೇಷ್ಠ ಶ್ರೀ ನಾಮದೇವ ಮಹಾರಾಜರ ಪಲ್ಲಕ್ಕಿ ಉತ್ಸವ




ದಾವಣಗೆರೆಯ ಶ್ರೀ ವಿಠ್ಠಲ ಮಂದಿರ (ಎಸ್.ಕೆ.ಪಿ. ರಸ್ತೆ) ಹಾಗೂ ಶ್ರೀ ನಾಮದೇವ ಭಜನಾ ಮಂದಿರ (ದೊಡ್ಡಪೇಟೆ) ಇವರ ಜಂಟಿ ಆಶ್ರಯದಲ್ಲಿ ಸಂತ ಶ್ರೇಷ್ಠ ಶಿರೋಮಣಿ ಶ್ರೀ ನಾಮದೇವ ಮಹಾರಾಜರ ಸಂಜೀವಿನಿ ಸೋಹಳಾ (ಪುಣ್ಯಾರಾಧನೆ) ಪ್ರಯುಕ್ತ ಇಂದು ಬೆಳಿಗ್ಗೆ 5 ಗಂಟೆಗೆ ಸಂತ ಮಂಡಳಿಯವರಿಂದ ಭಜನೆ, ಕಾಕಡಾರತಿ, ಬೆಳಿಗ್ಗೆ 7 ಗಂಟೆಗೆ ಹರಿಪಾಠ ಹ.ಭ.ಪ. ಮಂಜುನಾಥ ಪಿಸೆ ಸಂಗಡಿಗರಿಂದ, ಬೆಳಿಗ್ಗೆ 8.30 ಕ್ಕೆ ಸಂತರಿಂದ ಪ್ರವಚನ ನಡೆಯುವುದು. ಬೆಳಿಗ್ಗೆ 10 ರಿಂದ ಪ್ರಮುಖ ಬೀದಿಗಳಲ್ಲಿ ಸಂತ ಶ್ರೇಷ್ಠ ಶ್ರೀ ನಾಮದೇವ ಮಹಾರಾಜರ ಪಲ್ಲಕ್ಕಿ ಉತ್ಸವ ಹಾಗೂ ಗುಲಾಲ್ ಕಾರ್ಯಕ್ರಮ ನಡೆಯುವುದು. ಮಧ್ಯಾಹ್ನ 1.30 ಕ್ಕೆ ಮಹಾಮಂಗಳಾರತಿ ನಂತರ ದೊಡ್ಡಪೇಟೆಯ ನಾಮದೇವ ಭಜನಾ ಮಂದಿರದಲ್ಲಿ ಪ್ರಸಾದ ವಿನಿಯೋಗ ನಡೆಯಲಿದೆ.

## ನಗರಕ್ಕೆ ಇಂದು ಸಚಿವ ಎಸ್ಸೆಸ್ಸೆಂ



ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟ ಗಾರಿಕೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶಾಮ ನೂರು ಮಲ್ಲಿಕಾರ್ಜುನ್ ಅವರು ಇಂದು ರಾತ್ರಿ ನಗರಕ್ಕೆ ಆಗಮಿಸಿ ವಾಸ್ತವ್ಯ ಹೂಡಿದ್ದು, ಇಂದು ಮತ್ತು ನಾಳೆ ಸಾರ್ವಜನಿಕ ಭೇಟಿ ಮತ್ತು ಕುಂದು ಕೊರತೆಗಳ ವಿಚಾರಣೆ ಹಾಗೂ ಮತ ಕ್ಷೇತ್ರ ವ್ಯಾಪ್ತಿಯ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು.

# ಸಜ್ಜನರು - ದುರ್ಜನರ ನಡುವಿನ ಸಂಘರ್ಷ ಎಲ್ಲಾ ಕಾಲದಲ್ಲೂ ಇದೆ





ಸಿರಿಗೆರೆ, ಜು. 14 - ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂಘರ್ಷ ಸಹಜ. ಆದರೆ ಮನುಷ್ಯನ ಮನಸ್ಸಿ ನಲ್ಲೂ ಒಳ್ಳೆಯ ಮತ್ತು ಕೆಟ್ಟ ಆಲೋಚನೆಗಳಿರುತ್ತವೆ. ಒಳ್ಳೆಯದನ್ನು ಆರಿಸಿಕೊಳ್ಳುವ ಸಾತ್ವಿಕ ಬುದ್ದಿ, ಶಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಇಂದು ಸಿರಿಗೆರೆಯ ಶ್ರೀ ಗುರು ಶಾಂತೇಶ್ವರ ದಾಸೋಹ ಭವನದಲ್ಲಿ ಏರ್ಪಾಡಾಗಿದ್ದ 'ಮರಣವೇ ಮಹಾನವಮಿ' ನಾಟಕ ಪ್ರದರ್ಶನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಖ್ಯಾತ ಚಲನಚಿತ್ರ ನಿರ್ದೇಶಕ ಡಾ. ನಾಗತಿಹಳ್ಳಿ ಚಂದ್ರಶೇಖರ್ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಸಾಂಸ್ಕೃತಿಕ ವಾತಾವರಣ ಸೃಷ್ಟಿಸುವುದರಲ್ಲಿ ಮಠಗಳ ಪಾತ್ರ ದೊಡ್ಡದು ಎಂದರು.

### ತರಳಬಾಳು ಜಗದ್ಗುರು

ಸಿರಿಗೆರೆ ಬೃಹನ್ಮಠವು ಅನ್ನ, ಅಕ್ಷರ ದಾಸೋಹದ ಜೊತೆಗೆ ಅನೌಪಚಾರಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದೆ. ನಾಟಕ, ನೃತ್ಯ, ಸಂಗೀತ, ಕ್ರೀಡೆಗಳ ಮೂಲಕ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ಮಾಡಿಕೊಡುತ್ತಿದೆ. ನಗರಗಳಲ್ಲಿ ದೊರೆಯುವ ಸೌಲಭ್ಯಗಳನ್ನು ಗ್ರಾಮೀಣ ಮಕ್ಕಳಿಗೆ ನೀಡುತ್ತಿರುವುದು ಶ್ಲಾಘನೀಯ. ಇಲ್ಲಿ ಕಲಿತ ವಿದ್ಯಾರ್ಥಿಗಳು ಶಾಲೆ, ಗುರುಗಳ ಬಗ್ಗೆ ಕೃತಜ್ಞತಾ ಭಾವ ಹೊಂದಿರಬೇಕು ಎಂದರು.

ಭಾರತೀಯ ರಂಗಭೂಮಿಯ ಹೆಸರಾಂತ ಕಲಾವಿದರಾದ ಪ್ರಕಾಶ್ ಬೆಳವಾಡಿ ಅತಿಥಿಗಳಾಗಿ ಭಾಗವಹಿಸಿದ್ದರು. ವೇದಿಕೆಯಲ್ಲಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೊ. ಎಸ್.ಬಿ. ರಂಗನಾಥ್, ಆಡಳಿತಾಧಿಕಾರಿ ಡಾ. ಎಚ್.ವಿ. ವಾಮದೇವಪ್ಪ, ಸಂಗೀತಗಾರ ತೋಟಪ್ಪ ಉತ್ತಂಗಿ, ರಂಗಕರ್ಮಿ ಮಾಲತೇಶ ಬಡಿಗೇರ, ಕಲಾ ಸಂಘದ ರಾಜಶೇಖರಯ್ಯ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ವಿದ್ಯಾರ್ಥಿಗಳಿಂದ ವಚನ ಗಾಯನ, ವಚನ ನೃತ್ಯ, ಮಲ್ಲಕಂಬ ಪ್ರದರ್ಶನ ನಡೆಯಿತು. ಬನವಾಸಿ ದೇವರಾಜ್ ಸ್ವಾಗತಿಸಿದರು. ಸಾರ್ಥವಳ್ಳಿ ಗಣೇಶ್ ವಂದಿಸಿದರು.

ಕಾರ್ಯಕ್ರಮದ ನಂತರ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ರಚಿಸಿ, ಮಾಲತೇಶ ಬಡಿಗೇರ ನಿರ್ದೇಶಿಸಿದ 'ಮರಣವೇ ಮಹಾನವಮಿ' ನಾಟಕ ಪ್ರದರ್ಶನಗೊಂಡಿತು.

ಜೀವನದಲ್ಲಿ ಸವಾಲುಗಳೆಂಬ ಕತ್ತಿಗಳು ಮನಸ್ಸಿನ ಮೇಲೆ ಘಾಸಿ ಮಾಡಿದಾಗ ವಿಚಲಿತರಾಗಬಾರದು. ಧೈರ್ಯದಿಂದ ಮುನ್ನಡೆಯುವುದನ್ನು ರೂಢಿಸಿಕೊಳ್ಳಬೇಕು.
- ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ

ಪಠ್ಯಪುಸ್ತಕ, ತರಗತಿ ಕೋಣೆಗಳಾಚೆ ಸಿಗುವುದು ನಿಜವಾದ ಶಿಕ್ಷಣ. ಇಂದಿನ ವಿದ್ಯಾರ್ಥಿಗಳು ಪರಿಸರದಲ್ಲಿರುವ ಮಣ್ಣು, ನೀರು, ಗಾಳಿಯ ಬಗ್ಗೆ ಸೂಕ್ಷ್ಮಗ್ರಾಹಿಗಳಾಗಬೇಕು.
- ನಾಗತಿಹಳ್ಳಿ ಚಂದ್ರಶೇಖರ್, ನಿರ್ದೇಶಕ

ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ಬರೆದಿರುವ ಮರಣವೇ ಮಹಾನವಮಿ, ವಿಶ್ವಬಂಧು ಮರುಳಸಿದ್ಧ, ಶರಣಸತಿ ಲಿಂಗಪತಿ ಈ ಮೂರೂ ನಾಟಕಗಳು ಕನ್ನಡ ರಂಗಭೂಮಿಯ ಶ್ರೇಷ್ಠ ನಾಟಕಗಳು. ಈ ಮೂರೂ ನಾಟಕಗಳನ್ನು ನಿರ್ದೇಶನ ಮಾಡುವ ಭಾಗ್ಯ ನನಗೆ ದೊರಕಿದೆ.
- ಮಾಲತೇಶ ಬಡಿಗೇರ, ರಂಗ ನಿರ್ದೇಶಕ

ಶಾಲಾ ಶಿಕ್ಷಣದಿಂದ ಪದವಿ, ಉದ್ಯೋಗ, ಉತ್ತಮ ಸಂಬಳ ಪಡೆಯಬಹುದು. ಆದರೆ ಕಲೆ, ಸಾಹಿತ್ಯವು ವ್ಯಕ್ತಿತ್ವ ಕಟ್ಟಿಕೊಡುತ್ತದೆ. ಶ್ರದ್ಧೆ, ಪ್ರಾಮಾಣಿಕತೆಯಿಂದ ಮಾಡಿದ ಯಾವುದೇ ಕೆಲಸಗಳು ಒಳ್ಳೆಯ ಫಲಿತಾಂಶ ನೀಡುತ್ತವೆ.
- ಪ್ರಕಾಶ್ ಬೆಳವಾಡಿ, ನಟ, ನಿರ್ದೇಶಕ, ಬೆಂಗಳೂರು.

## ಜಿಎಸ್ಟಿ ಸೋರಿಕೆ ತಡೆಗೆ ಗಂಭೀರ ಪ್ರಯತ್ನ



ಬೆಂಗಳೂರು, ಜು.14 - ರಾಜ್ಯದಲ್ಲಾಗುತ್ತಿರುವ ಸರಕು ಸೇವಾ ತೆರಿಗೆ ಸೋರಿಕೆ ತಡೆಗೆ ಸರ್ಕಾರ ಗಂಭೀರ ಪ್ರಯತ್ನ ಮಾಡಲಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್ ವಿಧಾನಸಭೆಯಲ್ಲಿ ತಿಳಿಸಿದರು.

2023ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ತಿದ್ದುಪಡಿ ವಿಧೇಯಕದ ಪರ್ಯಾಲೋಚನೆ ಸಂದರ್ಭದಲ್ಲಿ ಶಾಸಕರು ಮಾಡಿದ ಸಲಹೆಗೆ ಪ್ರತಿಕ್ರಿಯಿಸಿದ ಅವರು, ಜಲ್ಲಿ, ಕ್ರಷರ್, ಅಡಿಕೆ, ಸ್ಕ್ರ್ಯಾಪ್, ಸಿಮೆಂಟ್ ಸೇರಿದಂತೆ ಎಲ್ಲೆಲ್ಲಿ ತೆರಿಗೆ ತಪ್ಪಿಸಲಾಗುತ್ತಿದೆಯೋ ಅದನ್ನು ಪತ್ತೆ ಹಚ್ಚಿ ತಡೆಯಲು ಸರ್ಕಾರ ಕ್ರಮ ಕೈಗೊಳ್ಳಲಿದೆ. ಈ ಸಂಬಂಧ ಹಿರಿಯ ಅಧಿಕಾರಿಗಳಿಗೆ ಸೂಚಿಸುವುದಾಗಿ ಭರವಸೆ ನೀಡಿದರು.

2017-18ನೇ ಸಾಲಿನಲ್ಲಿ 44,816 ಕೋಟಿ ರೂ. ನಷ್ಟಿದ್ದ ರಾಜ್ಯದ ಜಿಎಸ್‌ಟಿ ಸಂಗ್ರಹವು 2022-23ನೇ ಸಾಲಿನಲ್ಲಿ 81,848 ಕೋಟಿ ರೂ.ಗೆ ಹೆಚ್ಚಾಗಿದೆ. ದೇಶದಲ್ಲಿ ಅತಿಹೆಚ್ಚು ಜಿಎಸ್‌ಟಿ ಪಾವತಿಸುವ ರಾಜ್ಯ ನಮ್ಮದಾಗಿದೆ ಎಂದು ಹೇಳಿದರು.

ತಿದ್ದುಪಡಿ ವಿಧೇಯಕದಲ್ಲಿ 22 ತಿದ್ದುಪಡಿಗಳಿದ್ದು ಆರು ವರ್ತಕ ಸ್ನೇಹಿಯಾಗಿವೆ. 16 ಸುಗಮ ತೆರಿಗೆ ಅನುಸರಣಾ ಉಪಕ್ರಮಗಳಿವೆ. ವರ್ತಕ ಸ್ನೇಹಿ ಉಪಕ್ರಮದಲ್ಲಿ ಇ-ಕಾಮರ್ಸ್ ಮೂಲಕ ಸರಕು ಪೂರೈಕೆಗೆ ಅವಕಾಶ ಕಲ್ಪಿಸಲಾಗಿದೆ. ವಿಳಂಬ ಮರುಪಾವತಿಗೆ ಬಡ್ಡಿ ಲೆಕ್ಕಾಚಾರ ಮಾಡುವ ಸರಳೀಕರಣ ಮಾಡಲಾಗಿದೆ. ಜಿಎಸ್‌ಟಿ ಪರಿಷತ್‌ನಲ್ಲಿ ಆಗಿರುವ ಚರ್ಚೆಗಳ ಹಿನ್ನೆಲೆಯಲ್ಲಿ ವರ್ತಕರಿಗೆ ಸಹಾಯಕವಾಗುವ ರೀತಿಯಲ್ಲಿ ತಿದ್ದುಪಡಿ ತರಲಾಗಿದೆ ಎಂದರು.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಕೆಲವು ರಾಜ್ಯಗಳು ಉತ್ಪಾದಕ ರಾಜ್ಯಗಳಾಗಿದ್ದರೆ, ಕೆಲವು ಬಳಕೆ ರಾಜ್ಯಗಳಾಗಿವೆ. ತೆರಿಗೆ ಸಂಕೀರ್ಣವನ್ನು ಸರಳಗೊಳಿಸುವುದು ಸುಲಭವಲ್ಲ ಎಂದರು.

ಆಗಿಂದಾಗ್ಗೆ ಬದಲಾವಣೆಗಳಾಗುತ್ತವೆ. ಸಾಕಷ್ಟು ಸವಾಲುಗಳಿವೆ. ಯಾವುದೇ ಕಾರಣಕ್ಕೂ ಆದಾಯ ಕಡಿಮೆಯಾಗಬಾರದು. ತೆರಿಗೆ ಪಾವತಿ ಹೆಚ್ಚಾದಂತೆ ಆದಾಯವೂ ಹೆಚ್ಚಾಗಲಿವೆ ಎಂದು ಹೇಳಿದರು.

## ಐಎಎಸ್ ಅಧಿಕಾರಿಗಳಿಗೆ ಹಳೆ ಪಿಂಚಣಿ ಅವಕಾಶ

ನವದೆಹಲಿ, ಜು. 14 - ಐ.ಎ.ಎಸ್., ಐ.ಪಿ.ಎಸ್. ಹಾಗೂ ಐ.ಎಫ್.ಒ.ಎಸ್. ಅಧಿಕಾರಿಗಳು ಹಳೆಯ ಪಿಂಚಣಿ ಯೋಜನೆ ಲಾಭ ಪಡೆಯಲು ಕೇಂದ್ರ ಸರ್ಕಾರ ಒಂದು ಬಾರಿಯ ಅವಕಾಶ ನೀಡಿದೆ. ಆದರೆ, ಇವರು ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್.ಪಿ.ಎಸ್.) ಜಾರಿಗೆ ಬಂದ ಡಿಸೆಂಬರ್ 22, 2003ಕ್ಕಿಂತ ಮುಂಚೆ ನೇಮಕಗೊಂಡವರಾಗಿರಬೇಕು.

ಹಲವಾರು ನ್ಯಾಯಾಲಯಗಳು ನೀಡಿದ ತೀರ್ಪಿನ ಆಧಾರದ ಮೇಲೆ ಈ ಕ್ರಮ ತೆಗೆದುಕೊಳ್ಳಲಾಗಿದೆ.

## 10 ರೂಪಾಯಿ ನೋಟು ಬೀಳಿಸಿ 1.10 ಲಕ್ಷ ಎಗರಿಸಿದ ಕಳ್ಳರು

ಹರಿಹರ, ಜು. 14 - 10 ರೂಪಾಯಿ ಮುಖ ಬೆಲೆಯ ಐದು ನೋಟುಗಳನ್ನು ರಸ್ತೆ ಮೇಲೆ ತೋರಿಸಿ, ಬೈಕ್‌ನಲ್ಲಿದ್ದ 1.10 ಲಕ್ಷ ರೂ.ಗಳನ್ನು ಕದ್ದು ಪರಾರಿಯಾಗಿರುವ ಘಟನೆ ಹರಿಹರ ನಗರದ ಹಳೇ ಪಿಬಿ ರಸ್ತೆಯ ಬಳಿಯ ಕೆನರಾ ಬ್ಯಾಂಕ್ ಮುಂಭಾಗ ನಡೆದಿದೆ.

ಹರಿಹರ ತಾಲ್ಲೂಕು ಬನ್ನಿಕೋಡು ಗ್ರಾಮದ ಎಂ.ಆರ್. ರಾಮಪ್ಪ ಅವರು ಭತ್ತ ಬೆಳೆದು, ಅದರಿಂದ ಬಂದ ಹಣ ರೂ. 1.10 ಲಕ್ಷ ಗಳನ್ನು ತಮ್ಮ ಪತ್ನಿ ರತ್ನಮ್ಮ ಅವರ ಕೆನರಾ ಬ್ಯಾಂಕ್ ಖಾತೆಯಲ್ಲಿ ಜಮಾ ಮಾಡಿದ್ದರು.


ಗುರುವಾರ ಹಣ ಬಿಡಿಸಿಕೊಂಡು ಬರಲು ಪತ್ನಿ ಜೊತೆ ಬೈಕ್‌ನಲ್ಲಿ ಹರಿಹರ ನಗರಕ್ಕೆ ಬಂದು, 1.10 ಲಕ್ಷ ರೂ. ಹಣ ಬಿಡಿಸಿಕೊಂಡು ಪ್ಲಾಸ್ಟಿಕ್ ಕವರ್‌ನಲ್ಲಿ ಹಣ ಹಾಗೂ ಪಾಸ್ ಬುಕ್, ಆಧಾರ್ ಕಾರ್ಡ್ ಇಟ್ಟುಕೊಂಡು ಬೈಕ್ ಸೈಡ್ ಬ್ಯಾಗ್‌ನಲ್ಲಿ ಕವರ್ ಇಟ್ಟಿದ್ದಾರೆ.

ಆಗ ಯಾರೋ ಒಬ್ಬ ವ್ಯಕ್ತಿ ಬಂದು ನಿಮ್ಮ ಹಣ ಕೆಳಗೆ ಬಿದ್ದಿದೆ ಎಂದು ಹತ್ತು ರೂಪಾಯಿಯ ಐದು ನೋಟುಗಳನ್ನು ತೋರಿಸಿದ್ದಾರೆ. ಇವರು ಬಿದ್ದ ನೋಟುಗಳನ್ನು ತೆಗೆದುಕೊಂಡು ಬೈಕ್ ಹತ್ತಿಕೊಂಡು ಹೋಗಿದ್ದು, ತುಸು ಸಮಯದ ನಂತರ ಸೈಡ್ ಕವರ್ ನೋಡಿದಾಗ ಹಣದ ಕವರ್ ಕಳ್ಳತನವಾಗಿರುವುದು ಗೊತ್ತಾಗಿದೆ. ಈ ಬಗ್ಗೆ ಹರಿಹರ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## ಗ್ರಾಮಾಂತರದಲ್ಲಿಂದು ವಿದ್ಯುತ್ ವ್ಯತ್ಯಯ

ಆವರಗೊಳ್ಳ, ಕಕ್ಕರಗೊಳ್ಳ, ಕೋಡಿಹಳ್ಳಿ, ಯರಗುಂಟೆ, ಕರೂರು, ಅಶೋಕನಗರ, ಕಲ್ಪನಹಳ್ಳಿ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 5 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಐಪಿ ಫೀಡರ್‌ಗಳ ಬೆಳಗಿನ ಪಾಳಿಯ ಇಂದಿನ ವಿದ್ಯುತ್ ವ್ಯತ್ಯಯ ವೇಳೆಯಲ್ಲಿ ಹಿಂದಿನ ರಾತ್ರಿ ವೇಳೆಯಲ್ಲಿ ವಿದ್ಯುತ್ ನೀಡಲಾಗುವುದು ಎಂದು ಬೆಸ್ಕಾಂ ಅಭಿಯಂತರರು ತಿಳಿಸಿದ್ದಾರೆ.


11ನೇ ವರ್ಷದ ಪುಣ್ಯಸ್ಮರಣೆ



ಜನನ: 16 ಏಪ್ರಿಲ್ 1929
ಮರಣ: 15 ಜುಲೈ 2012

ಶರಣ ಚಂದಪ್ಪರ ಎ.ಚಂದಪ್ಪನವರು
ಅರಳೀಕಟ್ಟೆ, ಚನ್ನಗಿರಿ ತಾಲ್ಲೂಕು.
ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ
ಧರ್ಮಪತ್ನಿ ಶ್ರೀಮತಿ ಶಾಂತಮ್ಮ ಮತ್ತು ಮಕ್ಕಳು
ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಚಂದಪ್ಪರ ವಂಶಸ್ಥರು,
ಅರಳೀಕಟ್ಟೆ, ಗ್ರಾಮಸ್ಥರು ಮತ್ತು ಬಂಧು-ಮಿತ್ರರು.



ಇಪ್ಪತ್ತನೇ ವರ್ಷದ ಪುಣ್ಯಸ್ಮರಣೆ



ಕಾಯಕ ಯೋಗಿಗಳೂ, ಪ್ರಗತಿಪರ ಕೃಷಿಕರೂ, ಪ್ರಸಿದ್ಧ ವರ್ತಕರೂ,
ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ
ಲಿಂ|| ಶ್ರೀ ಶಾಮನೂರು ಬಸವರಾಜಪ್ಪ
ಇವರು ಶಿವೈಕ್ಯರಾಗಿ ಇಂದಿಗೆ ಇಪ್ಪತ್ತು ವರ್ಷಗಳಾದವು.
ಸದಾ ಅವರ ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ...

ಪತ್ನಿ : ದಿ|| ಶ್ರೀಮತಿ ಸುಶೀಲಮ್ಮ ಬಸವರಾಜಪ್ಪ
ಸಹೋದರ : ಡಾ. ಶಾಮನೂರು ಶಿವಶಂಕರಪ್ಪ
ಶಾಸಕರು ಮತ್ತು ಮಾಜಿ ಸಚಿವರು, ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ.

ಡಾ|| ಎಸ್.ಬಿ.ಮುರುಗೇಶ್, ಜ್ಯೋತಿ ಮುರುಗೇಶ್, ಆಕರ್ಷ್, ಅಲಂಕೃತಾ, ಧ್ರುವ ಮಾಮ್ಮಣ್ಣಿ
ಶ್ರೀಮತಿ ರತ್ನಾ, ಜಿ.ಎಸ್.ಪರಮೇಶ್ವರಗೌಡ್ರು, ಸಂದೀಪ್, ಶ್ವೇತಾ, ಶೌರ್ಯ, ಸ್ವರೂಪ್, ಪ್ರಿಯಾ, ರೇಯಾಂಶ್
ಶ್ರೀಮತಿ ಉಮಾ, ಡಾ|| ಧನ್ಯಪ್ರಕಾಶ್, ಡಾ|| ಸವೇಶ್, ಚಿ|| ಶ್ರಿಕಾ
ಶ್ರೀಮತಿ ವೀಣಾ, ಕಿಶೋರ್‌ಗೌಡ, ಚಿ|| ಸೇಜಲ್
ಶ್ರೀಮತಿ ಅನುಪಮಾ, ಚಂದ್ರಶೇಖರ್, ಚಿ|| ಸಮೃದ್ಧ್, ಸಮ್ಮಿತ
ಶ್ರೀಮತಿ ಡಾ|| ಮಂಜುಳ, ಡಾ|| ಶಿವಶಂಕರ್, ಡಾ|| ಸಂಜನ, ಸೆಜುತಿ, ಹರ್ಷಿತ್
ಶ್ರೀಮತಿ ಸುಧಾ, ರಾಜೇಂದ್ರ ಪಾಟೀಲ್, ಶ್ರೀಮತಿ ಸುಪ್ರಿಯಾ, ಪ್ರತೀಕ್ ಸಬರ್‌ವಾಲ್, ಮೈರಾ
ಶ್ರೀ ಎಸ್.ಎಸ್.ಬಕ್ಕೇಶ್, ಪ್ರೀತಿ ಬಕ್ಕೇಶ್, ಆಶಿಕ್, ಶ್ರೀಮತಿ ಸಮಧ್ಯ, ಅಕ್ಷತಾ, ಅಭಿಷೇಕ್ ಪಾಟೀಲ್, ಅದಿತ್
ಶ್ರೀ ಎಸ್.ಎಸ್. ಗಣೇಶ್, ರೇಖಾ ಗಣೇಶ್, ಅಭಿಜಿತ್, ಶ್ರೀಮತಿ ಸ್ವಾತಿ, ಸುವೀರ್
ಶ್ರೀಮತಿ ಆಂಚಲ್, ಪ್ರಶಾಂತ್ ಶೆಟ್ಟರ್, ಅರ್ರಾನ, ಚಿ|| ಅಖಿಲಾ
ಶ್ರೀಮತಿ ಡಾ|| ಶೈಲಾ, ಡಾ|| ಅರ್ಪಣ್ ಭಟ್ಟಾಚಾರ್ಯ, ಚಿ|| ಶ್ರೇಯಶಿ, ಅಮರ್ತ್ಯ
ಶ್ರೀಮತಿ ಮೀನಾ, ಡಾ|| ಶರಣ್ ಪಾಟೀಲ್, ಚಿ| ಸೃಷ್ಟಿ, ಸಂಸ್ಕೃತಿ
ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್, ಗಣಿ, ಭೂ ವಿಜ್ಞಾನ, ತೋಟಗಾರಿಕೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಚಿ|| ಸಮರ್ಥ್, ಶ್ರೇಷ್ಠಾ, ಶಿವ

ಹಾಗೂ ಶಾಮನೂರು ಮನೆತನದ ಸಮಸ್ತ ಸದಸ್ಯರು, ಬಂಧುಗಳು-ಮಿತ್ರರು ಹಾಗೂ
ಶಾಮನೂರು ಸಮೂಹದ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳ ಸಮಸ್ತ ಸಿಬ್ಬಂದಿಗಳು ಹಾಗೂ ಹಿತೈಷಿಗಳು.